ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 6 ಶನಿವಾರ 2022

ಸಂಪುಟ: 43 | ಸಂಚಿಕೆ: 112 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ
Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಕೊಡಗಲ್ಲಿ ಭಾರೀ ಮಳೆಗೆ ಮುಳುಗಿದ ತ್ರಿವೇಣಿ ಸಂಗಮ

ಭಾಗಮಂಡಲ– ಅಯ್ಯಂಗೇರಿ ರಸ್ತೆ ಸಂಚಾರ ಬಂದ್

■ ಪುಟ–6

ದಸರಾಗೆ 17 ಆನೆ ಅರ್ಹ

ಜಂಬೂಸವಾರಿಯಲ್ಲಿ 14 ಭಾಗಿ; 3 ಸ್ಟ್ಯಾಂಡ್‌ಬೈ

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಆ.5– ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಒಟ್ಟು 17 ಆನೆಗಳು ಅರ್ಹತೆ ಪಡೆದಿವೆ. ಇದಕ್ಕೆ ಸರ್ಕಾರವೂ ಅನುಮೋದಿಸಿದೆ. ಆದರೆ ಜಂಬೂಸವಾರಿಯಲ್ಲಿ 14 ಆನೆಗಳು ಮಾತ್ರ ಪಾಲ್ಗೊಳ್ಳಲಿವೆ.

ಕೊರೊನಾ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷದಿಂದ ಅರಮನೆ ಆವರಣಕ್ಕಷ್ಟೇ ಸೀಮಿತವಾಗಿದ್ದ ನಾಡಹಬ್ಬ ದಸರಾ ಮಹೋತ್ಸವವನ್ನು ಈ ಬಾರಿ ವಿಜೃಂಭಣೆಯಿಂದ ಆಚರಿಸಲು ಸರ್ಕಾರ ಉದ್ದೇಶಿಸಿರುವುದರಿಂದ, ಈ ಬಾರಿ 14 ಆನೆಯನ್ನು ಕರೆತರಲು ಉದ್ದೇಶಿಸಲಾಗಿದೆ. ಮುಂಬರುವ ವರ್ಷಗಳಲ್ಲಿ ಅಂಬಾರಿ ಹೊರುವ ಜವಾಬ್ದಾರಿಯನ್ನು ಹೊಸ ಆನೆಗೆ ವಹಿಸುವ ನಿಟ್ಟಿನಲ್ಲಿ ಅರಣ್ಯ ಇಲಾಖೆ ಚಿಂತನೆ ನಡೆಸಿದ್ದು, ಮೈಸೂರು ವನ್ಯಜೀವಿ ವಿಭಾಗದ ಡಿಸಿಎಫ್ ಡಾ.ವಿ.ಕರಿಕಾಳನ್ ಅರಣ್ಯ ಇಲಾಖೆ ಪಿಸಿಸಿಎಫ್ ಕಚೇರಿಗೆ ಪತ್ರ ಬರೆದು 17 ಆನೆಗಳಿಗೆ ಅನುಮತಿ ನೀಡುವಂತೆ ಕೋರಿದ್ದರು. ಈ ಪತ್ರದ ಮೇರೆಗೆ ಆ.3ರಂದು ವನ್ಯಜೀವಿ ವಿಭಾಗದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಅನುಮತಿ ನೀಡಿದ್ದು, ಅದರಲ್ಲಿ ಜಂಬೂಸವಾರಿಯಲ್ಲಿ ಪಾಲ್ಗೊಳ್ಳಲು 14 ಆನೆ ಹಾಗೂ 3 ಆನೆ ಸ್ಟ್ಯಾಂಡ್ ಬೈ ಆಗಿ ಅನುಮತಿ ನೀಡಿ, ಆನೆಗಳಿರುವ ಕ್ಯಾಂಪ್‌ಗಳ ಅಧಿಕಾರಿಗಳಿಗೆ ಆದೇಶ ಹೊರಡಿಸಿದ್ದಾರೆ.

14 ಆನೆಗಳ ಪಟ್ಟಿ ಬಿಡುಗಡೆ: 17 ಆನೆಗಳಿಗೆ ಅನುಮತಿ ದೊರೆತಿದ್ದರೂ, ದಸರಾ ಮಹೋತ್ಸವದಲ್ಲಿ 14 ಆನೆಗಳನ್ನು ಮಾತ್ರ ಕರೆ ತರಲಾಗುತ್ತಿದೆ. ಅಂತಿಮ ಪಟ್ಟಿಯನ್ನು ಶುಕ್ರವಾರ ಸಂಜೆ ಬಿಡುಗಡೆ ಮಾಡಲಾಗಿದೆ. ಅದರಲ್ಲಿ ಮೊದಲ ಹಂತದಲ್ಲಿ ಆ.7ರಂದು ಅಂಬಾರಿ ಆನೆ ಅಭಿಮನ್ಯು (57ವರ್ಷ), ಭೀಮ (22), ಮಹೇಂದ್ರ(39), ಅರ್ಜುನ(63), ವಿಕ್ರಮ (59), ಧನಂಜಯ (44), ಕಾವೇರಿ(45), ಚೈತ್ರ(49), ಲಕ್ಷ್ಮೀ(21) ಕರೆತರಲಾಗುತ್ತಿದೆ. ಎರಡನೇ ತಂಡದಲ್ಲಿ ಗೋಪಾಲಸ್ವಾಮಿ (39), ಗೋಪಿ(41), ಶ್ರೀರಾಮ (40), ವಿಜಯ(63), ಪಾರ್ಥಸಾರಥಿ(18) ಮೈಸೂರಿಗೆ ಆಗಮಿಸಲಿವೆ.



ಸ್ಟ್ಯಾಂಡ್ ಬೈ: ಸುಗ್ರೀವ(40), ಕುಂತಿ(36), ಗಣೇಶ(39) ಕಾಯ್ದಿಟ್ಟ ಆನೆಗಳಾಗಿವೆ. ಮೈಸೂರು ಅರಮನೆ ಆವರಣದಲ್ಲಿ ▶ 8ನೇ ಪುಟಕ್ಕೆ

ಅರಣ್ಯ ಸಿಬ್ಬಂದಿ ಮೇಲೆ ಹರಿಹಾಯ್ದ ಶಾಸಕ ಸುರೇಶ್‌ಗೌಡ

- ಅವಾಚ್ಯ ಶಬ್ದಗಳಿಂದ ಆವಾಜ್
- ಜಂಟಿ ಸರ್ವೆ ಆಗುವವರೆಗೆ ಅತ್ತ ತಲೆ ಹಾಕದಂತೆ ವಾರ್ನಿಂಗ್
- ಹಿರಿಯ ಅಧಿಕಾರಿಗಳಿಗೂ ಶಾಸಕರ ಎಚ್ಚರಿಕಾ ಪಾಠ
- ಅರಣ್ಯ ಸಿಬ್ಬಂದಿ ಕಂಗಾಲು



ನಾಗಮಂಗಲ, ಆ.5–ತಮ್ಮ ಇಲಾಖೆಗೆ ಸೇರಿದ ಜಾಗದ ರಕ್ಷಣೆಗಾಗಿ ಪೊಲೀಸರ ಸಹಕಾರದೊಂದಿಗೆ ಟ್ರಂಚ್ ತೋಡುತ್ತಿದ್ದ ಅರಣ್ಯಾಧಿಕಾರಿಗಳ ಮೇಲೆ ನಾಗಮಂಗಲ ಶಾಸಕ ಸುರೇಶ್‌ಗೌಡ ಗಲಾಟೆ ಮಾಡಿ, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಲ್ಲದೆ, ಬೆದರಿಕೆ ಹಾಕಿದ ಘಟನೆ ತಾಲೂಕಿನ ಮಾಲತಿ ಗ್ರಾಮದಲ್ಲಿ ಶುಕ್ರವಾರ ಮಧ್ಯಾಹ್ನ ನಡೆದಿದೆ.

ಮಾಲತಿ ಗ್ರಾಮದ ಸರ್ವೆ ನಂ.135 ಅರಣ್ಯ ಇಲಾಖೆಗೆ ಸೇರಿದ್ದು ಎನ್ನಲಾಗಿದ್ದು, ಈ ಭೂಮಿಯಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಸಸಿ ನೆಟ್ಟು ಪೋಷಿಸಿಕೊಂಡು ಬರುತ್ತಿದ್ದಾರೆ. ಇತ್ತೀಚೆಗೆ ಕೆಲ ರೈತರು ಅಲ್ಲಿನ ಮರಗಳನ್ನು ಕಡಿದು ರಾತ್ರೋರಾತ್ರಿ ಜೆಸಿಬಿಯಿಂದ ಸಮತಟ್ಟು ಮಾಡಿ ತೆಂಗಿನ ಸಸಿ ನೆಟ್ಟಿದ್ದಾರೆ ಎಂದು ಹೇಳಲಾಗಿದ್ದು, ಈ ಹಿನ್ನೆಲೆಯಲ್ಲಿ ತಮ್ಮ ಇಲಾಖೆಗೆ ಸೇರಿದ ಜಾಗದ ಬಂದೋಬಸ್ತ್‌ಗಾಗಿ ಇಂದು ಅರಣ್ಯ ಇಲಾಖೆ ಅಧಿಕಾರಿ ಹಾಗೂ ಸಿಬ್ಬಂದಿ ಪೊಲೀಸ್ ರಕ್ಷಣೆಯೊಂದಿಗೆ ಟ್ರಂಚ್ ತೋಡುತ್ತಿದ್ದರು.

ಈ ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕಾಗಮಿಸಿದ ಶಾಸಕ ಸುರೇಶ್‌ಗೌಡ, ಅರಣ್ಯಾಧಿಕಾರಿಗಳನ್ನು ಮನಸ್ಸೋ ಇಚ್ಛೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಲ್ಲದೇ, ಇದೇ ರೀತಿ ಮುಂದುವರೆದರೆ ನಿಮಗೆ ಬೆಂಕಿ ಹಚ್ಚಬೇಕಾಗುತ್ತದೆ ಎಂದು ಬೆದರಿಕೆ ಹಾಕಿದ್ದಾರೆ. ಶಾಸಕರು ಅರಣ್ಯಾಧಿಕಾರಿಗಳ ಅವಾಚ್ಯ ಶಬ್ದಗಳಿಂದ ಹೀನಾಯವಾಗಿ ನಿಂದಿಸಿ ಆರ್ಭಟಿಸಿದ ವಿಡಿಯೋ ವೈರಲ್ ಆಗಿದ್ದು, ತೀವ್ರ ಚರ್ಚೆಗೆ ಗ್ರಾಸವಾಗಿದೆ. ಜುಲೈ 28ರಂದು ರಾತ್ರಿ ಮರ ಕಡಿಯುತ್ತಿದ್ದವರನ್ನು ಬೆದರಿಸಲು ಅರಣ್ಯ ಸಿಬ್ಬಂದಿ ಗಾಳಿಯಲ್ಲಿ ಗುಂಡು ಹಾರಿಸಿದ್ದ ▶ 8ನೇ ಪುಟಕ್ಕೆ



ಬಿಜೆಪಿ ಮುಖಂಡರೂ ಆದ ಮೈಸೂರು ಪೇಂಟ್ಸ್ ಮತ್ತು ವಾರ್ನಿಷ್ ಅಧ್ಯಕ್ಷ ರಘು ಕೌಟಿಲ್ಯ ಅವರ ಮನೆಯಲ್ಲಿ ಭಕ್ತಿಭಾವದ ವರಮಹಾಲಕ್ಷ್ಮೀ ವ್ರತವನ್ನು ಅವರ ಪುತ್ರಿ ಕುಮಾರಿ ವರ್ಣಿಕಾ ಆಚರಿಸಿದರು.

ವಿದ್ಯಾರ್ಥಿಗೆ ಕಿರುಕುಳ: ಪೋಷಕರಿಂದ ಡಿಸಿಗೆ ದೂರು

ಮೈಸೂರು, ಆ.5–ಜಾತಿ ಕಾರಣಕ್ಕಾಗಿ ವಿದ್ಯಾರ್ಥಿಯೋರ್ವನಿಗೆ ಕಿರುಕುಳ ನೀಡಿ ಶಾಲೆಯಿಂದ ಅಮಾನತುಪಡಿಸಲಾಗಿದೆ ಎಂದು ದಲಿತ ಮಹಾಸಭಾ ರಾಜ್ಯ ಸಂಚಾಲಕ ಎಸ್.ಸುಂದರ್ ಹಣಕೊಳ ಅವರು ಜಿಲ್ಲಾಧಿಕಾರಿಗಳಿಗೆ ದೂರು ಸಲ್ಲಿಸಿದ್ದಾರೆ.

ಸುಂದರ ಹಣಕೊಳ ಪುತ್ರ ಸು.ನಾ.ಮಧುಕರ್ ಉಡುಪ ಮೈಸೂರಿನ ಬೋಗಾದಿ 2ನೇ ಹಂತದಲ್ಲಿರುವ ರಾಯಲ್ ಕಾನ್‌ಕರ್ಡ್ (ವಿದ್ಯಾಶ್ರಮ) ಶಾಲೆಯಲ್ಲಿ 10ನೇ ತರಗತಿ ವ್ಯಾಸಂಗ ಮಾಡುತ್ತಿದ್ದಾನೆ. ಈತ ಪರಿಶಿಷ್ಟ ಜಾತಿಗೆ ಸೇರಿದವನಾಗಿದ್ದು, ಶಾಲಾ ಶಿಕ್ಷಕಿ ಸ್ವರೂಪ ಎಂಬುವರಿಗೆ ಜಾತಿ ಪ್ರಮಾಣ ಪತ್ರ ನೀಡಿದಾಗ ಅವರು, ಪರಿಶಿಷ್ಟ ಜಾತಿ ಎಂಬುದನ್ನು ನೋಡಿದ ತಕ್ಷಣ 'ನೀನು ನೋಡಲು ಬ್ರಾಹ್ಮಣನಂತೆ ಇದ್ದೀಯಾ, ಸುಳ್ಳು ಹೇಳಿ ಶಾಲೆಗೆ ಸೇರಿಕೊಂಡಿದ್ದಿಯಾ, ನಿನ್ನನ್ನು ಶಾಲೆ ಬಿಟ್ಟು ಓಡಿಸುತ್ತೇನೆ' ಎಂದು ಹೇಳಿದ್ದಲ್ಲದೇ, ಕೆಲವು ವಿದ್ಯಾರ್ಥಿಗಳನ್ನು ಎತ್ತಿಕಟ್ಟಿ ಮಧುಕರ್ ಮೇಲೆ ಹಲ್ಲೆ ಮಾಡಿಸಿದ್ದಾರೆ ಎಂದು ಆರೋಪಿಸಲಾಗಿದೆ. ಶಾಲೆಯಲ್ಲಿ ಸ್ಟೂಡೆಂಟ್ ಹೌಸ್ ಕಾಲರ್ ಚುನಾವಣೆಗೆ ಸ್ಪರ್ಧಿಸಲು ಮಧುಕರ್ ಮುಂದಾದಾಗ ಶಿಕ್ಷಕಿ ಸ್ವರೂಪ ಅವರು ಕೆಲ ವಿದ್ಯಾರ್ಥಿಗಳನ್ನು ಎತ್ತಿಕಟ್ಟಿ ಆತನ ಮೇಲೆ ಹಲ್ಲೆ ಮಾಡಿಸಿದ್ದಲ್ಲದೇ, ಪ್ರಾಂಶುಪಾಲರಿಗೆ ಹೇಳಿ ಶಾಲೆಯಿಂದ ಅಮಾನತುಪಡಿಸಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಜಾತಿ ಕಾರಣಕ್ಕಾಗಿ ತನ್ನ ಮಗನಿಗೆ ಕಿರುಕುಳ ನೀಡಿ, ಶಾಲೆಯಿಂದ ಅಮಾನತುಪಡಿಸಿದ ಶಿಕ್ಷಕಿ ಸ್ವರೂಪ ಮತ್ತು ಹಲ್ಲೆ ನಡೆಸಿದ ವಿದ್ಯಾರ್ಥಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಸುಂದರ್ ಹಣಕೊಳ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದ್ದಾರೆ.

ತಲೆಮರೆಸಿಕೊಂಡಿದ್ದ ಮೈಸೂರು ಜೈಲು ಸಜಾಬಂಧಿ ಏಳೂವರೆ ವರ್ಷದ ನಂತರ ಬಂಧನ!

ಮೈಸೂರು, ಆ. 5 (ಆರ್‌ಕೆ)– ಏಳೂವರೆ ವರ್ಷಗಳಿಂದ ತಲೆ ಮರೆಸಿಕೊಂಡಿದ್ದ ಮೈಸೂರು ಕೇಂದ್ರ ಕಾರಾಗೃಹದ ಸಜಾಬಂಧಿಯನ್ನು ಮಂಡಿ ಠಾಣೆ ಪೊಲೀಸರು ಗುರುವಾರ ಬಂಧಿಸಿದ್ದಾರೆ. ಕರಿಚಾಮೇಗೌಡರ ಮಗ ಶಿವಣ್ಣ ಬಂಧಿತ ಜೀವಾವಧಿ ಶಿಕ್ಷೆಗೊಳಪಟ್ಟ ಸಜಾಬಂಧಿ. ಮಂಡ್ಯ ಜಿಲ್ಲೆ, ಪಾಂಡವಪುರ ಠಾಣೆ ಮೊಕದ್ದಮೆ ಸಂಖ್ಯೆ 200/ 1998ರ ಕೊಲೆ ಪ್ರಕರಣದಲ್ಲಿ ನ್ಯಾಯಾಲಯವು ಈತನಿಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು.

ಮೈಸೂರು ಜೈಲಲ್ಲಿದ್ದ ಶಿವಣ್ಣನಿಗೆ 2014ರ ನವೆಂಬರ್ 24 ರಿಂದ 2015ರ ಫೆಬ್ರವರಿ 23 ರವರೆಗೆ 90 ದಿನಗಳ ಪೆರೋಲ್ ರಜೆ ಮಂಜೂರಾಗಿತ್ತು. ಅದರಂತೆ ಹೊರಗೆ ಬಂದಿದ್ದ ಶಿವಣ್ಣ, ರಜೆ ಮುಗಿದ ನಂತರವೂ ಕಾರಾಗೃಹಕ್ಕೆ ವಾಪಸಾಗದೇ ತಲೆಮರೆಸಿಕೊಂಡಿದ್ದ. ಹಾಗಾಗಿ 2015ರ ಸೆಪ್ಟೆಂಬರ್ 10 ರಂದು ಮಂಡಿ ಠಾಣೆಯಲ್ಲಿ ಐಪಿಸಿ ಸೆಕ್ಷನ್ 224, 225 ರಂತೆ ಪ್ರಕರಣ ದಾಖಲಾಗಿತ್ತು. ಮಂಡಿ ಠಾಣೆ ಇನ್ಸ್‌ಪೆಕ್ಟರ್ ಕೆ.ಆರ್.ರಘು ನೇತೃತ್ವದ ತಂಡವು ಸುಳಿವಿನ ಜಾಡು ಹಿಡಿದು ಸಜಾಬಂಧಿ ಶಿವಣ್ಣನನ್ನು ಮಂಡ್ಯ ನಗರದ ಮಹಾವೀರ ಸರ್ಕಲ್‌ನಲ್ಲಿ ಗುರುವಾರ ಬಂಧಿಸಿ, ಕರೆ ತಂದಿದ್ದಾರೆ.

ಸಬ್ ಇನ್ಸ್‌ಪೆಕ್ಟರ್ ಕೆ.ವಿಶ್ವನಾಥ್, ಎಎಸ್‌ಐ ಬಸವರಾಜು, ಸಿಬ್ಬಂದಿಗಳಾದ ರಾಜೇಂದ್ರ, ರವಿಗೌಡ, ಪ್ರಕಾಶ್ ರಾಥೋಡ್ ಮತ್ತು ಕರಿಯಪ್ಪ ಪತ್ತೆ ಕಾರ್ಯದಲ್ಲಿ ಪಾಲ್ಗೊಂಡಿದ್ದರು. ತಂಡದ ಕಾರ್ಯವನ್ನು ಶ್ಲಾಘಿಸಿರುವ ಮೈಸೂರು ನಗರ ಪೊಲೀಸ್ ಆಯುಕ್ತರು, 20,000 ರೂ. ಬಹುಮಾನ ಘೋಷಿಸಿದ್ದಾರೆ.

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶಾಸಕರಿಂದ ಲ್ಯಾಪ್‌ಟಾಪ್ ವಿತರಣೆ



ಮೈಸೂರು, ಆ.5(ಆರ್‌ಕೆಬಿ)– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೈಸೂರು ದಕ್ಷಿಣ ವಲಯ ವ್ಯಾಪ್ತಿಯ ಸರ್ಕಾರಿ ಶಾಲೆಗಳಲ್ಲಿ ಗರಿಷ್ಠ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್ ಶುಕ್ರವಾರ ಲ್ಯಾಪ್‌ಟಾಪ್‌ಗಳನ್ನು ವಿತರಿಸಿದರು. 2021ರ ಜೂನ್ ತಿಂಗಳಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅಧಿಕ ಅಂಕ ಗಳಿಸಿದ ಕುವೆಂಪುನಗರ ಕೆಪಿಎಸ್ ಶಾಲೆಯ ಎನ್.ಗೌತಮ್, ಲಕ್ಷ್ಮೀಪುರ ಸರ್ಕಾರಿ ಪ್ರೌಢಶಾಲೆಯ ಜೆ.ಉಲ್ಲಾಸ್‌ಕುಮಾರ್ ಅವರಿಗೆ ಶಾಸಕರು ಪ್ರೋತ್ಸಾಹದಾಯಕವಾಗಿ ಲ್ಯಾಪ್‌ಟಾಪ್ ವಿತರಿಸಿದರು. ಈ ಸಂದರ್ಭದಲ್ಲಿ ಡಿಡಿಪಿಐ ರಾಮಚಂದ್ರ ರಾಜೇ ಅರಸ್, ಬಿಇಓ ಆರ್.ರಾಮರಾಧ್ಯ, ತಾಲೂಕು ನೋಡಲ್ ಮನೋಹರ್, ಬಿಆರ್‌ಸಿ ಶ್ರೀಕಂಠಸ್ವಾಮಿ, ಬಿ.ಆರ್.ಪಿ.ಶ್ರೀಕಂಠಶಾಸ್ತ್ರಿ ಇನ್ನಿತರರಿದ್ದರು.

ಹಿರಿಯ ವಿದ್ವಾಂಸ ರಾಗೌರಿಗೆ ಪತ್ನಿ ವಿಯೋಗ

ಮೈಸೂರು, ಆ.5–ನಾಡಿನ ಹಿರಿಯ ವಿದ್ವಾಂಸರು, ಜಾನಪದ ತಜ್ಞ ಮತ್ತು ವಿಶ್ರಾಂತ




ಪ್ರಾಧ್ಯಾಪಕ ಡಾ.ರಾಮೇಗೌಡ (ರಾಗೌ) ಅವರ ಪತ್ನಿ ಶ್ರೀಮತಿ ಯಶೋಧ ರಾಗೌ(73) ಶುಕ್ರವಾರ ಬೆಳಗ್ಗೆ ಮೈಸೂರು ನಗರದ ಒಂಟಿಕೊಪ್ಪಲಿನ ಕಾಳಿದಾಸ ರಸ್ತೆಯ ತಮ್ಮ ನಿವಾಸದಲ್ಲಿ ನಿಧನ ಹೊಂದಿದರು.

ಮೂಲತಃ ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲೂಕಿನ ಅಂಕನಹಳ್ಳಿ ಗ್ರಾಮದವರಾದ ಯಶೋಧ ಅವರು ಪತಿ ಡಾ.ರಾಗೌ ಅವರ ಸಾಹಿತ್ಯ ಚಟುವಟಿಕೆಗಳಿಗೆ ಸದಾ ಬೆನ್ನೆಲುಬಾಗಿದ್ದರು. ಡಾ.ರಾಗೌ ಸ್ಥಾಪಿಸಿದ್ದ ಯಶೋಧ ರಾಗೌ ಟ್ರಸ್ಟ್‌ನ ಸಮಾಜಮುಖಿ ಕೆಲಸ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಯಶೋಧ ಅವರು ಪತಿ ಡಾ.ರಾಗೌ ಅಲ್ಲದೆ ಪುತ್ರ ಆರ್.ರವೀಂದ್ರ, ಸೊಸೆಯಂದಿರಾದ ರೂಪ, ಉರ್ಮಿಳಾ, ಮೊಮ್ಮಕ್ಕಳು ಮತ್ತು ಅಪಾರ ಬಂಧು ಬಳಗ ಅಗಲಿದ್ದಾರೆ.

ಅವರ ಅಂತ್ಯಕ್ರಿಯೆ ಗೋಕುಲಂ ರುದ್ರಭೂಮಿಯಲ್ಲಿ ಇಂದು ಸಂಜೆ ನೆರವೇರಿತು. ಹಿರಿಯ ಸಾಹಿತಿಗಳಾದ ಡಾ.ಸಿ.ಪಿ.ಕೆ., ಪಂಡಿತಾರಾಧ್ಯ, ಪ್ರೊ.ಎಂ.ಕೃಷ್ಣೇಗೌಡ, ಶಾಸಕ ಎಲ್.ನಾಗೇಂದ್ರ, ಮಾಜಿ ಶಾಸಕ ವಾಸು, ಎಂಸಿಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಸಿ.ಬಸವೇಗೌಡ, ಮೈಮುಲ್ ಮಾಜಿ ಅಧ್ಯಕ್ಷ ಎ.ಟಿ.ಸೋಮಶೇಖರ್, ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ, ಮಂಡ್ಯ ಕನ್ನಡ ಸಂಘದ ಅಧ್ಯಕ್ಷ ಜಯಪ್ರಕಾಶಗೌಡ, ಸಂವಹನ ಪ್ರಕಾಶನದ ಲೋಕಪ್ಪ, ಪ್ರೊ.ಕಾಳಚನ್ನೇಗೌಡ ಇನ್ನಿತರರು ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಂಡು, ಅಂತಿಮ ನಮನ ಸಲ್ಲಿಸಿದರು.

ನಿಧನ



ಕೋಟೇರ ಎಂ. ಚೀಯಣ್ಣ

ಮೈಸೂರಿನ ಶ್ರೀರಾಂಪುರ 2ನೇ ಹಂತದ ನಿವಾಸಿ ಕೋಟೇರ ಎಂ.ಚೀಯಣ್ಣ (95) ಶುಕ್ರವಾರ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ಪುತ್ರ ವಿನು ತಮ್ಮಯ್ಯ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಕೊಡಗು ಜಿಲ್ಲೆಯ ಮೂರ್ನಾಡು ಸಮೀಪದ ಬಾಡಗ ಗ್ರಾಮದಲ್ಲಿ ನಾಳೆ (ಆ.6) ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ವೆಂಕಟೇಶ್

ಹುಣಸೂರು ತಾಲೂಕಿನ ನಲ್ಲೂರುಪಾಲ ಗ್ರಾಮದ ನಿವಾಸಿ ವೆಂಕಟೇಶ್ (70) ಗುರುವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ನಾಲ್ವರು ಸಹೋದರರು, ಇಬ್ಬರು ಸಹೋದರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗ್ರಾಮದಲ್ಲಿರುವ ಅವರ ಜಮೀನಿನಲ್ಲಿ ಶುಕ್ರವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

'ಕರ್ನಾಟಕದ ದಲಿತ ಸ್ವಾತಂತ್ರ್ಯ ಹೋರಾಟಗಾರರು' ವಿಶೇಷ ಉಪನ್ಯಾಸ

ಗಾಂಧೀ ಪ್ರಭಾವದಿಂದಲೇ ಸಾಕಷ್ಟು ದಲಿತರು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದರು

ಮೈಸೂರು ವಿವಿ ಪ್ರಸಾರಂಗ ನಿರ್ದೇಶಕ ಪ್ರೊ.ಎಂ.ಎಸ್.ಶೇಖರ್ ವಿವರಣೆ

ಮೈಸೂರು, ಆ.5(ಆರ್‌ಕೆಬಿ)–ಸ್ವಾತಂತ್ರ್ಯ ಹೋರಾಟದಲ್ಲಿ ದಲಿತರು ಸಹ ಒಂದಲ್ಲ ಒಂದು ರೀತಿಯಲ್ಲಿ ಗಾಂಧಿ ಪ್ರಭಾವಕ್ಕೆ ಒಳಗಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದಾರೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಂಗ ನಿರ್ದೇಶಕ ಪ್ರೊ.ಎಂ.ಎಸ್.ಶೇಖರ್ ತಿಳಿಸಿದರು.

ಮೈಸೂರಿನ ಮಾನಸಗಂಗೋತ್ರಿಯ ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ಸಭಾಂಗಣದಲ್ಲಿ ಶುಕ್ರವಾರ 'ಕರ್ನಾಟಕದ ದಲಿತ ಸ್ವಾತಂತ್ರ್ಯ ಹೋರಾಟಗಾರರು' ಕುರಿತು ವಿಶೇಷ ಉಪನ್ಯಾಸ ನೀಡಿದರು.

1892ರಲ್ಲಿ ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲೂಕಿನ ಸೋಸಲೆ ಸಿದ್ದಪ್ಪ, ತಗಡೂರು ರಾಮಚಂದ್ರರಾಯರು, ಟಿ.ಎಸ್.ಸುಬ್ಬಣ್ಣ, ಜೋಗಿ ಸಿದ್ದಯ್ಯ, ಚನ್ನರಾಯಪಟ್ಟಣ ತಾಲೂಕಿನ ಡಿ. ಗೋವಿಂದದಾಸ್, ವಿಜಾಪುರ ಜಿಲ್ಲೆಯ ಕರಿಯಪ್ಪ ಯರಸೀಮೆ ಸಿಂಗೂರ ಮತ್ತು ವೀರಮ್ಮ ಯರಸೀಮೆ ಸಂಗೂರ ದಂಪತಿ, ಜಿ.ವೆಂಕಣ್ಣಯ್ಯ, ಎಸ್. ಹೊನ್ನಯ್ಯ, ರಾಗಿ ಲಕ್ಷ್ಮಣಯ್ಯ ಹೀಗೆ ಅನೇಕರು ಗಾಂಧಿ ಪ್ರಭಾವಕ್ಕೆ ಒಳಗಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಂಡಿದ್ದಾರೆ ಎಂದರು.

1934ರಲ್ಲಿ ಮಹಾತ್ಮಾಗಾಂಧೀಜಿ, ಮೈಸೂರು ಪ್ರಾಂತ್ಯದ ಬದನವಾಳು, ತಗಡೂರಿಗೆ ಭೇಟಿ ನೀಡುತ್ತಾರೆ. ಆಗ ತಗಡೂರು ರಾಮಚಂದ್ರರಾಯರು, ಟಿ.ಎಸ್.ಸುಬ್ಬಣ್ಣ ಇನ್ನಿತರರು ಗಾಂಧಿ ಪ್ರಭಾವಕ್ಕೆ ಒಳಗಾಗುತ್ತಾರೆ. ಒಮ್ಮೆ ಅಸ್ಪೃಶ್ಯರಿಗೆ ದೇವಸ್ಥಾನ ಪ್ರವೇಶ ನೀಡದಿದ್ದಾಗ ಟಿ.ಎಸ್.ಸುಬ್ಬಣ್ಣನವರೇ ದೇವಸ್ಥಾನ ನಿರ್ಮಿಸಿ, ಅಸ್ಪೃಶ್ಯರಿಗೆ ಪ್ರವೇಶ ಕಲ್ಪಿಸುತ್ತಾರೆ. ನಂತರ ಅಸ್ಪೃಶ್ಯರಿಗಾಗಿ ಶಾಲೆಯನ್ನೂ ತೆರೆಯುತ್ತಾರೆ.



ಇಂತಹ ಸಂದರ್ಭದಲ್ಲಿ ನಾವಿಂದು ಟಿ.ಎಸ್.ಸುಬ್ಬಣ್ಣನವರನ್ನು ಸ್ಮರಿಸಲೇಬೇಕಾಗುತ್ತದೆ ಎಂದು ಹೇಳಿದರು.

ಮೈಸೂರಿನ ಗಾಂಧಿನಗರದ ಬಳಿಯ ಜಲಪುರಿಗೆ 1934ರಲ್ಲಿ ಜೋಗಿ ಸಿದ್ದಯ್ಯ ಅವರು ಗಾಂಧೀಜಿಯವರನ್ನು ಕರೆತಂದರು. ದಲಿತ ಶಿವಯೋಗಿ ಮಠಕ್ಕೆ ಕರೆದೊಯ್ದು ಗಾಂಧೀಜಿಯವರಿಗೆ ಮಠದ ಪರಿಚಯ ಮಾಡಿಕೊಡುತ್ತಾರೆ. ಹೀಗಾಗಿ ಗಾಂಧಿ ಭೇಟಿ ನೀಡಿದ್ದರಿಂದ ಅದು ಗಾಂಧೀನಗರವೆಂದು ಕರೆಯಲ್ಪಟ್ಟಿತು ಎಂದು ತಿಳಿಸಿದರು. ಗಾಂಧೀಜಿಯವರ ಪ್ರಭಾವಕ್ಕೆ ಒಳಗಾದ ವಿಜಾಪುರ ಜಿಲ್ಲೆಯ ಕರಿಯಪ್ಪ ಸಂಗೂರ, ವೀರಮ್ಮ ಸಂಗೂರ ದಂಪತಿ ಸಬರಮತಿ ಆಶ್ರಮಕ್ಕೆ ಹೋಗಿ ನೆಲೆಸುತ್ತಾರೆ. ಸೇವಾ ಗ್ರಾಮದಲ್ಲಿ 1936ರಿಂದ 1940ರವರೆಗೆ ಗಾಂಧೀಜಿಯವರ ಮಗಳಂತೆ ಇದ್ದರಂತೆ. ಅವರಿಂದಲೇ ಗಾಂಧೀಜಿಯವರು ಅಂಜಿ ಮಾಡಿಸಿಕೊಂಡು, ನೂಲುತ್ತಿದ್ದರಂತೆ. ವೀರಮ್ಮನವರಿಗೆ ಗಾಂಧೀಜಿ

> “ಡಾ.ಅಂಬೇಡ್ಕರ್ ಅವರು ಕೇವಲ ದಲಿತರು ಮಾತ್ರ ಬದಲಾಗಿ ಎಂದು ಹೇಳಲಿಲ್ಲ. ದಲಿತರ ಶೋಷಣೆ ಮಾಡುವವನಿಗೂ ಇದು ನನ್ನ ಧೋರಣೆ ಅಲ್ಲ ಎಂದು ಮನವರಿಕೆ ಆಗಬೇಕು ಎಂಬುದು ಅಂಬೇಡ್ಕರ್ ಆಶಯವಾಗಿತ್ತು. ಹಾಗಾಗಿ ಅವರ ವಿಚಾರ ಧಾರೆಗಳು ಮುಕ್ತವಾಗಿರಬೇಕು.
> –ಪ್ರೊ.ಎಂ.ಎಸ್.ಶೇಖರ್, ನಿರ್ದೇಶಕರು ಪ್ರಸಾರಂಗ

ಹಿಂದಿ ಕಲಿಸಿದರೆ, ಗಾಂಧೀಜಿಯವರಿಗೆ ವೀರಮ್ಮನವರು ಕನ್ನಡ ಕಲಿಸುತ್ತಿದ್ದರಂತೆ. ಈ ದಂಪತಿ ಸ್ವಾತಂತ್ರ್ಯ ಹೋರಾಟಗಾರರಲ್ಲವೇ? ಎಂದು ಪ್ರಶ್ನಿಸಿದರು.

ಮಂಡ್ಯ ಜಿಲ್ಲೆಯ ಜಿ.ವೆಂಕಟಯ್ಯ ಮೈಸೂರಿನಲ್ಲಿ ಲಕ್ಷ್ಮೀ ಸ್ಮಾರಕ ಗ್ರಂಥ ಮಾಲೆ ಪ್ರಕಾಶನ ಸಂಸ್ಥೆ ಇಟ್ಟಿದ್ದರು. ಎಸ್.ಹೊನ್ನಯ್ಯನವರು ಗಾಂಧಿ ಪ್ರಭಾವಕ್ಕೆ ಒಳಗಾದರು. ಜಯಪುರದ ರಾಗಿ ಲಕ್ಷ್ಮಣಯ್ಯ ಅವರು ಗಾಂಧಿ ಪ್ರಭಾವದಿಂದ ಖಾದಿ ಮಾರಾಟ ಮಾಡಿ, ಶಿಕ್ಷಣ ಪಡೆಯುತ್ತಾರೆ. ಮುಂದೆ ಅವರು 30ಕ್ಕೂ ಅಧಿಕ ರಾಗಿ ತಳಿಗಳನ್ನು ಸಂಶೋಧನೆ ಮಾಡಿದರು. ಮಳವಳ್ಳಿ ತಾಲೂಕಿನ ಆನವಾಡಿಯಲ್ಲಿ ಎಮ್ಮಯ್ಯ ಎಂಬವರು ಗಾಂಧಿ ಪ್ರಭಾವಕ್ಕೆ ಒಳಗಾಗಿದ್ದರು. ಅಟ್ಟಯ್ಯ, ಕೂಸಯ್ಯನವರು ಗಾಂಧಿಯನ್ನು ಮುಟ್ಟಿ ಬಂದಿದ್ದರಿಂದ ಸವರ್ಣೀಯರು ಅವರಿಗೆ ಗೌರವ ನೀಡುತ್ತಿದ್ದರು. ಇವರೆಲ್ಲರೂ ದಲಿತ ಸ್ವಾತಂತ್ರ್ಯ ಹೋರಾಟಗಾರರಲ್ಲವೇ ಎಂದು ಪ್ರೊ.ಎಂ.ಎಸ್.ಶೇಖರ್ ಪ್ರಶ್ನಿಸಿದರು.

ಬಹುಪಾಲು ಹಳೆಯ ತಲೆಮಾರಿನವರು ಗಾಂಧಿ ಪ್ರಭಾವದಿಂದ ಟೋಪಿ, ಖಾದಿ ಧರಿಸುತ್ತಿದ್ದರು. ಅಸ್ಪೃಶ್ಯರು, ದಲಿತರು ಈ ದೇಶದ ನಿಜವಾದ ಜಾನಪದ ವಾರಸುದಾರರು ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಜಗತ್ತಿನ ಬಹು ದೊಡ್ಡ ಅಹಿಂಸಾ ಹೋರಾಟಗಾರ. ಅವರ ಹೋರಾಟ ಅತ್ಯಂತ ಸಂವೇದನಾಶೀಲ ಮತ್ತು ಸೃಜನಶೀಲವಾದದ್ದು. ಮಹಾತ್ಮಾ ಗಾಂಧೀಜಿ ಪ್ರೀತಿಯಿಂದಲೇ ಮಾನವರೆಲ್ಲರನ್ನೂ ಜೋಡಿಸಿದರೆ, ಅಂಬೇಡ್ಕರ್ ಅಹಿಂಸಾ ತತ್ವ, ಹೋರಾಟದಿಂದಲೇ ಸಂವಿಧಾನ ರಚಿಸಿದರು. ಕರ್ನಾಟಕದ ಮೇಲುವರ್ಗದವರು ಎಂದ ತಕ್ಷಣ ಕಾಲು ಕೆರೆದು ಜಗಳ ತೆಗೆಯುವ ಕಾಲವಲ್ಲ ಇದು. ಇಡೀ ಸಮಾಜದ ಸ್ಥಿತಿಯನ್ನು ನೋಡಿದರೆ ಇಲ್ಲಿ ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ ಇನ್ನಿತರರು ಇರುತ್ತಾರೆ ಎಂದು ತಿಳಿಸಿದರು. ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ನಿರ್ದೇಶಕ ಡಾ.ಎಸ್. ನರೇಂದ್ರಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಪ್ರಾಧ್ಯಾಪಕ ಡಾ.ಜೆ.ಸೋಮಶೇಖರ್, ಅಂಬೇಡ್ಕರ್ ಪೀಠದ ಸಂದರ್ಶಕ ಪ್ರಾಧ್ಯಾಪಕಿ ಪ್ರೊ.ಆರ್.ಇಂದಿರಾ, ಅಧ್ಯಯನ ಅಭ್ಯರ್ಥಿಗಳಾದ ಹರೀಶ್‌ಕುಮಾರ್, ಬಿ.ಎಸ್.ಮಧುಚಂದ್ರ, ಎನ್.ನವೀನ್ ಕುಮಾರ್, ವರಲಕ್ಷ್ಮಿ ಇನ್ನಿತರರು ಉಪಸ್ಥಿತರಿದ್ದರು.

ಬಿಜೆಪಿ, ಆರ್‌ಎಸ್‌ಎಸ್‌ನಿಂದ ದೇಶೀಯ ಖಾದಿ, ಬಾವುಟದ ಚಕ್ರಕ್ಕೆ ಧಕ್ಕೆ ತರುವ ಕೆಲಸ

ನಾವು ದೇಶೀಯ ಖಾದಿ ಬಾವುಟವನ್ನೇ ಹಾರಿಸುತ್ತೇವೆ... ಮೋದಿ ಕರೆ ನೀಡಿದ ವಿದೇಶಿ ಬಟ್ಟೆಯ ಬಾವುಟವಲ್ಲ...

ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಹೇಳಿಕೆ



ಮೈಸೂರು, ಆ.5(ಆರ್‌ಕೆಬಿ)– ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿರುವ ನೈಲಾನ್, ಪಾಲಿಸ್ಟರ್ ಬಾವುಟವನ್ನು ರೈತರು ಹಾರಿಸುವುದಿಲ್ಲ. ನಾವು ದೇಶೀಯ ಖಾದಿಯಿಂದ ತಯಾರಾದ ಬಾವುಟವನ್ನೇ ಹಾರಿಸುತ್ತೇವೆ. ಮೋದಿ ಕರೆ ನೀಡಿರುವ ಬಾವುಟವನ್ನು ನಿರಾ ಕರಿಸುತ್ತೇವೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಇಂದಿಲ್ಲಿ ತಿಳಿಸಿದರು.

ಮೈಸೂರಿನ ಜಲದರ್ಶಿನಿ ಅತಿಥಿಗೃಹ ದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಧಾನಿ ಮೋದಿ ಕರೆ ನೀಡಿರುವ ಬಾವುಟ ದೇಶೀಯ ಬಾವುಟ ಆಗುವುದಿಲ್ಲ. ಅದು ಖಾದಿಗೆ, ಬಾವುಟದಲ್ಲಿನ ಚಕ್ರದ ಅಸ್ಮಿತೆಗೆ ಧಕ್ಕೆ ತರುವ ಕೆಲಸವಾಗುತ್ತಿದೆ. ಇದು ಸ್ವದೇಶಿ ಮಂತ್ರಾಲಯಕ್ಕೆ ಭಾರತದ ರಾಷ್ಟ್ರೀಯತೆ, ಕಲ್ಪನೆ, ಅಸ್ಮಿತೆ ಬಗ್ಗೆ ಗೌರವವಿಲ್ಲ ಎಂಬುದು ಧ್ವಜ ಸಂಹಿತೆಗೆ ತಿದ್ದುಪಡಿ ತಂದಿರುವುದೇ ತೋರಿಸುತ್ತದೆ ಎಂದು ಬೇಸರ ವ್ಯಕ್ತಪಡಿಸಿದರು.

ಧ್ವಜ ಸಂಹಿತೆಗೆ ತಿದ್ದುಪಡಿ ತಂದಿರುವುದನ್ನು ಸ್ವಾತಂತ್ರ್ಯ ಹೋರಾಟಗಾರರು, ಖಾದಿ ಗ್ರಾಮೋದ್ಯೋಗದಲ್ಲಿ ಕೆಲಸ ಮಾಡಿರುವವರು, ಗಾಂಧಿ ಸ್ವರಾಜ್ಯ ಕಲ್ಪನೆ ಹೊಂದಿರುವವರು, ಗಾಂಧೀವಾದಿಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದು, ಧ್ವಜ ಸತ್ಯಾಗ್ರಹ ಆರಂಭಿಸಿದ್ದಾರೆ. ಆ ಹೋರಾಟಕ್ಕೆ ರೈತಸಂಘ ಸಂಪೂರ್ಣ ಬೆಂಬಲ ನೀಡಿದೆ. ಅಂದು ನಾವೆಲ್ಲರೂ ಬಾವುಟ ಹಾರಿಸುತ್ತೇವೆ. ಆದರೆ ಮೋದಿ ಕರೆ ನೀಡಿದ ಬಾವುಟವಲ್ಲ. ಭಾರತ ದೇಶದ ಖಾದಿ ಬಾವುಟ ಹಾರಿಸುತ್ತೇವೆ. ಈ ಬಗ್ಗೆ ರೈತ ಸಂಘ ನಿರ್ಣಯ ಮಾಡಿದ್ದು, ರೈತರೆಲ್ಲರೂ ದೇಶೀಯ ಖಾದಿ ಧ್ವಜವನ್ನೇ ಹಾರಿಸುವಂತೆ ಕರೆ ನೀಡಿದ್ದೇವೆ ಎಂದು ತಿಳಿಸಿದರು. ಗಾಂಧಿ ಸ್ವಾತಂತ್ರ್ಯ ಹೋರಾಟದಲ್ಲಿ ಖಾದಿಗೆ ಆದ್ಯತೆ ನೀಡಿದ್ದು, ಅದು ಭಾರತ ದೇಶದ ಅಸ್ಮಿತೆ. ಚರಕ ಸ್ವರಾಜ್ಯದ ಕಲ್ಪನೆ. ಹತ್ತಿ ಬೆಳೆಗಾರರ ಹಿತಾಸಕ್ತಿ ಇದರಲ್ಲಿತ್ತು. ನಮ್ಮ ದೇಶದಿಂದಲೇ ಹತ್ತಿ, ರೇಷ್ಮೆ ನೂಲು ರಫ್ತಾಗುತ್ತಿತ್ತು. ಹತ್ತಿ ಬೆಳೆಗಾರರ ರಕ್ಷಣೆ ಮತ್ತು ಸ್ವಯಂ ಉದ್ಯೋಗ. ಸ್ವರಾಜ್ಯದ ಕಲ್ಪನೆ. ಈ ದೃಷ್ಟಿಯಿಂದ ಖಾದಿಗೆ ಒತ್ತು ನೀಡಿದ್ದರು ಎಂದರು. ರಾಷ್ಟ್ರ ಧ್ವಜಕ್ಕೆ ಖಾದಿಯನ್ನೇ ಉಪಯೋಗಿಸಬೇಕು. ಕೇಂದ್ರ ಸರ್ಕಾರ 75ನೇ ವರ್ಷದ ಅಮೃತ ಮಹೋತ್ಸವ ಸಂದರ್ಭದಲ್ಲಿ ಧ್ವಜ ಸಂಹಿತೆಗೆ ತಿದ್ದುಪಡಿ ತರುವ ಮೂಲಕ ಧ್ವಜ ಸಂಹಿತೆಯನ್ನು ಅವಮಾನಿಸಿದೆ ಎಂದು ಆರೋಪಿಸಿದರು. ಬಾವುಟ ಹಾರಿಸುವುದು ಮುಖ್ಯವಲ್ಲ. ಯಾವ ಬಾವುಟ ಹಾರಿಸಬೇಕು ಎಂಬುದು ಮುಖ್ಯ. ಇಂದಿಗೂ ದೇಶದ ಬಾವುಟದೊಂದಿಗೆ ಅಮೃತೋತ್ಸವವನ್ನು ನಾವೆಲ್ಲರೂ ಸಡಗರದಿಂದ ಆಚರಿಸುತ್ತೇವೆ. ಆದರೆ ನಮಗೆ ಸ್ವಾತಂತ್ರ್ಯದ ಪರಿಕಲ್ಪನೆ ಇದೆ. ಆದರೆ ಯಾವ ಧ್ವಜ ಹಾರಿಸಬೇಕು. ಪಾಲಿಸ್ಟರ್ ಅಥವಾ ನೈಲಾನ್ ಬಟ್ಟೆಯ ಧ್ವಜವೇ? ನೈಲಾನ್ ಮತ್ತು ಪಾಲಿಸ್ಟರ್ ಅನ್ನು ಚೈನಾದಿಂದ ಆಮದು ಮಾಡಿಕೊಳ್ಳುತ್ತಿದ್ದಾರೆ. ಇದು ಅನೀತಿ. ಧ್ವಜ ಸಂಹಿತೆಗೆ ವಿರುದ್ಧವಾದದ್ದು ಎಂದು ಟೀಕಿಸಿದರು. ಸುದ್ದಿಗೋಷ್ಠಿಯಲ್ಲಿ ರೈತ ಸಂಘದ ಪದಾಧಿಕಾರಿಗಳಾದ ಹೊಸೂರು ಕುಮಾರ್, ಹೊಸಕೋಟೆ ಬಸವರಾಜು, ಪಿ.ಮರಂಕಯ್ಯ, ಹುಣಸೂರು ಬಸವರಾಜು ಇನ್ನಿತರರು ಉಪಸ್ಥಿತರಿದ್ದರು.

ಅಪ್ರಾಪ್ತ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ: ಯುವಕನ ವಿರುದ್ಧ ಪೋಕ್ಸೊ ಪ್ರಕರಣ ದಾಖಲು

ಮೈಸೂರು, ಆ.5– ಯುವಕನೋರ್ವ ಅಪ್ರಾಪ್ತ ವಯಸ್ಸಿನ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ್ದಲ್ಲದೇ, ಪ್ರೀತಿಸದಿದ್ದರೆ ಆಸಿಡ್ ಹಾಕುವುದಾಗಿಯೂ, ಆಕೆಯ ತಾಯಿ ಮತ್ತು ಅಕ್ಕನನ್ನು ಕೊಲೆ ಮಾಡುವುದಾಗಿಯೂ ಬೆದರಿಕೆ ಹಾಕಿರುವ ಬಗ್ಗೆ ಮೈಸೂರಿನ ಆಲನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೆಚ್.ಡಿ.ಕೋಟೆ ರಸ್ತೆ ಧನಗಳ್ಳಿ ಗ್ರಾಮದ ಅವಿನಾಶ್(27) ಎಂಬಾತನೇ ಆರೋಪಕ್ಕೆ ಗುರಿಯಾದವನಾಗಿದ್ದು, ಈತ ಮೈಸೂರಿನ ಕಾಲೇಜೊಂದರಲ್ಲಿ ದ್ವಿತೀಯ ಪಿಯುಸಿ ವ್ಯಾಸಂಗ ಮಾಡುತ್ತಿರುವ 16 ವರ್ಷದ ವಿದ್ಯಾರ್ಥಿನಿ ಕಾಲೇಜಿಗೆ ಹೋಗುವಾಗ–ಬರುವಾಗ ಆಕೆಯನ್ನು ಅಡ್ಡಗಟ್ಟಿ ಹಲ್ಲೆ ಮಾಡಿದ್ದಲ್ಲದೇ, ಕಿರುಕುಳ ನೀಡಿದ್ದಾನೆ. ಈ ಹಿಂದೆ ಆತನಿಗೆ ವಿದ್ಯಾರ್ಥಿನಿಯ ತಾಯಿ ಹಲವಾರು ಬಾರಿ ಬುದ್ಧಿವಾದ ಹೇಳಿದರೂ, ಕೇಳದೇ ಮತ್ತೆ ಕಿರುಕುಳ ಮುಂದುವರೆದಿದ್ದರಿಂದ ವಿದ್ಯಾರ್ಥಿನಿಯನ್ನು ಕಳೆದ ವರ್ಷ ಬೆಂಗಳೂರಿನ ಕಾಲೇಜಿಗೆ ಸೇರಿಸಲಾಗಿತ್ತು. ಇನ್ನು ಅವಿನಾಶ್‌ನಿಂದ ತೊಂದರೆಯಾಗುವುದಿಲ್ಲ ಎಂದು ಭಾವಿಸಿ ಈ ವರ್ಷ ಮತ್ತೆ ಮೈಸೂರಿನ ಕಾಲೇಜಿಗೆ ಸೇರಿಸಿದಾಗ ವಿದ್ಯಾರ್ಥಿನಿ ಕಾಲೇಜಿಗೆ ಹೋಗುವ ವೇಳೆ ಅಡ್ಡಗಟ್ಟಿದ ಅವಿನಾಶ್, ಆಕೆಗೆ ಲೈಂಗಿಕ ಕಿರುಕುಳ ನೀಡಿದ್ದಲ್ಲದೇ, ಪ್ರೀತಿಸದಿದ್ದರೆ ಮುಖಕ್ಕೆ ಆಸಿಡ್ ಹಾಕುವುದಾಗಿಯೂ ಆಕೆಯ ತಾಯಿ ಮತ್ತು ಅಕ್ಕನನ್ನು ಕೊಲೆ ಮಾಡುವುದಾಗಿಯೂ ಬೆದರಿಕೆ ಹಾಕಿದ್ದಾನೆ. ಅಲ್ಲದೇ ಬೇರೆ ಬೇರೆ ನಂಬರ್‌ಗಳಿಂದ ಫೋನ್ ಮಾಡಿ ಬೆದರಿಕೆ ಹಾಕಿದ್ದಾನೆ. ಆ.3ರಂದು ಬೈಕ್‌ನಲ್ಲಿ (ಕೆಎ45 2024) ಬಂದು, ವಿದ್ಯಾರ್ಥಿನಿಯನ್ನು ಅಡ್ಡಗಟ್ಟಿ ಬೈಕ್‌ಗೆ ಹತ್ತುವಂತೆ ಬಲವಂತ ಮಾಡುತ್ತಿದ್ದಾಗ ಅದನ್ನು ಗಮನಿಸಿದ ತಾಯಿ ಆತನನ್ನು ಪ್ರಶ್ನಿಸಿದಾಗ ಅವರಿಗೂ ಕೂಡ ಬೆದರಿಕೆ ಹಾಕಿದ್ದಾನೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ. ಆಲನಹಳ್ಳಿ ಠಾಣೆ ಪೊಲೀಸರು ಪೋಕ್ಸೋ ಕಾಯಿದೆಯಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

06.08.2022 ಶನಿವಾರ, ಮಳೆ ನಕ್ಷತ್ರ : ಆಶ್ಲೇಷ, 03.08.2022 ರಿಂದ 16.08.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ಶುಭಕೃತು ಋತು, ಶ್ರಾವಣ ಮಾಸ, ಶುಕ್ಲ ಪಕ್ಷ
ತಿಥಿ: ನವಮೀ, ನಕ್ಷತ್ರ : ವಿಶಾಖ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಡಾ. ಜಿ. ಪರಮೇಶ್ವರ ಅಭಿಮಾನಿಗಳ ಬಳಗ :** ಮಾಜಿ ಉಪ ಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಅವರ ಹುಟ್ಟುಹಬ್ಬದ ಪ್ರಯುಕ್ತ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ, ಸಿಹಿ ವಿತರಣೆ, ಉಪಸ್ಥಿತರು : ಕೆಪಿಸಿಸಿ ವಕ್ತಾರ ಹೆಚ್.ಎ. ವೆಂಕಟೇಶ್, ಬೆಳಗ್ಗೆ 9.30ಕ್ಕೆ.

■ **ಪ್ರಕೃತಿ ಆಯುರ್ವೇದ ಪ್ರತಿಷ್ಠಾನ :** ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರ, ದಟ್ಟಗಳ್ಳಿ, ಬೆಳಗ್ಗೆ 10 ರಿಂದ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿಯವರ 19ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ಶ್ರೀ ದತ್ತ ವೆಂಕಟೇಶ್ವರ ಸ್ವಾಮಿ ದೇವಾಲಯದಲ್ಲಿ ಶ್ರಾವಣ ಶನಿವಾರದ ಪೂಜೆಗಳು, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ನಂಜನಗೂಡು ರಸ್ತೆ, ದತ್ತನಗರ.

■ **ಶ್ರೀಕಾಂತ ವಿದ್ಯಾಸಂಸ್ಥೆಗಳು :** ಸಂಸ್ಥಾಪಕರ ದಿನಾಚರಣೆ, ಅಧ್ಯಕ್ಷತೆ : ಕೆ.ಎನ್. ವರದರಾಜ ಅಯ್ಯಂಗಾರ್ ಮೆಮೋರಿಯಲ್ ಟ್ರಸ್ಟ್ ಅಧ್ಯಕ್ಷ ಆರ್.ಜಿ. ನರಸಿಂಹ ಅಯ್ಯಂಗಾರ್, ಮುಖ್ಯ ಅತಿಥಿಗಳು : ಡಾ. ಅನಂತನಾಗೇಂದ್ರ ಭಟ್, ಸ್ಥಳ: ವಿದ್ಯಾಸಂಸ್ಥೆ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಸಾನ್ವಿ–ಕಲಾಕುಂಚ :** ಚಿತ್ರಕಲಾ ಪ್ರದರ್ಶನ, ಉದ್ಘಾಟನೆ : ಹಂಗಾಮಿ ಮೇಯರ್ ಸುನಂದ ಪಾಲನೇತ್ರ, ಮುಖ್ಯ ಅತಿಥಿಗಳು : ಪಾಲಿಕೆ ಸದಸ್ಯೆ ನಿರ್ಮಲ ಹರೀಶ್, ಫ್ರಾ. ಬಿಬಿನ್, ಅಧ್ಯಕ್ಷತೆ : ಹಿರಿಯ ಕಲಾವಿದ ಎನ್.ಬಿ. ಕಾವೇರಪ್ಪ, ಸ್ಥಳ: ಸುಚಿತ್ರಾ ಕಲಾ ಗ್ಯಾಲರಿ, ಕಲಾಮಂದಿರ, ಬೆಳಗ್ಗೆ 11.30ಕ್ಕೆ.

■ **ರಾಗ ಮ್ಯೂಸಿಕ್ ಅಕಾಡೆಮಿ:** ಶ್ರೀಮದ್ ಭಾಗವತ ಸಪ್ತಾಹ, ವಿದುಷಿ ಕೋವಿಲಡಿ ಅರ್ಚನ ಅವರಿಂದ ಹಾಡುಗಾರಿಕೆ, ವಿದುಷಿ ಸಿ.ವಿ. ಶ್ರುತಿ – ವಯೋಲಿನ್, ವಿದ್ವಾನ್ ವಿಕ್ರಮ್ ಭಾರದ್ವಾಜ್ – ಮೃದಂಗ, ಸ್ಥಳ: ಮೈಸೂರು ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 5 ರಿಂದ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮುಕ್ತಿದಾನಂದ ಅವರಿಂದ ದೈವಪ್ರಜ್ಞಾ ಕರ್ಮಯೋಗ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ವಿಶ್ರಾಂತ ಪ್ರಾಧ್ಯಾಪಕ ಡಾ.ಕೆ ಅನಂತರಾಮು ಅವರಿಂದ ಭಾರತೀಯ ಸಂಸ್ಕೃತಿ ಕುರಿತು ಪ್ರವಚನ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30 ರಿಂದ.

■ **ರಾಘವೇಂದ್ರಸ್ವಾಮಿ ಮಠ :** ಪಂಡಿತ್ ಕೃಷ್ಣಾಚಾರ್ಯ ನಾಗಸಂಪಿಗೆ ಅವರಿಂದ ರಾಮಾಚಾರಿತ್ರ್ಯ ಮಂಜರಿಯ ಪ್ರವಚನ, ಸ್ಥಳ: ಮಠದ ಆವರಣ, ಜಯಲಕ್ಷ್ಮಿಪುರಂ, ಸಂಜೆ 6.30 ರಿಂದ.

■ **ರಂಗಾಯಣ :** ಪದ್ಮಶ್ರೀ ನಾಗರತ್ನಮ್ಮ ರಂಗ ಕಾರ್ಯಾಗಾರದ ಶಿಬಿರಾರ್ಥಿಗಳಿಂದ ಚೂರಿಕಟ್ಟೆ ಅರ್ಥಾತ್ ಕಲ್ಯಾಣಪುರ ನಾಟಕ ಪ್ರದರ್ಶನ, ನಿರ್ದೇಶನ : ಪ್ರವೀಣ್ ಬೆಳ್ಳಿ, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ.

■ **ವೀರು ಥಿಯೇಟರ್ ಟ್ರಸ್ಟ್ :** ಶ್ರೇಯಸ್ ಪಿ. ಅಭಿನಯಿಸುವ ಕಲಾವಿದ ಏಕವ್ಯಕ್ತಿ ರಂಗ ಪ್ರಯೋಗ, ನಿರ್ದೇಶನ : ವೀರು ಅಣ್ಣಿಗೇರಿ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರದ ಆವರಣ, ಸಂಜೆ 7ಕ್ಕೆ.

ಸುತ್ತೂರಿನಲ್ಲಿಂದು

■ **ಶ್ರೀ ವೀರ ಸಿಂಹಾಸನ ಮಹಾ ಸಂಸ್ಥಾನ ಮಠ :** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರೊ. ಹೆಚ್.ಬಿ. ದೇವಣ್ಣ ಅವರಿಂದ ಸುರಂಗ ಕವಿಕೃತ ತ್ರಿಷಷ್ಟಿ ಪುರಾತನ ಚಾರಿತ್ರಂ ಕುರಿತು ಪ್ರವಚನ, ಡಿ.ಎಂ.ಸಿದ್ದಲಿಂಗಸ್ವಾಮಿ ಅವರಿಂದ ವಾಚನ, ಸ್ಥಳ: ಸುತ್ತೂರು ಮಠ, ಬೆಳಗ್ಗೆ 6.30 ರಿಂದ.

ದೇವೀರಮ್ಮನಹಳ್ಳಿಯಲ್ಲಿಂದು, ನಂಜನಗೂಡು ತಾಲೂಕು

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಮೈಸೂರು ಗ್ರಾಮಾಂತರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ನಂಜನಗೂಡು ತಾಲೂಕು ಶರಣ ಸಾಹಿತ್ಯ ಪರಿಷತ್ತು :** ವಚನ ಸಾಹಿತ್ಯದ –ಪ್ರಸ್ತುತತೆ ಕುರಿತು ವಿಚಾರ ಸಂಕಿರಣ, ಉದ್ಘಾಟನೆ : ಪ್ರೊ. ಮಲೆಯೂರು ಗುರುಸ್ವಾಮಿ, ಮುಖ್ಯ ಅತಿಥಿಗಳು : ಪ್ರಾದೇಶಿಕ ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕ ಪ್ರೊ. ಗಿರಿಧರ್‌ರಾವ್ ಎಂ.ಎಸ್., ನಿರ್ದೇಶಕ ಪ್ರೊ. ಆರ್. ಮೂಗೇಶಪ್ಪ, ಅಧ್ಯಕ್ಷತೆ : ಡಾ. ಹೆಳವರಹುಂಡಿ ಸಿದ್ದಪ್ಪ, ಪ್ರಾಸ್ತಾವಿಕ ನುಡಿ : ಎಂ. ಚಂದ್ರಶೇಖರ್, ಉಪಸ್ಥಿತರು : ಸಿಂಧುವಳ್ಳಿ ಕೆಂಪಣ್ಣ, ಸ್ಥಳ : ಜೆಎಸ್‌ಎಸ್ ಕಾಲೇಜು ಸಭಾಂಗಣ, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ–ಡಾ. ಡಿ. ಶೀಲಾಕುಮಾರಿ, 6.20 ಗೀತಾರಾಧನ, 6.35 ಭವದ ಬಯಲಿಗರು, ರಚನೆ ಮತ್ತು ಪ್ರಸ್ತುತಿ– ಮೈಸೂರು ಉಮೇಶ್, 6.40 ಭಾವಗೀತೆ, 6.45 ರೈತರಿಗೆ ಸಲಹೆ, 6.50 ವನ ಮಹೋತ್ಸವ–ಅರಣ್ಯ ಇಲಾಖೆ ಪ್ರಾಯೋಜಿತ ಕಾರ್ಯಕ್ರಮ, 9.00 ರಾಗಲಹರಿ–ಕರ್ನಾಟಕ ಶಾಸ್ತ್ರೀಯ ಸಂಗೀತದ ರಾಗಗಳ ಚಿತ್ತಾರ, 9.30ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳುವಳಿಯ ಪಯಣ–ಆಕಾಶವಾಣಿಯೊಂದಿಗೆ, 10.00 ಡಾ.ಎಸ್. ವಿಜಯರಾಘವನ್ – ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.45 ಜನಪದಗೀತೆ, 1.20 ಭಾವಗೀತೆ, 3.35 ಮಕ್ಕಳ ಮಂಟಪ– ಹೆಚ್.ಡಿ. ಕೋಟೆಯ ಸಂಯುಕ್ತ ಪದವಿ ಪೂರ್ವ ಸರ್ಕಾರಿ ಬಾಲಿಕಾ ಪ್ರೌಢಶಾಲಾ ಮಕ್ಕಳಿಂದ ಕಾರ್ಯಕ್ರಮ, 4.00 ನಾಟಕ "ಇಂಥವರು ಇದ್ದಾರೆ", ಎಸ್. ಸಾಯಿಲಕ್ಷ್ಮೀ ಯವರ ಲಲಿತ ಪ್ರಬಂಧ ಆಧಾರಿತ ನಾಟಕ ರೂಪ ಎಸ್.ಕೇಶವರಾವ್, ನಿರ್ಮಾಣ–ಉಮೇಶ್ ಎಸ್.ಎಸ್., 4.30 ನೆನಪಿನಂಗಳ– ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಐ.ಎನ್.ಎ. ರಾಮರಾವ್ ಅವರೊಂದಿಗೆ ಹೆಚ್.ಎಸ್. ವೇಣುಗೋಪಾಲ್ ನಡೆಸಿದ್ದ ಸಂವಾದ, ಸ್ವಾತಂತ್ರ್ಯ ಹೋರಾಟಗಾರ್ತಿ ಎಂ.ಎನ್. ಪಾರ್ವತಮ್ಮ ಅವರೊಂದಿಗೆ ಮಂಜುಳಾ ಪುರಾಣಿಕ್ ನಡೆಸಿರುವ ಸಂವಾದ, 6.50 ಕೃಷಿರಂಗ–ಕಿಸಾನ್‌ವಾಣಿ, ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, 9.00 ಲಾಕ್‌ಡೌನ್ ಕಥಾ ನಾಟಕ "ಸೆಳೆತ", ಮೂಲಕಥೆ– ಮಾಲತಿ ಹೆಗಡೆ, ಬಾನುಲಿ ರೂಪ – ಉಷಾ ನರಸಿಂಹನ್, ನಿರ್ಮಾಣ– ಪ್ರಭುಸ್ವಾಮಿ ಮಳಿಮಠ್, 9.15ಶಬ್ದ ಸಂಪತ್ತನ್ನು ಬೆಳೆಸುವ ಆಟಗಳು ಕುರಿತು ಅನಂ ಎಂ. ತಾಮ್ಹಣ್ಕರ್ ಅವರೊಂದಿಗೆ ಸಂದರ್ಶನ, ಸಂದರ್ಶಕರು– ದಿವಾಕರ ಹೆಗಡೆ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಚೆಪ್ಪಡ್ ಎ.ಈ. ವಾಮನ ನಂಬೂದರಿ – ಹಾಡುಗಾರಿಕೆ, 11.00 ಸವಿನೆನಪು

ಕೆನಡಾದಲ್ಲಿ ಕ್ಯಾಷಿಯರ್ ಕೆಲಸ ಕೊಡಿಸುವುದಾಗಿ 5.17 ಲಕ್ಷ ಆನ್‌ಲೈನ್ ವಂಚನೆ

ಮೈಸೂರು, ಆ.5–ಕೆನಡಾದಲ್ಲಿ ಕ್ಯಾಷಿಯರ್ ಕೆಲಸ ಕೊಡಿಸುವುದಾಗಿ ನಂಬಿಸಿ ಪದವೀಧರನೊಬ್ಬನಿಗೆ 5.17 ಲಕ್ಷ ರೂ. ಆನ್‌ಲೈನ್ ಮೂಲಕ ವಂಚನೆ ಮಾಡಿರುವ ಬಗ್ಗೆ ವರದಿಯಾಗಿದೆ.

ರಮಾಬಾಯಿನಗರ ನಿವಾಸಿ ಬಿ.ಕಾಂ. ಪದವೀಧರ ಜಿ.ಹರೀಶ್ (35) ವಂಚನೆಗೊಳಗಾದವರಾಗಿದ್ದು, ಹಾಲಿ ಬೆಂಗಳೂರಿನ ಶ್ರೀ ಲಕ್ಷ್ಮೀ ಸ್ಟೀಲ್ ಸಪ್ಲೈಯರ್ ಕಂಪನಿಯನ್ನು ಹಿರಿಯ ಸೇಲ್ಸ್ ಎಕ್ಸಿಕ್ಯೂಟಿವ್ ಆಗಿ ಕೆಲಸ ಮಾಡುತ್ತಿರುವ ಇವರು, ವಿದೇಶದಲ್ಲಿ ಕೆಲಸಕ್ಕೆ ಸೇರಲು ಇನ್‌ಸ್ಟಾಗ್ರಾಂನಲ್ಲಿ ಸರ್ಚ್ ಮಾಡುತ್ತಿದ್ದಾಗ Grayson Immigration Services ಎಂಬ ಖಾತೆಯಲ್ಲಿ ವಿದೇಶದಲ್ಲಿ ಕೆಲಸ ಕೊಡಿಸುವ ಬಗ್ಗೆ ಫೋಟೋಗಳು ಕಂಡು ಬಂದಿವೆ. ಆ ಪೇಜ್‌ನಲ್ಲಿದ್ದ ಸಂಖ್ಯೆಗೆ ಮೆಸೇಜ್ ಮಾಡಲಾಗಿ ಓಲಿವರ್ ಗ್ರೇಸನ್ ಎಂದು ಪರಿಚಯಿಸಿಕೊಂಡ ವ್ಯಕ್ತಿಯು ಹರೀಶ್ ಅವರಿಗೆ ಕೆನಡಾದ ಹಿಲ್ಟನ್ ಹೋಟೆಲ್ ಅಂಡ್ ರೆಸ್ಟೋರೆಂಟ್‌ನಲ್ಲಿ ಕೆಲಸ ಕೊಡಿಸುವುದಾಗಿ ತಿಳಿಸಿ ಪಾಸ್‌ಪೋರ್ಟ್, ರೆಸ್ಯೂಮ್, ಲಸಿಕೆ ಪ್ರಮಾಣ ಪತ್ರ, ಆಧಾರ್ ಕಾರ್ಡ್ ಪಡೆದುಕೊಂಡು ಕೆಲಸದ ಆಫರ್ ಲೆಟರ್ ಅನ್ನು ಕಳುಹಿಸಿದ್ದಾನೆ.

ನಂತರ ವಿವಿಧ ಶುಲ್ಕಗಳೆಂದು ತಿಳಿಸಿ ಕಳೆದ ಏ.8ರಿಂದ ಮೇ 16ರವರೆಗೆ ಹರೀಶ್ ಖಾತೆಯಿಂದ 5,17,768 ರೂ. ವರ್ಗಾವಣೆ ಮಾಡಿಸಿಕೊಂಡು ಕೆಲಸವನ್ನೂ ಕೊಡಿಸದೇ ಇನ್ನೂ ಹೆಚ್ಚು ಹಣವನ್ನು ವರ್ಗಾವಣೆ ಮಾಡುವಂತೆ ಒತ್ತಾಯಿಸುತ್ತಿದ್ದಾನೆ ಎಂದು ದೂರು ನೀಡಲಾಗಿದೆ. ಈ ಸಂಬಂಧ ಮೈಸೂರು ಜಿಲ್ಲಾ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಟ್ರ್ಯಾಕ್ಟರ್ ಡಿಕ್ಕಿ: ಬೈಕ್ ಸವಾರ ಸಾವು

ಸಾಲಿಗ್ರಾಮ, ಆ.5–ಬೈಕ್‌ಗೆ ಟ್ರ್ಯಾಕ್ಟರ್ ಡಿಕ್ಕಿ ಹೊಡೆದ ಪರಿಣಾಮ ಹಿಂಬದಿ ಸವಾರ ಸಾವನ್ನಪ್ಪಿರುವ ದುರಂತ ಸಾಲಿಗ್ರಾಮ ತಾಲೂಕು ಲಕ್ಕಿಕೊಪ್ಪಲು ಗ್ರಾಮದಲ್ಲಿ ಸಂಭವಿಸಿದೆ. ಗ್ರಾಮದ ಸಣ್ಣಯ್ಯ (65) ಅಪಘಾತದಲ್ಲಿ ಮೃತಪಟ್ಟವರಾಗಿದ್ದು, ಇವರು ಆ.3ರಂದು ಸಾಲಿಗ್ರಾಮದ ಗೋವಿಂದೇಗೌಡ ಎಂಬುವರ ಬೈಕ್‌ನಲ್ಲಿ (ಕೆಎ 01 ಜೆಎ 1153) ಗೋಪಾಲ ಎಂಬುವರೊಂದಿಗೆ ತೆರಳುತ್ತಿದ್ದಾಗ ಎದುರುಗಡೆಯಿಂದ ಟ್ರ್ಯಾಕ್ಟರ್ ಅನ್ನು ಅತೀ ವೇಗವಾಗಿ ಚಾಲನೆ ಮಾಡಿಕೊಂಡು ಬಂದ ಶಿವಣ್ಣೇಗೌಡ ಎಂಬಾತ ಬೈಕ್‌ಗೆ ಡಿಕ್ಕಿ ಹೊಡೆದಿದ್ದಾನೆ. ಇದರ ಪರಿಣಾಮ ಬೈಕ್‌ನಲ್ಲಿದ್ದ ಮೂವರೂ ಕೆಳಗೆ ಬಿದ್ದು, ಸಣ್ಣಯ್ಯ ಅವರು ತೀವ್ರವಾಗಿ ಗಾಯಗೊಂಡಿದ್ದಾರೆ. ಅವರನ್ನು ಕೆ.ಆರ್.ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ. ಮತ್ತಿಬ್ಬರು ಸವಾರರು ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈ ಸಂಬಂಧ ಸಾಲಿಗ್ರಾಮ ಠಾಣಾ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಇಂದು ಶ್ರೀನಿವಾಸ ಪ್ರಸಾದ್ ಹುಟ್ಟುಹಬ್ಬ



ಮೈಸೂರು,ಆ.5– ಸಂಸದರಾದ ವಿ.ಶ್ರೀನಿವಾಸ ಪ್ರಸಾದ್ ಅವರ ಹುಟ್ಟುಹಬ್ಬವನ್ನು ಹೂಟಗಳ್ಳಿ ಎಸ್‌ಆರ್‌ಎಸ್ ಕಾಲೋನಿಯ ಒಡನಾಡಿ ಸೇವಾಸಂಸ್ಥೆಯಲ್ಲಿ ಶನಿವಾರ ಬೆಳಗ್ಗೆ 10ಕ್ಕೆ ಆಚರಿಸಲಾಗುತ್ತಿದೆ.

ವಿಶ್ವಮೈತ್ರಿ ಬುದ್ಧವಿಹಾರದ ಡಾ. ಕಲ್ಯಾಣಸಿರಿ ಭಂತೇಜಿ, ಭಾಗ್ಯಲಕ್ಷ್ಮಿ ಶ್ರೀನಿವಾಸ ಪ್ರಸಾದ್, ಹಿರಿಯ ಸಹಕಾರಿ ಸಿ.ಬಸವೇಗೌಡ, ಸಮಾನತೆ–ಸ್ವಾಭಿಮಾನ–ಸ್ವಾವಲಂಬನೆ ಪ್ರತಿಷ್ಠಾನದ ಗೌರವಾಧ್ಯಕ್ಷ ಪ್ರೊ.ನೀಲಗಿರಿ ತಳವಾರ್, ಅಧ್ಯಕ್ಷ ಪ್ರೊ ಸಿ.ಬಸವರಾಜು, ಉಪಾಧ್ಯಕ್ಷ ಪಿ.ನಂದಕುಮಾರ್, ಒಡನಾಡಿಯ ಸ್ಟ್ಯಾನ್ಲಿ–ಪರಶು ಮತ್ತಿತರರು ಭಾಗಿಯಾಗಲಿದ್ದಾರೆ. ವಿ.ಶ್ರೀನಿವಾಸ ಪ್ರಸಾದ್ ಅವರ ಅಭಿಮಾನಿಗಳು, ಹಿತೈಷಿಗಳು, ಬೆಂಬಲಿಗರು ವಿವಿಧ ಸೇವಾ ಕಾರ್ಯಗಳನ್ನು ಹಮ್ಮಿಕೊಂಡಿದ್ದಾರೆ.

ಕರ್ನಾಟಕ ಸರ್ಕಾರ

ತೋಟಗಾರಿಕೆ ಇಲಾಖೆ

ಜಿಲ್ಲಾ ತೋಟಗಾರಿಕೆ ಸಂಘ, ಕರ್ಜನ್ ಪಾರ್ಕ್, ಮೈಸೂರು–570 001

Email: flowershowmysore@gmail.com ದಿನಾಂಕ: 04–08–2022

ಬಹಿರಂಗ ಹರಾಜು

2022–23ನೇ ಸಾಲಿನಲ್ಲಿ ಜಿಲ್ಲಾ ತೋಟಗಾರಿಕೆ ಸಂಘದಿಂದ ನಿಶಾದ್ ಬಾಗ್ (ಕುಪ್ಪಣ್ಣ ಪಾರ್ಕ್) ಆವರಣದಲ್ಲಿ ನಡೆಯುವ ದಸರಾ ಫಲಪುಷ್ಪ ಪ್ರದರ್ಶನದ ಪ್ರವೇಶ ಶುಲ್ಕ, ಆಹಾರ ಮಳಿಗೆ ಹಾಗೂ ಅಮ್ಯೂಸ್‌ಮೆಂಟ್ ಪಾರ್ಕ್ ಗೆ ಸಂಬಂಧಿಸಿದಂತೆ ಟೆಂಡರ್ ಯಾ ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಸಂಸ್ಥೆಯವರು, ದಿನಾಂಕ 03–09–2022 ರ ಸಂಜೆ 5.00 ಗಂಟೆಯೊಳಗಾಗಿ ಈ ಕಛೇರಿಗೆ ಅರ್ಜಿ ಸಲ್ಲಿಸಲು ಕೋರಲಾಗಿದೆ. ಒಂದು ವೇಳೆ ನಿಗಧಿತ ಅವಧಿ ಮೀರಿ ಬಂದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಈ ಸಹಿದಾರರನ್ನು ಮೊಬೈಲ್ ಸಂ: 9035990150 ಮತ್ತು 9141597596 ಗೆ ಸಂಪರ್ಕಿಸಲು ಕೋರಲಾಗಿದೆ. ಅರ್ಜಿಗಳನ್ನು ದಿನಾಂಕ 05–08–2022 ರಿಂದ ಬೆಳಿಗ್ಗೆ 11.00 ರಿಂದ ಸಂಜೆ 5.00 ಗಂಟೆಯೊಳಗೆ ಈ ಕೆಳಕಂಡ ಕಛೇರಿಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಪದನಿಮಿತ್ತ ಕಾರ್ಯದರ್ಶಿಗಳು
ಜಿಲ್ಲಾ ತೋಟಗಾರಿಗೆ ಸಂಘ (ರಿ) ಹಾಗೂ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯ ವಲಯ), ಕರ್ಜನ್ ಪಾರ್ಕ್, ಮೈಸೂರು

ರಿಟರ್ನಿಂಗ್ ಆಫೀಸರ್, ಯಾಚೇನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ ನಿ., ಟಿ. ನರಸೀಪುರ ತಾಲ್ಲೂಕು ರವರ ಕಾರ್ಯಾಲಯ.

ಪತ್ರಿಕಾ ಪ್ರಕಟಣೆ

ಯಾಚೇನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ ನಿ., ಟಿ. ನರಸೀಪುರ ತಾಲ್ಲೂಕು ಈ ಸಂಘದ ಆಡಳಿತ ಮಂಡಳಿಗೆ ಚುನಾವಣಾ ದಿನಾಂಕದಿಂದ ಮುಂದಿನ 05 ವರ್ಷಗಳ ಅವಧಿಗೆ ಚುನಾವಣೆಯನ್ನು **ದಿನಾಂಕ : 21–08–2022 ರಂದು ಭಾನುವಾರ ಬೆಳಿಗ್ಗೆ 09–00 ಗಂಟೆಯಿಂದ ಸಂಜೆ 04–00 ಗಂಟೆಯವರೆಗೆ "ಸಂಘದ ಕಛೇರಿ"** ಇಲ್ಲಿ ನಡೆಸಲು ನಿಗಧಿಪಡಿಸಲಾಗಿರುತ್ತದೆ. ಚುನಾವಣೆಯಲ್ಲಿ ಸ್ಪರ್ಧಿಸಲು ಇಚ್ಛಿಸುವವರು ನಾಮಪತ್ರಗಳನ್ನು ದಿನಾಂಕ: 08–08–2022 ರಿಂದ 13–08–2022 ರವರೆಗೆ ಬೆಳಿಗ್ಗೆ 11–00 ಗಂಟೆಯಿಂದ ಮಧ್ಯಾಹ್ನ 02–00 ಗಂಟೆಯವರೆಗೆ ಸಂಘದ ಕಛೇರಿಯಲ್ಲಿ ಸ್ವೀಕರಿಸಲಾಗುವುದು ಹಾಗೂ ನಾಮಪತ್ರಗಳ ಪರಿಶೀಲನೆಯನ್ನು ದಿನಾಂಕ: 14–08–2022 ರಂದು ಮಧ್ಯಾಹ್ನ 11–30 ಗಂಟೆಗೆ ನಡೆಸಲಾಗುವುದು. ಚುನಾವಣಾ ವೇಳಾಪಟ್ಟಿಯನ್ನು ಎಲ್ಲಾ ಅರ್ಹ ಸದಸ್ಯರುಗಳಿಗೆ ಮುದ್ದಾಂ ಮೂಲಕ ಈಗಾಗಲೇ ನೀಡಲಾಗಿದ್ದು, ಹೆಚ್ಚಿನ ವಿವರಗಳಿಗಾಗಿ ಸಂಘದ ಮುಖ್ಯಕಾರ್ಯನಿರ್ವಾಹಕರನ್ನು / ರಿಟರ್ನಿಂಗ್ ಅಧಿಕಾರಿಯನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/– ವಸೀಂ ಪಾಷ
ರಿಟರ್ನಿಂಗ್ ಅಧಿಕಾರಿ, ಹಾಲು ಉತ್ಪಾದಕರ ಸಹಕಾರ ಸಂಘ ನಿ., ಯಾಚೇನಹಳ್ಳಿ, ಟಿ. ನರಸೀಪುರ ತಾಲ್ಲೂಕು

ನಕ್ಕರೆ ಅದೇ ಸ್ವರ್ಗ

ಸುಬ್ಬಕ್ಕ : ಪ್ರತಿನಿತ್ಯ ನಮ್ಮ ಮನೆಗೆ ಬರ್ತಿಯಲ್ಲಾ, ಈ ಏರಿಯಾದಲ್ಲಿ ಬೇರೆ ಮನೆಗಳು ಇಲ್ವಾ?"

ಭಿಕ್ಷುಕ : ನನಗೂ ವಯಸ್ಸಾಯ್ತು ತಾಯಿ. ಎಲ್ಲೆಂದರಲ್ಲಿ ಸಿಕ್ಕಿದ್ದನ್ನು ತಿಂದು ಆರೋಗ್ಯ ಕೆಡಿಸಿಕೊಳ್ಳಬಾರದು ಮತ್ತು ಒಂದೇ ರೀತಿಯ ಆಹಾರ ತೆಗೆದುಕೊಳ್ಳಿ ಎಂದು ಡಾಕ್ಟರ್ ಹೇಳಿದ್ದಾರೆ.

ಮೈಸೂರು ಮಿತ್ರ
ಶನಿವಾರ, 6 ಆಗಸ್ಟ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಕನ್ನಡಿ ಸ್ವಚ್ಛವಾಗಿದ್ದಲ್ಲಿ ಪ್ರತಿಬಿಂಬ ಸುಂದರವಾಗಿ ಕಾಣುತ್ತದೆ. ಮನಸ್ಸು ಸ್ವಚ್ಛವಾಗಿದ್ದಲ್ಲಿ ಜಗತ್ತು ಸುಂದರವಾಗಿ ಕಾಣುತ್ತದೆ. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಧರ್ಮಕ್ಕೆ ದತ್ತಿಕೊಟ್ಟರೆ ಹಿತ್ತಲಿಗೆ ಹೋಗಿ ಮೊಳ ಹಾಕಿದರಂತೆ

ನಿಮ್ಮ ಪತ್ರಗಳು

ಇನ್ನಾದರೂ ಎಚ್ಚೆತ್ತುಕೊಳ್ಳೋಣ

ಮಾನ್ಯರೆ,



ಮನುಷ್ಯ ಬೆಟ್ಟದ ತುದಿಗಳನ್ನು ಸವರಿ, ಭೂತಾಯಿ ಒಡಲನ್ನು ಅಗೆದು, ಬಗೆದು, ಕೆರೆ–ಕಟ್ಟೆಗಳನ್ನು, ರಾಜಕಾಲುವೆಗಳನ್ನು ಸಮಾಧಿ ಮಾಡಿ ಅವುಗಳ ಮೇಲೆ ಮನೆಗಳು, ವಾಣಿಜ್ಯ ಕಟ್ಟಡಗಳು, ಐಷಾರಾಮಿ ಹೋಟೆಲ್‌ಗಳನ್ನು ಕಟ್ಟಿಕೊಂಡರೆ ಮಳೆ ನೀರು ಇನ್ನೆಲ್ಲಿ ಹೋಗುತ್ತದೆ?! ಆದ್ದರಿಂದಲೇ, ಕರ್ನಾಟಕದ ಹಲವಾರು ಜಿಲ್ಲೆಗಳಲ್ಲಿ ನೆರೆ ಬಂದು ಜನರ ಬದುಕು ನೀರು ಪಾಲಾಗುತ್ತಿರುವುದು. ಹಾಗೂ ಈ ರೀತಿಯ ಪ್ರವಾಹ, ಭೂಕುಸಿತ ಇನ್ನಿತರ ಪ್ರಾಕೃತಿಕ ವಿಕೋಪದ ಸಮಸ್ಯೆಗಳು ಆಗಾಗ ನಮ್ಮನ್ನು ಕಾಡುತ್ತಲೆ ಇರುವುದು. ಮಹಾ ಮಳೆ, ಮಳೆಯ ರೌದ್ರ ನರ್ತನ ಹಾಗೆ ಹೀಗೆ ಎಂದು ಬಡಬಡಿಸುವ ನಾವು, ಬೇಸಿಗೆಯಲ್ಲಿ ಹನಿ ನೀರಿಗೂ ಪರದಾಡುವುದನ್ನು ಮರೆತಿದ್ದೇವೆ. ಮಳೆ ಬಂದರೆ ಅದು ಭೂಮಿಯಲ್ಲಿ ಇಂಗುವಂತೆ ಮಾಡಿ, ಕೆರೆ–ಕಟ್ಟೆ, ಕಾಲುವೆ–ಬಾವಿಗಳಲ್ಲಿ ಕಾಲಕಾಲಕ್ಕೆ ಹೂಳೆತ್ತಿಸಿ ಮಳೆ ನೀರನ್ನು ಶೇಖರಣೆ ಮಾಡುವ, ಪರಿಸರವನ್ನು ಸಮತೋಲನದಲ್ಲಿಡುವ ಕಾರ್ಯಕ್ರಮಗಳನ್ನು ರೂಪಿಸಿದರೆ ಈ ರೀತಿಯ ಅವಘಡಗಳು ತಪ್ಪುತ್ತವೆ. ಸಾವು ನೋವುಗಳು ಘಟಿಸಿದ ಮೇಲೆ ಸಾವಿರಾರು ಕೋಟಿ ಪರಿಹಾರ ಬಿಡುಗಡೆ ಮಾಡುವ ಬದಲು, ಅದೇ ಹಣದಲ್ಲಿ ಹೆಚ್ಚು ಹಾನಿಯಾಗುವ ಪ್ರದೇಶಗಳನ್ನು, ಕಟ್ಟಡಗಳನ್ನು ಮೊದಲೇ ಗುರುತಿಸಿ ಅಲ್ಲಿರುವವರನ್ನು ಸೂಕ್ತ ಸ್ಥಳಕ್ಕೆ ಸ್ಥಳಾಂತರಿಸಿ ಆ ಪ್ರದೇಶಗಳಲ್ಲಿ ಕೆರೆ–ಕಟ್ಟೆ ನಿರ್ಮಿಸುವತ್ತ ಸರ್ಕಾರ ಯೋಜನೆ ರೂಪಿಸಬೇಕು. ಇದಕ್ಕೆ ಸಾರ್ವಜನಿಕರು ಸಹಕರಿಸಬೇಕಿದೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ಹರ್ ಘರ್ ತಿರಂಗಾ ಹಿಂದಿ ಹೇರಿಕೆ ಪ್ರತಿರೂಪ ಅಲ್ಲವೇ?

ಮಾನ್ಯರೆ,

ಸ್ವಾತಂತ್ರ್ಯೋತ್ಸವ ದೇಶದ ಪ್ರತಿ ಪ್ರಜೆಗೂ ಬಹಳ ವಿಶೇಷವಾದದ್ದು. ಈ ಹಿನ್ನೆಲೆಯಲ್ಲಿ ನಮ್ಮ ದೇಶಕ್ಕೆ ಗೌರವ ಸೂಚಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಹರ್ ಘರ್ ತಿರಂಗಾ ಆಂದೋಲನವನ್ನು ಆ. 13 ಮತ್ತು 15ರ ನಡುವೆ ಪ್ರತಿ ಮನೆಯಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸುವ ಅಥವಾ ಪ್ರದರ್ಶಿಸಲು ಕರೆ ನೀಡಿದ್ದಾರೆ. ಹರ್ ಘರ್ ತಿರಂಗಾ ಎಂಬ ಪದವು ಹಿಂದಿ ಹೇರಿಕೆಯ ಪ್ರತೀಕ ಎಂಬುದು ಸ್ಪಷ್ಟ, ಅದರ ಬದಲಾಗಿ ಮನೆ ಮನೆಗೂ ತ್ರಿವರ್ಣ ಧ್ವಜ ಎಂಬ ಶೀರ್ಷಿಕೆಯನ್ನು ರಾಜ್ಯ ಸರ್ಕಾರ ಘೋಷಿಸಿ ಕನ್ನಡಕ್ಕೆ ಆದ್ಯತೆ ನೀಡಿ, ಹಿಂದಿ ಏರಿಕೆಗೆ ತಡೆ ಒಡ್ಡಬೇಕು.

–ಅರವಿಂದ್ ಶರ್ಮಾ, ಮೈಸೂರು.

ಬೀದಿ ನಾಯಿಗಳ ಹಾವಳಿ ತಪ್ಪಿಸಿ

ಮಾನ್ಯರೆ,

ಮೈಸೂರಿನ ರಾಜೀವ್ ನಗರದ ಮೊದಲನೇ ಹಂತದಲ್ಲಿ ಬೀದಿ ಬೀದಿಗಳಲ್ಲೂ ಹಿಂಡು ಹಿಂಡು ಬೀದಿ ನಾಯಿಗಳು ಹಾಗೂ 5 ಮತ್ತು 6ನೇ ಕ್ರಾಸ್‌ನಲ್ಲಿ ಹುಚ್ಚು ನಾಯಿಗಳಿವೆ. ನಿವಾಸಿಗಳು ಭಯದ ವಾತಾವರಣದಲ್ಲಿ ತಿರುಗಾಡುವಂತಾ ಗಿದೆ. ಈ ಕುರಿತು ಹಲವಾರು ಬಾರಿ ಮೈಸೂರು ಮಹಾ ನಗರ ಪಾಲಿಕೆಗೆ ದೂರು ಸಲ್ಲಿಸಿದ್ದರೂ ಪ್ರಯೋಜನವಾಗಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ ಮುಂದೆ ಆಗುವ ಅನಾಹುತ ತಪ್ಪಿಸಬೇಕೆಂದು ಕಳಕಳಿಯ ಮನವಿ.

–ರವಿಶಂಕರ್.ಎಸ್.ಎಂ., ರಾಜೀವ್ ನಗರ, ಮೈಸೂರು.

ಬಿಸಿಯೂಟದ ಜೊತೆ ಮೊಟ್ಟೆ : ಸ್ವಾಗತಾರ್ಹ!

ಮಾನ್ಯರೆ,

ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಲಕ್ಷಾಂತರ ಮಕ್ಕಳು ಮಧ್ಯಾಹ್ನದ ಬಿಸಿಯೂಟ ಯೋಜನೆಯಡಿ ಆಹಾರ ಸೇವಿಸುತ್ತಿದ್ದಾರೆ. ಇದರಿಂದ ಮಕ್ಕಳ ದಾಖಲಾತಿ ಹಾಗೂ ಹಾಜರಾತಿಯಲ್ಲಿ ಗಣನೀಯವಾಗಿ ಹೆಚ್ಚಾಗುತ್ತಿದೆ. ಮಕ್ಕಳಿಗೆ ಪಾಠದ ಜೊತೆಗೆ ಸತ್ವಯುತ ಆಹಾರ ದೊರೆಯುವುದರಿಂದ ಕಲಿಕೆಯಲ್ಲಿ ಹೆಚ್ಚು ಲವಲವಿಕೆಯಿಂದ ತೊಡಗಿಸಿಕೊಳ್ಳುವಂತಾಗಿದೆ. ಪ್ರಸ್ತುತ ಮಧ್ಯಾಹ್ನದ ಬಿಸಿಯೂಟದ ಜೊತೆಗೆ ವಾರದಲ್ಲಿ ಎರಡು ದಿನ ಮಕ್ಕಳಿಗೆ ಮೊಟ್ಟೆ ನೀಡಲು ಸರ್ಕಾರ ನಿರ್ಧರಿಸಿರುವುದು ಉತ್ತಮ ಬೆಳವಣಿಗೆಯಾಗಿದೆ. ಮೊಟ್ಟೆ ಕಡಿಮೆ ಬೆಲೆಗೆ ಸಿಗುತ್ತದೆ ಹಾಗೂ ಹೆಚ್ಚಿನ ಪೌಷ್ಟಿಕಾಂಶ ಹೊಂದಿದೆ. ಬೆಳೆಯುವ ಮಕ್ಕಳಿಗೆ ಇದು ಅಗತ್ಯ.

ಅದೇ ರೀತಿ ಮಧ್ಯಾಹ್ನದ ಬಿಸಿಯೂಟದಲ್ಲಿ ಮೊಟ್ಟೆ ತಿನ್ನದ ವಿದ್ಯಾರ್ಥಿಗಳಿಗೆ ಬಾಳೆಹಣ್ಣು ಅಥವಾ ಚುಕ್ಕಿ ನೀಡಲು ನಿರ್ಧರಿಸಿರುವ ರಾಜ್ಯ ಸರ್ಕಾರದ ಕ್ರಮ ಕೂಡ ಮೆಚ್ಚುವಂತಹದ್ದು. ಏಕೆಂದರೆ ಇದರಿಂದ ಮಕ್ಕಳಿಗೆ ಉತ್ತಮ ಪೌಷ್ಟಿಕಾಂಶ ದೊರೆತು. ಇನ್ನಷ್ಟು ಆರೋಗ್ಯದಿಂದಿರಲೂ ನೆರವಾದಂತಾಗುತ್ತದೆ. ಒಟ್ಟಾರೆ ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದರ ಜೊತೆಗೆ ಸತ್ವಯುತ ಆಹಾರವನ್ನು ಸಹ ನೀಡುತ್ತಿರುವ ನಮ್ಮ ರಾಜ್ಯ ಸರ್ಕಾರದ ಕ್ರಮ ಸ್ವಾಗತಾರ್ಹ ಹಾಗೂ ಪ್ರಶಂಸನೀಯವಾಗಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.



ಕೆಸರು ಗದ್ದೆಯಂತಾದ ರಸ್ತೆ

ಮಾನ್ಯರೆ,

ಮೈಸೂರಿನಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಯಿಂದಾಗಿ ರಸ್ತೆಗಳು ಕೆಸರು ಗದ್ದೆಯಂತಾಗಿವೆ. ಅದರಲ್ಲೂ ಮೇಟಗಳ್ಳಿ ಬಡಾವಣೆ ರಸ್ತೆ ಕೆಸರಿನಂತಾಗಿದ್ದು, ನಿವಾಸಿಗಳು, ವಾಹನ ಸವಾರರು ಓಡಾಡಲು ತುಂಬಾ ತೊಂದರೆಯಾಗಿದೆ. ಮಕ್ಕಳು ಓಡಾಡುವಾಗ ಜಾರಿ ಬಿದ್ದು ಗಾಯ ಮಾಡಿಕೊಂಡಿರುವುದುಂಟು. ನಗರ ಪಾಲಿಕೆ ಸದಸ್ಯರ ಮನೆ ಕೂಡ ಇಲ್ಲೇ ಇದ್ದರೂ ಈ ಸಂಬಂಧ ಯಾವುದೇ ಕ್ರಮ ಕೈಗೊಂಡಿಲ್ಲ. ಕೂಡಲೇ ಪಾಲಿಕೆ ಸದಸ್ಯರು ಹಾಗೂ ಅಧಿಕಾರಿಗಳು ಇತ್ತ ಗಮನಹರಿಸಿ ಸರಿಪಡಿಸಬೇಕೆಂದು ಈ ಮೂಲಕ ಮನವಿ.

–ವಿಧು ವೀರೇಂದ್ರ, ಮಹಾರಾಜ ಕಾಲೇಜು ಮೈಸೂರು



ಕಾರ್ಕಳ ಆನಂದಭಟ್
ಮೊ. 7676554198

ದಿಕ್ಕುದೆಸೆ

ಲಂಕೆಗೆ ಬೆಂಕಿ ಹಚ್ಚಿದ ಉಚಿತ ಯೋಜನೆಗಳು

ಶ್ರೀಲಂಕಾದ ವಿದೇಶಿ ವಿನಿಮಯ ಭಂಡಾರ ಬರಿದಾಗಿದೆ. ಲಂಕಾ ದಿವಾಳಿಯಾಗಿದೆ. ಲಂಕೆಯಲ್ಲಿ ಅರಾಜಕತೆ ಉಂಟಾಗಿದೆ. ತ್ರೇತಾಯುಗದಲ್ಲಿ ರಾಮನ ಬಂಟ ಹನುಮಂತ ಲಂಕೆಗೆ ಬೆಂಕಿ ಹಚ್ಚಿದರೆ ಪ್ರಸ್ತುತ ಅಲ್ಲಿನ ನಾಗರಿಕರೇ ಬೆಂಕಿ ಹಚ್ಚಿದ್ದಾರೆ. ದೇಶದ ಎಲ್ಲ ಅಧಿಕಾರವನ್ನು ತಮ್ಮ ಪರಿವಾರದಲ್ಲಿಟ್ಟು ದೇಶವನ್ನು ಲೂಟಿ ಹೊಡೆದ ರಾಜಪಕ್ಸೆ ಪರಿವಾರ ದೇಶಬಿಟ್ಟು ಪಲಾಯನ ಮಾಡುವ ಯತ್ನದಲ್ಲಿದೆ. ಪ್ರಧಾನಿಯಾಗಿದ್ದ ಮಹಿಂದಾ ರಾಜಪಕ್ಸೆಯವರ ಅಧಿಕೃತ ನಿವಾಸಕ್ಕೆ ಮುತ್ತಿಗೆ ಹಾಕಿ ಹಚ್ಚಿದ್ದ ಬೆಂಕಿಗೆ ಅನೇಕ ದುಬಾರಿ ಬೆಲೆಯ ಐಷಾರಾಮಿ ವಿದೇಶಿ ಕಾರುಗಳು ಭಸ್ಮವಾಗಿವೆ. ಪ್ರತಿಭಟನೆಯ ಕಾವು ವಿದೇಶಗಳಿಗೂ ವಿಸ್ತರಿಸಿದೆ. ವಿದೇಶಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ರಾಜಪಕ್ಸೆ ಪರಿವಾರದ ಮಕ್ಕಳ ಮೇಲೆ ಹಲ್ಲೆ ಯತ್ನ ನಡೆದಿವೆ. ಅಧ್ಯಕ್ಷ ಗೊಟಬಾಯ ರಾಜಪಕ್ಸೆ ತಲೆಮರೆಸಿಕೊಂಡಿದ್ದಾರೆ.

ಶ್ರೀಲಂಕಾದ ಇಂದಿನ ಪರಿಸ್ಥಿತಿಗೆ ಅಲ್ಲಿನ ಜನರ ಸ್ವಯಂಕೃತಾಪರಾಧವೇ ಕಾರಣವಾಗಿದೆ. ಲಂಕೆಯ ರಾಜಕಾರಣಿಗಳು ಚುನಾವಣೆಗಳಲ್ಲಿ ಜಯಿಸಲು ಹಾಗೂ ಅಧಿಕಾರದಲ್ಲುಳಿಯಲು ಜನಸಾಮಾನ್ಯರಿಗೆ ಬೇಕಾಬಿಟ್ಟಿ ಉಚಿತ ಕೊಡುಗೆಗಳನ್ನು ನೀಡಿದರು. ಈ ಉಚಿತ ಕೊಡುಗೆಗಳ ದುರಾಸೆಯೇ ಲಂಕೆ ಆರ್ಥಿಕತೆ ಸರ್ವನಾಶ ಮಾಡಿದೆ. ಇದಲ್ಲದೇ ರಾಜಪಕ್ಸೆ ಪರಿವಾರದ ಮಹತ್ವಾಕಾಂಕ್ಷಿಯ ಹಂಬನ್ ತೋಟಾ ಬಂದರು ನಿರ್ಮಾಣವು ಒಂದು ಪ್ರಮುಖ ಕಾರಣವಾಗಿದೆ. ಹಂಬನ್ ತೋಟಾ ಬಂದರು ನಿರ್ಮಾಣಕ್ಕಾಗಿ ಮಾಡಿದ ಖರ್ಚು ಮತ್ತು ಭ್ರಷ್ಟಾಚಾರದಿಂದ ದೇಶದ ಸಾಲ ಹೆಚ್ಚುತ್ತಾ ಹೋಯಿತು. ಬಂದರಿಗಾಗಿ ಪಡೆದ ವಿದೇಶಿ ಸಾಲ ಪಾವತಿಸಲು ವಾಣಿಜ್ಯ ದರದಲ್ಲಿ ಮುಕ್ತ ಮಾರುಕಟ್ಟೆಯಿಂದ ಸರ್ಕಾರವು ಸಾಲ ಪಡೆಯಲಾರಂಭಿಸಿತು. ಇದರ ಪರಿಣಾಮ 2010ರಲ್ಲಿ ದೇಶದ ಜಿಡಿಪಿ–ಸಾಲದ ಅನುಪಾತ ಶೇ.36ರಿಂದ 2015ರಲ್ಲಿ ಶೇ.94 ಕಳೆದ ವರ್ಷ ಈ ಅನುಪಾತ ಶೇ.110ಕ್ಕೇರಿದೆ. ಒಟ್ಟಿನಲ್ಲಿ ಶ್ರೀಲಂಕಾದ ಒಟ್ಟು ರಾಷ್ಟ್ರೀಯ ಉತ್ಪನ್ನಕ್ಕಿಂತ ಅನೇಕ ಪಟ್ಟು ಹೆಚ್ಚು ವಿದೇಶಿ ಸಾಲವಿದೆ. ಸಾಲದಿಂದ ಹೊರಬರಲು ಹಂಬನ್ ತೋಟಾ ಬಂದರನ್ನು 2017ರಲ್ಲಿ ಚೈನೀಸ್ ಮರ್ಚಂಟ್ಸ್ ಪೋರ್ಟ್ಸ್ ಎಂಬ ಕಂಪನಿಗೆ 99 ವರ್ಷಗಳ ಲೀಸ್‌ಗೆ ನೀಡಿ ನೀಡಿ 1.1. ಬಿಲಿಯನ್ ಡಾಲರ್ ಪಡೆಯಿತು. ಆದರೆ ಈ ಹಣ ದೊರೆಯುತ್ತಿದ್ದಂತೆ ಸಾಲಗಾರರಿಗೆ ಪಾವತಿಸುವುದರೊಂದಿಗೆ ಪೂರ್ಣ ಬರಿದಾಯಿತು.

ಕೆಲವೇ ವರ್ಷಗಳ ಹಿಂದೆ ದಕ್ಷಿಣ ಏಷ್ಯಾದಲ್ಲಿ ಶ್ರೀಲಂಕಾದ ಆರ್ಥಿಕತೆ ಬಲಿಷ್ಠವಾಗಿತ್ತು. ಮಾನವ ವಿಕಾಸದ ಸೂಚ್ಯಂಕದಲ್ಲಿ ಭಾರತದ ಎದುರು ಶ್ರೀಲಂಕಾದ ಪ್ರತಿ ನಾಗರಿಕನ ತಲಾ ಆದಾಯ ಶೇ. 50ರಷ್ಟು ಹೆಚ್ಚಿತ್ತು. 1983ರಿಂದ 2009 ರವರೆಗೆ, ನಡೆದ ಎಲ್‌ಟಿಟಿಇಯೊಂದಿಗಿನ ಯುದ್ಧ ಮುಕ್ತಾಯವಾದ ನಂತರ ಲಂಕಾ ಆರ್ಥಿಕತೆ ಮತ್ತೆ ಚೇತರಿಸಿತು. ಪ್ರವಾಸೋದ್ಯಮ, ಚಹಾ, ರಬ್ಬರ್ ಹಾಗೂ ವಸ್ತ್ರೋದ್ಯಮಗಳಿಂದ ಲಂಕಾ ಭಾರೀ ಪ್ರಮಾಣದ ಆದಾಯ ಗಳಿಸಿತು. ಇದೇ ಅವಧಿಯಲ್ಲಿ ಎಲ್‌ಟಿಟಿಇಯನ್ನು ನಿರ್ನಾಮಗೊಳಿಸಿದ ರಾಜಪಕ್ಸೆ ಪರಿವಾರ ದೇಶದ ಮೇಲೆ ತಮ್ಮ ಪ್ರಭುತ್ವ ಬಲಗೊಳಿಸಿತು. ರಾಜಪಕ್ಸೆಯವರು ಅಭಿವೃದ್ಧಿ ಹೆಸರಿನಲ್ಲಿ ಆರ್ಥಿಕವಾಗಿ ಅವ್ಯವಹಾರಿಕವಾದ, ಲಾಭದಾಯಕವಲ್ಲದ ಬೃಹತ್ ಮೂಲ ಸೌಕರ್ಯ ಯೋಜನೆಗಳ ಮೇಲೆ ಭಾರೀ ಪ್ರಮಾಣದ ಬಂಡವಾಳ ಹೂಡಿದರು. ಈ ಯೋಜನೆಗಳಿಂದ ದೇಶದ ಸಾಲವು ಜಿಡಿಪಿಯ ಶೇ. 80ಕ್ಕೆ ತಲುಪಿತು. ಹೀಗಾಗಿ 2015ರಲ್ಲಿ ರಾಜಪಕ್ಸೆ ಚುನಾವಣೆಯಲ್ಲಿ ಪರಾಭವಗೊಂಡರು. 2016ರಲ್ಲಿ ಐಎಂಎಫ್ ನೀಡಿದ ಸಾಲದಿಂದ ಆರ್ಥಿಕತೆ ತುಸು ಚೇತರಿಸಿತು. ಈ ಅವಕಾಶ ಉಪಯೋಗಿಸಿ, ಉಚಿತಗಳ ಆಮಿಷ ನೀಡಿ ರಾಜಪಕ್ಸೆ ಪರಿವಾರ ಲಂಕಾದಲ್ಲಿ ಮತ್ತೆ ಅಧಿಕಾರಕ್ಕೇರಿತು

ತೆರಿಗೆಗಳಲ್ಲಿ ಭಾರೀ ಕಡಿತ

ಹಿಂದಿನ ಅಧಿಕಾರಾವಧಿಯಲ್ಲಿ ದೇಶವನ್ನು ಅಧೋಗತಿಗೆ ದೂಡಿದ್ದರ ಅರಿವಿದ್ದರೂ ಲಂಕಾ ಮತದಾರರು ದುರಾಸೆ, ಸ್ವಾರ್ಥದಿಂದ ದೇಶದ ಹಿತ ಮರೆತು ರಾಜಪಕ್ಸೆ ಪರಿವಾರಕ್ಕೆ ಮತ್ತೆ ಅಧಿಕಾರ ನೀಡಿದರು. ರಾಜಪಕ್ಸೆ ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ ದೇಶದಲ್ಲಿನ ಎಲ್ಲಾ ವಸ್ತುಗಳ ಮೇಲೆ ಏಕರೂಪದ ಶೇ. 8 ಜಿಎಸ್‌ಟಿ ನಿಗದಿಪಡಿಸಿತು. ಇದರಿಂದ ಅವಶ್ಯಕ ವಸ್ತುಗಳು ಅಗ್ಗವಾದರೂ ಸರಕಾರಕ್ಕೆ ಬರುತ್ತಿದ್ದ ತೆರಿಗೆ ಪ್ರಮಾಣ ಪಾತಾಳಕ್ಕಿಳಿಯಿತು. ಆದಾಯ ತೆರಿಗೆಯ ಗರಿಷ್ಠ ಮಿತಿಯನ್ನು ಐದು ಲಕ್ಷದಿಂದ ಮೂವತ್ತು ಲಕ್ಷಕ್ಕೆ ಏರಿಸಲಾಯಿತು. ಈ ಪ್ರಮಾಣದ ಆದಾಯವಿರುವವರ ಸಂಖ್ಯೆ ತೀರಾ ಕಡಿಮೆ ಇತ್ತು. ಇವರಿಗೂ ಗರಿಷ್ಠ ತೆರಿಗೆಯನ್ನು ಶೇ.15ಕ್ಕೆ ಇಳಿಸಲಾಯಿತು. ಶೇ.2ರಷ್ಟಿದ್ದ ರಾಷ್ಟ್ರ ನಿರ್ಮಾಣ ಸೆಸ್‌ನ್ನು ಕಿತ್ತು ಹಾಕಲಾಯಿತು. ಧಾರ್ಮಿಕ ಸಂಸ್ಥಾನಗಳ ಮೇಲಿದ್ದ ಕೆಲವು ಮಾದರಿಯ ತೆರಿಗೆಗಳನ್ನು ಸಂಪೂರ್ಣ ತೆಗೆದು ಹಾಕಿ ಲಂಕೆಯಲ್ಲಿ ಶಕ್ತಿಶಾಲಿಯಾಗಿರುವ ಬೌದ್ಧ ಭಿಕ್ಷುಗಳನ್ನು ಸಂತೋಷಪಡಿಸಲಾಯಿತು. ಚಹಾ ತೋಟಗಳ ಕಾರ್ಮಿಕರ ಕನಿಷ್ಠ ದಿನಗೂಲಿಯನ್ನು ರೂ. 1000ಕ್ಕೆ ನಿಗದಿಗೊಳಿಸಲಾಯಿತು. ಇದರಿಂದ ಚಹಾ ತೋಟಗಳು ನಷ್ಟದಿಂದಾಗಿ ಮುಚ್ಚಲ್ಪಟ್ಟವು. ಕಾರ್ಮಿಕರು ಬೀದಿ ಪಾಲಾದರು. ಇದೇ ರೀತಿ ಖಾಸಗಿ ಸಂಸ್ಥೆಗಳಲ್ಲಿ, ವಾಣಿಜ್ಯೋದ್ಯಮಗಳಲ್ಲಿನ ನೌಕರರಿಗೆ ತಿಂಗಳ ಕನಿಷ್ಠ ವೇತನ ರೂ. 12,500 ಏರಿಸಲಾಯಿತು. ಭಾರತದಿಂದ ಪೆಟ್ರೋಲ್, ಡೀಸೆಲ್ ಆಮದು ಮಾಡಿಕೊಂಡು ಖರೀದಿ ಬೆಲೆಗಿಂತ ಕೃತ್ರಿಮವಾಗಿ ಕಡಿಮೆ ದರದಲ್ಲಿ ಮಾರಾಟ ಮಾಡುತ್ತಿತ್ತು. ಇವುಗಳ ಮಾರಾಟದಿಂದ ಸರಕಾರದ ಖಜಾನೆಗೆ ಲಾಭವೇ ಇರುತ್ತಿರಲಿಲ್ಲ. ಈ ಎಲ್ಲಾ ದಿವಾಳಿ ಆರ್ಥಿಕ ನೀತಿಗಳಿಂದ ಹೆಪ್ಪಿನೆಸ್ ಸೂಚ್ಯಂಕದಲ್ಲಿ ಕೃತ್ರಿಮವಾಗಿ ಶ್ರೀಲಂಕಾವು ಭಾರತಕ್ಕಿಂತ ಮೇಲಿನ ಸ್ಥಾನದಲ್ಲಿರುತ್ತಿತ್ತು.

2019ರಲ್ಲಿ ಕ್ರೈಸ್ತರ ಈಸ್ಟರ್ ಹಬ್ಬದ ವೇಳೆ ಇಸ್ಲಾಮಿಕ್ ಮೂಲಭೂತವಾದಿಗಳು ರಾಜಧಾನಿ ಕೊಲಂಬೊದ ಕೆಲವು ಚರ್ಚ್‌ಗಳ ಮೇಲೆ ಮಾಡಿದ ಸರಣಿ ಆತ್ಮಹತ್ಯಾ ಬಾಂಬ್ ದಾಳಿಯಲ್ಲಿ 269 ಜನರು ಸಾವಿಗೀಡಾಗಿ 500ಕ್ಕಿಂತ ಹೆಚ್ಚು ಜನ ಗಾಯಗೊಂಡರು. ಈ ದಾಳಿಗಳು ಹಾಗೂ ನಂತರ ಕೋವಿಡ್–19ನಿಂದಾದ ಲಾಕ್‌ಡೌನ್‌ಗಳು ಲಂಕಾದ ಆರ್ಥಿಕತೆಗೆ ಬಲವಾದ ಹೊಡೆತ ನೀಡಿದವು. ಕೊರೊನಾದಿಂದ ಚೇತರಿಸುವ ಹಂತದಲ್ಲಿ ರಾಜಪಕ್ಸೆ ಸರಕಾರವು ಯಾವುದೇ ಪೂರ್ವ ತಯಾರಿ ಇಲ್ಲದೇ ಕೃಷಿ ಕ್ಷೇತ್ರವನ್ನು ಸಂಪೂರ್ಣ ಸಾವಯವ ಮಾಡುವ ಆತುರದ ಘೋಷಣೆ ಮಾಡಿತು. 2021, ಏಪ್ರಿಲ್‌ನಲ್ಲಿ ಎಲ್ಲಾ ರೀತಿಯ ರಾಸಾಯನಿಕ ಗೊಬ್ಬರ, ಕೀಟನಾಶಕಗಳನ್ನು ಕೃಷಿಯಲ್ಲಿ ಬಳಸುವುದರ ಮೇಲೆ ಸಂಪೂರ್ಣ ನಿಷೇಧ ವಿಧಿಸಲಾಯಿತು. ಈ ನಿರ್ಣಯ ಶ್ರೀಲಂಕಾ ಪಾಲಿಗೆ ಸಂಪೂರ್ಣ ವಿನಾಶಕಾರಿಯಾಯಿತು. ಕೃಷಿ ಉತ್ಪಾದನೆ ಭಾರೀ ಪ್ರಮಾಣದಲ್ಲಿ ಕುಸಿಯಿತು. ಭತ್ತದ ಉತ್ಪಾದನೆಯಲ್ಲಿ ಶೇ.20, ಚಹಾದಲ್ಲಿ ಶೇ. 60 ಹಾಗೂ ಇತರ ಎಲ್ಲಾ ಕೃಷಿ ಉತ್ಪನ್ನಗಳ ಉತ್ಪಾದನೆಯಲ್ಲಿ ಭಾರೀ ಕುಸಿತ ಉಂಟಾಯಿತು. ಪರಿಣಾಮವಾಗಿ ಆಹಾರ ಧಾನ್ಯಗಳ ಬೆಲೆ ಗಗನಕ್ಕೇರಿತು. ಹಣದುಬ್ಬರ ನಿಯಂತ್ರಣ ಮೀರಿತು. ಕರೆನ್ಸಿ ಅಪಮೌಲ್ಯ, ವಿದ್ಯುತ್ ಕೊರತೆ, ಲೀಟರ್ ಒಂದರ ಪೆಟ್ರೋಲ್ ಬೆಲೆ ರೂ. 500 ದಾಟಿದೆ. ಗೊಟಬಾಯ ರಾಜಪಕ್ಸೆಯವರು ದೇಶದ ವಿದೇಶಿ ವಿನಿಮಯ ಬರಿದಾಗುತ್ತಿದ್ದಂತೆ 2021, ಸೆಪ್ಟೆಂಬರ್‌ನಲ್ಲಿ ಆಮದುಗಳನ್ನು ನಿಷೇಧಿಸಿ ಆರ್ಥಿಕ ತುರ್ತು ಪರಿಸ್ಥಿತಿ ಘೋಷಿಸಿದರು. ವಿದೇಶಗಳಿಂದ ಆಮದಾಗುವ ಕಚ್ಚಾ ವಸ್ತುಗಳಿಂದಲೇ ನಡೆಯುತ್ತಿದ್ದ ವಸ್ತ್ರೋದ್ಯಮವು ನೆಲಕಚ್ಚಿ ಈ ಕ್ಷೇತ್ರದ ಕಾರ್ಮಿಕರು ಬೀದಿ ಪಾಲಾದರು. ಲಂಕಾ ಸರಕಾರವು ದಿ. 12.4.2022ರಂದು ವಿದೇಶಿ ಸಾಲ ಮರುಪಾವತಿಸಲು ಸಾಧ್ಯವಿಲ್ಲವೆಂದು ಘೋಷಿಸಿತು.



> ಎಲ್ಲಿಯವರೆಗೆ ಆರ್ಥಿಕವಾಗಿ ಶಕ್ತವಾಗಿರುವ ಭಾರತೀಯರು ಸರಕಾರದ ಉಚಿತ ಯೋಜನೆಗಳ ಉಚಿತ ಭಾಗ್ಯಗಳ ಲಾಭವನ್ನು ಪಡೆಯಬೇಕೆಂಬ ದುರಾಶೆ ಹೊಂದಿರುತ್ತಾರೋ ಅಲ್ಲಿಯವರೆಗೆ ಶ್ರೀಲಂಕಾದಂತಹ ಪರಿಸ್ಥಿತಿ ಭಾರತಕ್ಕೂ ಬರುವಂತಹ ಸಾಧ್ಯತೆ ತಳ್ಳಿ ಹಾಕುವಂತಿಲ್ಲ.

ಲಂಕಾ ಅರ್ಥ ವ್ಯವಸ್ಥೆ ಸಂಪೂರ್ಣ ನೆಲಕಚ್ಚಿರುವುದರಿಂದ ಪ್ರಧಾನಿ ರನಿಲ್ ವಿಕ್ರಮ ಸಿಂಘೆಯವರು ಜೂ.19ರಿಂದ ದೇಶದ ಸರಕಾರಿ ಕಚೇರಿಗಳು, ಶಾಲಾ ಕಾಲೇಜುಗಳಿಗೆ ರಜೆ ಸಾರಿದ್ದಾರೆ. ವಿಕ್ರಮ ಸಿಂಘೆ ತಿಳಿಸುವಂತೆ ದೇಶದ ಶೇ.20ರಷ್ಟು ಜನರಿಗೆ ಒಂದು ಹೊತ್ತಿನ ಊಟವು ದುರ್ಬರವಾಗಲಿದೆ ಎಂದು ಚಿಂತೆ ವ್ಯಕ್ತಪಡಿಸಿದ್ದಾರೆ. ಕೆಲವು ಖಾಸಗಿ ಸಂಸ್ಥೆಗಳ ಪ್ರಕಾರ ಲಂಕಾದ ಪ್ರತಿ ಹತ್ತರಲ್ಲಿ ಒಂಬತ್ತು ಕುಟುಂಬಗಳು ಒಂದೊತ್ತಿನ ಊಟಕ್ಕೆ ಪರದಾಡುತ್ತಿವೆ. ಆರ್ಥಿಕ ಬಿಕ್ಕಟ್ಟಿನ ಪರಿಣಾಮ ವ್ಯಬಿಚಾರ ಏರುತ್ತಿದೆ. ಪರಿಸ್ಥಿತಿ ಸುಧಾರಿಸಲು ಲಂಕಾ ಸೇನೆ, ಸರಕಾರಿ ನೌಕರರನ್ನು ಹೊಲ ಗದ್ದೆಗಳಲ್ಲಿ ವ್ಯವಸಾಯ ಮಾಡಲು ನಿಯೋಜಿಸಲಾಗಿದೆ. ದೇಶದಲ್ಲಿ ಜನಪ್ರಿಯ ಸರಕಾರ ಸ್ಥಾಪಿಸಲು ಎಲ್ಲಾ ರಾಜಕೀಯ ನಾಯಕರು ನಿರಾಕರಿಸಿದ್ದರಿಂದ ದಿ. 16.5.2022ರಂದು ಹಿರಿಯ ಅನುಭವಿ ರಾಜಕಾರಣಿ ರನಿಲ್ ವಿಕ್ರಮ ಸಿಂಘೆ ನೇತೃತ್ವದಲ್ಲಿ ಮತ್ತೆ ಸರಕಾರ ರಚಿಸಲಾಗಿದೆ. ಪ್ರಧಾನಿಯಾಗುತ್ತಿದ್ದಂತೆ ವಿಕ್ರಮ ಸಿಂಘೆಯವರು ಜನತೆಗೆ ದೇಶದ ಆರ್ಥಿಕ ಪರಿಸ್ಥಿತಿ ಚಿಂತಾಜನಕವಾಗಿದೆ ಎಂದಿದ್ದಾರೆ.

ಶ್ರೀಲಂಕೆಯ ಧಾರಣಶಕ್ತಿಗೆ ಮೀರಿದ ನಿಷ್ಪ್ರಯೋಜಕ ಯೋಜನೆಗಳು. ಭಾರೀ ಪ್ರಮಾಣದ ತೆರಿಗೆ ಕಡಿತ, ಅವಸರದ ಕೃಷಿ ವ್ಯವಸಾಯ ಸಂಬಂಧಿ ನಿರ್ಣಯಗಳು, ದೇಶದ ಕುರಿತು ಚಿಂತಿಸದೆ ಸರಕಾರ ನೀಡಿದ ಉಚಿತ ಯೋಜನೆಗಳ ಲಾಭವನ್ನು ದುರಾಸೆಯಿಂದ ಅನುಭವಿಸಿದ ಲಂಕಾ ಪ್ರಜೆಗಳ ಮೂರ್ಖತನದಿಂದಾಗಿ ಲಂಕೆಗೆ ಅಕ್ಷರಶಃ ಬೆಂಕಿ ಬಿದ್ದಿದೆ. ಲಂಕೆಯ ದುರಾದೃಷ್ಟಕ್ಕೆ ಅಲ್ಲಿನ ಪ್ರಜೆಗಳೇ ಸಂಪೂರ್ಣ ಕಾರಣರಾಗಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಮೋದಿ ಸರಕಾರವನ್ನು ವಿರೋಧಿಸುವ ಕೆಲವು ಮಾಧ್ಯಮಗಳು, ರಾಜಕಾರಣಿಗಳು, ಬುದ್ಧಿಜೀವಿಗಳು, ಕೆಲವು ಮಾಹಿತಿಗಳನ್ನು ಮುಂದಿಟ್ಟು, ಕೆಲವನ್ನು ಮರೆಮಾಚಿ ಸದ್ಯದಲ್ಲೇ ಭಾರತಕ್ಕೂ ಶ್ರೀಲಂಕಾ ಪರಿಸ್ಥಿತಿ ಬರಲಿದೆ ಎಂಬ ಅಪಪ್ರಚಾರದ ಮೂಲಕ ಜನರಲ್ಲಿ ಭಯ, ಆತಂಕ ಹುಟ್ಟಿಸಿ ದೇಶದಲ್ಲಿ ಅಶಾಂತಿ ಸೃಷ್ಟಿಸುವ ಹುನ್ನಾರದಲ್ಲಿವೆ. ಅವರು ತಿಳಿಸುವಂತೆ ಶ್ರೀಲಂಕಾದ ವಿದೇಶ ಸಾಲ 51 ಬಿಲಿಯನ್ ಡಾಲರ್‌ಗೆ ಹೋಲಿಸಿದಲ್ಲಿ ಭಾರತದ ವಿದೇಶಿ ಸಾಲ ಶ್ರೀಲಂಕಾಗಿಂತ 12 ಪಟ್ಟು ಹೆಚ್ಚು. ಅಂದರೆ 620.700 ಬಿಲಿಯನ್ ಡಾಲರ್ ಆಗಿದೆ. ಆದರೆ ಈ ಅಂಕಿ ನೀಡುವಲ್ಲಿ ಪ್ರಮುಖ ಮಾಹಿತಿಯನ್ನು ಉದ್ದೇಶಪೂರ್ವಕವಾಗಿ ಮರೆಮಾಚುತ್ತಿದ್ದಾರೆ. ವಾಸ್ತವವಾಗಿ ಯಾವುದೇ ದೇಶದ ಆರ್ಥಿಕ ಸಾಮರ್ಥ್ಯವನ್ನು ಆದೇಶದ ಜಿಡಿಪಿ–ಸಾಲದ ನಡುವಿನ ಅನುಪಾತದ ಮೇಲೆ ನಿರ್ಧರಿಸಲಾಗುತ್ತದೆ. ಶ್ರೀಲಂಕಾದ ವಿದೇಶಿ ಸಾಲದ ಪ್ರಮಾಣವು ಜಿಡಿಪಿಗಿಂತ ಶೇ. 119.9 ಅಧಿಕವಾಗಿದ್ದು, ಲಂಕೆ ಅಕ್ಷರಶಃ ದಿವಾಳಿಯಾಗಿದೆ. ಆದರೆ ಭಾರತದ ವಿದೇಶಿ ಸಾಲ ಪ್ರಮಾಣವು ಜಿಡಿಪಿಯ ಕೇವಲ ಶೇ.19.9 ರಷ್ಟಿದೆ.ಈ ದೃಷ್ಟಿಯಿಂದ ಭಾರತ ಆರ್ಥಿಕವಾಗಿ ಸದೃಢವಾಗಿದೆ. ಜಗತ್ತಿನ ಪ್ರಬಲ ರಾಷ್ಟ್ರಗಳೊಂದಿಗೆ ಹೋಲಿಸಿದರೂ ಭಾರತವಿಂದು ಆರ್ಥಿಕ ಶಕ್ತಿಯಾಗಿದೆ. ಜಗತ್ತಿನ ಶಕ್ತಿಶಾಲಿ ಸಂಪನ್ನ ರಾಷ್ಟ್ರವೆನಿಸಿರುವ ಅಮೆರಿಕದ ವಿದೇಶಿ ಸಾಲವು 30400 ಬಿಲಿಯನ್ ಡಾಲರ್, ಚೀನಾದ ವಿದೇಶ ಸಾಲ 13000 ಬಿಲಿಯನ್ ಡಾಲರ್, ಬ್ರಿಟನ್ 9020 ಬಿಲಿಯನ್ ಡಾಲರ್, ಫ್ರಾನ್ಸ್‌ಗೆ 7320 ಬಿಲಿಯನ್ ಡಾಲರ್ ವಿದೇಶ ಸಾಲವಿದೆ. ಈ ದೇಶಗಳೊಂದಿಗೆ ಹೋಲಿಸಿದಲ್ಲಿ ಭಾರತವಿಂದು ಆರ್ಥಿಕವಾಗಿ ಸೂಪರ್ ಪವರ್ ಆಗಿದೆ. ನೀತಿ ಆಯೋಗದ ಮಾಜಿ ಉಪಾಧ್ಯಕ್ಷ ಅರವಿಂದ ಪನಗಾರಿಯಾರವರು ಭಾರತದ ಆರ್ಥಿಕ ಸ್ಥಿತಿಯನ್ನು ಶ್ರೀಲಂಕೆಯೊಂದಿಗೆ ಹೋಲಿಸುವುದು ಮೂರ್ಖತನದ ಪರಮಾವಧಿ ಎಂದಿದ್ದಾರೆ. ಆದರೆ ಎಲ್ಲಿಯವರೆಗೆ ಆರ್ಥಿಕವಾಗಿ ಶಕ್ತವಾಗಿರುವ ಭಾರತೀಯರು ಸರಕಾರದ ಉಚಿತ ಯೋಜನೆಗಳ ಉಚಿತ ಭಾಗ್ಯಗಳ ಲಾಭವನ್ನು ಪಡೆಯಬೇಕೆಂಬ ದುರಾಸೆ ಹೊಂದಿರುತ್ತಾರೋ ಅಲ್ಲಿಯವರೆಗೆ ಶ್ರೀಲಂಕಾದಂತಹ ಪರಿಸ್ಥಿತಿ ಭಾರತಕ್ಕೂ ಬರುವಂತಹ ಸಾಧ್ಯತೆ ತಳ್ಳಿ ಹಾಕುವಂತಿಲ್ಲ.

ತೈವಾನ್ ಮತ್ತೊಂದು ಉಕ್ರೇನ್ ಆಗಲಿದೆಯೇ?

■ ಡಾ.ಕೆ.ವಿ.ವಾಸು
ಮೊ: 9341731661

ಅಮೆರಿಕ ಸಂಯುಕ್ತ ಸಂಸ್ಥಾನದ ಸ್ಪೀಕರ್ 82 ವರ್ಷ ವಯಸ್ಸಿನ ಶ್ರೀಮತಿ ನಾನ್ಸಿ ಪೆಲೋಸಿಯವರು ಚೀನಾದ ಪ್ರತಿರೋಧದ ನಡುವೆಯೂ ತೈವಾನ್ ರಾಜಧಾನಿ ತೈಪೆಗೆ ಭೇಟಿ ನೀಡಿದ್ದಾರೆ. ಪೂರ್ವ ಏಷ್ಯಾದ ಒಂದು ಭಾಗದಲ್ಲಿರುವ ತೈವಾನ್ ಭೌಗೋಳಿಕವಾಗಿ ಚೈನಾ ದೇಶಕ್ಕೆ ಸೇರಿದ್ದರೂ, ಸ್ವಯಂ ಆಡಳಿತ ಹೊಂದಿರುವ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ. 1949ರಲ್ಲಿ ನಡೆದ ಅಂತರ್ಯುದ್ಧದ ನಂತರ ಈ ದೇಶ ಸ್ವತಂತ್ರ ರಾಷ್ಟ್ರವೆಂದು ಘೋಷಿಸಿಕೊಂಡಿದೆ. ಈ ಪುಟ್ಟ ರಾಷ್ಟ್ರವನ್ನು ತನ್ನದೇ ಅವಿಭಾಜ್ಯ ಅಂಗವೆಂದು ಚೀನಾ ಪರಿಗಣಿಸಿದ್ದು, ಈ ದೇಶದ ವಿಷಯದಲ್ಲಿ ಅನ್ಯ ರಾಷ್ಟ್ರಗಳ ಹಸ್ತಕ್ಷೇಪವನ್ನು ಚೀನಾ ವಿರೋಧಿಸುತ್ತಲೇ ಬಂದಿದೆ. ಕಳೆದ ಇಪ್ಪತ್ತೈದು ವರ್ಷಗಳ ನಂತರ, ಅಮೆರಿಕಾದ ಹಿರಿಯ ರಾಜಕಾರಣಿಯೊಬ್ಬರು ಈ ದೇಶಕ್ಕೆ ಭೇಟಿ ನೀಡಿರುವುದು ಜಾಗತಿಕ ಮಟ್ಟದಲ್ಲಿ ಗಮನ ಸೆಳೆದಿದೆ. ತೈವಾನ್ ಮೇಲೆ ತಾನು ಮಿಲಿಟರಿ ದಾಳಿ ನಡೆಸುವ ಸೂಚನೆ ನೀಡಿರುವ ಚೈನಾ, ತೈವಾನ್ ದೇಶವನ್ನು ತನ್ನ ದೇಶದಿಂದ ಬೇರ್ಪಟ್ಟಿರುವ ಒಂದು ಪ್ರದೇಶ ಎಂದು ಭಾವಿಸಿ ಮುಂದೆ ಎಂದಾದರೂ ಒಂದು ದಿನ ಬಲ ಪ್ರಯೋಗಿಸಿಯಾದರೂ ಸರಿ ತೈವಾನ್ ಅನ್ನು ವಶಪಡಿಸಿಕೊಳ್ಳುವ ಎಚ್ಚರಿಕೆ ನೀಡಿದೆ. ಪ್ರಸ್ತುತ ರಷ್ಯಾ ಮತ್ತು ಉಕ್ರೇನ್ ನಡುವೆ ನಡೆಯುತ್ತಿರುವ ಘೋರ ಯುದ್ಧ ಮಾಸುವ ಮುನ್ನವೇ ಜಗತ್ತು ಮತ್ತೊಂದು ಯುದ್ಧಕ್ಕೆ ಸಾಕ್ಷಿಯಾಗಲಿದೆಯೇ ಎಂಬ ಆತಂಕ ವಿಶ್ವ ಮಟ್ಟದಲ್ಲಿ ಆವರಿಸಿದೆ. ಇದೇ ರೀತಿ ಕುವೈತ್ ಅನ್ನು ತನ್ನ ದೇಶದ ಅವಿಭಾಜ್ಯ ಅಂಗವೆಂದು ಘೋಷಿಸಿ, 1990ರಲ್ಲಿ ಕೊಲ್ಲಿ ಯುದ್ಧಕ್ಕೆ ಕಾರಣನಾಗಿ, ಲಕ್ಷಾಂತರ ಮಂದಿ ಮಾರಣ ಹೋಮಕ್ಕೆ ಕಾರಣನಾದ ಇರಾಕ್ ಸರ್ವಾಧಿಕಾರಿ ಸದ್ದಾಂ ಹುಸೇನನ ಅಂತ್ಯ ಹೇಗಾಯಿತು ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಬಲಾಢ್ಯ ರಾಷ್ಟ್ರಗಳು ತಮ್ಮ ಸುತ್ತಮುತ್ತಲಿನ ಸಣ್ಣ ರಾಷ್ಟ್ರಗಳನ್ನು ನುಂಗುತ್ತಿರುವ ಸಾಕಷ್ಟು ಉದಾಹರಣೆಗಳನ್ನು ಇತಿಹಾಸದಿಂದ ಹೆಕ್ಕಿ ತೆಗೆಯಬಹುದು.



ಕಳೆದ ಮೂರು ತಿಂಗಳ ಅವಧಿಯಲ್ಲಿ 465 ಬಾರಿ ಚೈನಾದ ವಿಮಾನಗಳು ತೈವಾನ್ ವಾಯು ಪ್ರದೇಶದ ಮೇಲೆ ಹಾರಾಟ ನಡೆಸಿವೆ. ಚೈನಾದಲ್ಲಿ ಕಮ್ಯೂನಿಸ್ಟ್ ಪಕ್ಷ ಆಡಳಿತದಲ್ಲಿದ್ದರೂ, ಅದರ ಮಗ್ಗುಲಲ್ಲಿ ಇರುವ ತೈವಾನಿನಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯಿದೆ. ಈ ದೇಶದ ಮಹಿಳಾ ರಾಷ್ಟ್ರಪತಿಯಾಗಿ ಶ್ರೀಮತಿ ತ್ಸಾಯ್ ಇಂಗ್ ವೆನ್ 2016ರಿಂದ ಅಧಿಕಾರದಲ್ಲಿ ಇದ್ದಾರೆ. ತೈವಾನ್ ಸರ್ಕಾರದೊಂದಿಗೆ ಉತ್ತಮ ಸಂಬಂಧ ಹೊಂದಿರುವ ಅಮೆರಿಕಾ, ಒಂದು ವೇಳೆ ತೈವಾನ್ ದೇಶವನ್ನು ಚೈನಾ ವಶಪಡಿಸಿಕೊಳ್ಳಲು ಯತ್ನಿಸಿದರೆ, ತಾನು ಮಧ್ಯ ಪ್ರವೇಶಿಸುವ ವಾರ್ನಿಂಗ್ ನೀಡಿದೆ. ರಷ್ಯಾ ಮತ್ತು ಉಕ್ರೇನ್ ನಡುವೆ ನಡೆಯುತ್ತಿರುವ ಯುದ್ಧದಲ್ಲಿ ಸಹ, ಅಮೆರಿಕಾ ಉಕ್ರೇನ್‌ಗೆ ಶಸ್ತ್ರಾಸ್ತ್ರಗಳನ್ನು ಪೂರೈಸುತ್ತಾ ನೈತಿಕ ಬೆಂಬಲ ನೀಡಿರುವುದನ್ನು ಇಲ್ಲಿ ಗಮನಿಸಬಹುದು. ಪ್ರಪಂಚದ ಹೆಚ್ಚಿನ ದೈನಂದಿನ ಎಲೆಕ್ಟ್ರಾನಿಕ್ ಉಪಕರಣಗಳನ್ನು ತೈವಾನ್ ತಯಾರಿಸುತ್ತಿದೆ. ಸುಮಾರು 168 ಭೂಪ್ರದೇಶಗಳನ್ನು ಹೊಂದಿರುವ ತೈವಾನಿನ ಜನಸಂಖ್ಯೆ ಕೇವಲ 2.36 ಕೋಟಿ. ತೈವಾನ್‌ನ ಜನರು ಚೈನಾದಿಂದ ವಲಸೆ ಬಂದ ಮೂಲ ನಿವಾಸಿಗಳು ಎಂದು ಹೇಳಲಾಗುತ್ತದೆ. ಕಮ್ಯುನಿಸ್ಟ್ ಚೈನಾದ ಮಗ್ಗುಲಲ್ಲಿಯೇ ಇರುವ ಈ ಪುಟ್ಟ ದೇಶ ಪ್ರಜಾಪ್ರಭುತ್ವ ರಾಷ್ಟ್ರವಾಗಿರುವುದು ಸಂತಸದ ವಿಷಯ. ಈ ಪುಟಾಣಿ ದೇಶದಲ್ಲಿ ಡೆಮಾಕ್ರಟಿಕ್ ಪ್ರೋಗ್ರೆಸಿವ್ ಪಾರ್ಟಿ, ಸೋಶಿಯಲ್ ಡೆಮಾಕ್ರಟಿಕ್ ರಿಪಬ್ಲಿಕ್ ಪಾರ್ಟಿ ಸೇರಿದಂತೆ ಹಲವಾರು ರಾಜಕೀಯ ಪಕ್ಷಗಳಿವೆ

ತೈವಾನ್ ಸ್ವತಂತ್ರ ರಾಷ್ಟ್ರವೆಂದು ಘೋಷಿಸಿಕೊಂಡಿದ್ದರೂ, ಕೇವಲ ಬೆರಳೆಣಿಕೆಯಷ್ಟು ರಾಷ್ಟ್ರಗಳು ಮಾತ್ರ ಅದಕ್ಕೆ ಬೆಂಬಲ ನೀಡಿವೆ. ವಿಶ್ವದ 14 ಸಣ್ಣ ಪುಟ್ಟ ಸ್ವತಂತ್ರ ರಾಷ್ಟ್ರಗಳು ತೈವಾನ್ ಅನ್ನು ಒಂದು ಸ್ವತಂತ್ರ ದೇಶ ಎಂದು ಒಪ್ಪಿಕೊಂಡು, ಆ ದೇಶದ ಜೊತೆ ರಾಜತಾಂತ್ರಿಕ ಸಂಬಂಧಗಳನ್ನು ಹೊಂದಿವೆ. ಅಮೆರಿಕಾ ಸಹ ತೈವಾನ್ ಜೊತೆ ಪೂರ್ಣ ಪ್ರಮಾಣದ ರಾಜತಾಂತ್ರಿಕ ಸಂಬಂಧಗಳನ್ನು ಹೊಂದಿಲ್ಲವಾದರೂ ಅದರ ಮಿತ್ರ ರಾಷ್ಟ್ರವಾಗಿದೆ. 1949ರಿಂದ 1971ರವರೆಗೆ ತೈವಾನ್ ಅನ್ನು ಸ್ವತಂತ್ರ ದೇಶ ಎಂದು ಘೋಷಿಸಿದ್ದ ವಿಶ್ವಸಂಸ್ಥೆ, ಅಲ್ಲಿಂದೀಚೆಗೆ, ಚೈನಾದ ಒತ್ತಡದ ಪರಿಣಾಮದಿಂದಾಗಿ, ತೈವಾನ್ ದೇಶಕ್ಕೆ ಸ್ವತಂತ್ರ ರಾಷ್ಟ್ರದ ಸ್ಥಾನಮಾನ ನೀಡದೇ ಅದನ್ನು ಭೌಗೋಳಿಕ ಪ್ರದೇಶ ಎಂದಷ್ಟೇ ಗುರ್ತಿಸಿದೆ. ಸಿಂಗಾಪುರ ಮತ್ತು ಹಾಂಕಾಂಗ್‌ಗಳು ಸ್ವತಂತ್ರ ಆಡಳಿತ ವ್ಯವಸ್ಥೆ ಹೊಂದಿದ್ದರೂ, ಚೈನಾದ ಅಧೀನದಲ್ಲಿವೆ. ತೈವಾನ್‌ನಂತೆ, ಟಿಬೆಟ್ ಕೂಡ ತನಗೆ ಸೇರಿದ ಪ್ರದೇಶ ಎಂದು ಘೋಷಿಸಿಕೊಂಡು ಅಲ್ಲಿನ ಟಿಬೆಟಿಯನ್ ವಿರುದ್ಧ ಚೀನಾ ದಮನಕಾರಿ ನೀತಿ ಅನುಸರಿಸುತ್ತಿರುವುದನ್ನು ಇಲ್ಲಿ ಉಲ್ಲೇಖಿಸಬಹುದು. ಅಲ್ಲಿನ ಧಾರ್ಮಿಕ ನಾಯಕ ವಿಶ್ವಶಾಂತಿ ನೋಬೆಲ್ ಪ್ರಶಸ್ತಿ ಪಡೆದಿರುವ ಹಿರಿಯ ಧಾರ್ಮಿಕ ಮುತ್ಸದ್ದಿ ದಲಾಯಿ ಲಾಮಾ ಕಳೆದ 50 ವರ್ಷಗಳಿಗೂ ಹೆಚ್ಚು ಕಾಲ ಸಾತ್ವಿಕ ಹೋರಾಟ ನಡೆಸುತ್ತಾ, ಟಿಬೆಟ್ಟಿನ ಸ್ವಾಯತ್ತ ಸ್ಥಾನಮಾನಕ್ಕೆ ಹೋರಾಡುತ್ತಿರುವುದು ಇಡೀ ಜಗತ್ತಿನ ಗಮನ ಸೆಳೆದಿದೆ. ಆದರೂ ಚೈನಾ ತನ್ನ ಹಠಮಾರಿ ಧೋರಣೆ ಬಿಡುತ್ತಿಲ್ಲ.

ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಖಾಯಂ ಸದಸ್ಯತ್ವ ಹೊಂದಿರುವ ಚೈನಾ, ತೈವಾನ್ ವಿಷಯ ಪ್ರಸ್ತಾಪವಾದಾಗಲೆಲ್ಲಾ ತನ್ನ ವೀಟೋ ಅಧಿಕಾರ ಚಲಾಯಿಸುತ್ತಾ ಬಂದಿದೆ. ಅನೇಕ ದೇಶಗಳು ತೈವಾನ್ ಅನ್ನು ಮಿತ್ರ ರಾಷ್ಟ್ರ ಎಂದು ಮಾನಸಿಕವಾಗಿ ಒಪ್ಪಿಕೊಂಡಿದ್ದರೂ, ಚೀನಾದ ಬೆದರಿಕೆಯಿಂದ ಅದಕ್ಕೆ ರಾಜತಾಂತ್ರಿಕ ಸ್ಥಾನಮಾನ ನೀಡಿಲ್ಲ. ಆದರೆ ಭಾರತ ಮಾತ್ರ ತೈವಾನ್ ದೇಶದೊಂದಿಗೆ ದ್ವಿಪಕ್ಷೀಯ ಸಂಬಂಧಗಳನ್ನು ಹೊಂದಿದೆ. ಏಪ್ರಿಲ್ 2020ರಿಂದ ಮಾರ್ಚ್ 2022ರ ಅಂತ್ಯದವರೆಗೆ ತೈವಾನ್ ಭಾರತದಲ್ಲಿ ಹೂಡಿದ್ದ ವಿದೇಶಿ ಹೂಡಿಕೆ 724.00 ಮಿಲಿಯನ್ ಡಾಲರ್‌ಗಳಾಗಿದ್ದವು. ಈಗಲೂ ಸಹ ತೈವಾನ್ ಭಾರತದೊಂದಿಗೆ ಉತ್ತಮ ವ್ಯಾಪಾರ ಮತ್ತು ವಾಣಿಜ್ಯ ಸಂಬಂಧಗಳನ್ನು ಹೊಂದಿದೆ. ಒಟ್ಟಿನಲ್ಲಿ, ತೈವಾನ್ ಮತ್ತೊಂದು ಉಕ್ರೇನ್ ಆಗದಿರಲಿ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ನ.1ಕ್ಕೆ ಡಾ.ಪುನೀತ್ ರಾಜ್‌ಕುಮಾರ್‌ಗೆ 'ಕರ್ನಾಟಕ ರತ್ನ' ಪ್ರಶಸ್ತಿ ಪ್ರದಾನ

- ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಣೆ
- ಸಿದ್ಧತೆಗೆ ಡಾ. ರಾಜ್ ಕುಟುಂಬ ಒಳಗೊಂಡ ಸಮಿತಿ



ಬೆಂಗಳೂರು, ಆ.5(ಕೆಎಂಶಿ)– ಚಿತ್ರನಟ ಡಾ. ಪುನೀತ್ ರಾಜ್‌ಕುಮಾರ್ ಅವರಿಗೆ 'ಕರ್ನಾಟಕ ರತ್ನ' ಪ್ರಶಸ್ತಿಯನ್ನು ನ.1 ರಂದು ಪ್ರದಾನ ಮಾಡಲು ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು. ಇಂದಿಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಸಿದ್ಧತೆ ಮಾಡಿಕೊಳ್ಳಲು ಸಮಿತಿಯನ್ನು ರಚಿಸಲಾಗುವುದು. ರಾಜ್‌ಕುಮಾರ್ ಅವರ ಕುಟುಂಬ ಸದಸ್ಯರು ಸಹ ಸಮಿತಿಯಲ್ಲಿ ಇರುತ್ತಾರೆ. ಎಲ್ಲರೂ ಸೇರಿ ಗೌರವಯುತವಾಗಿ ಪುನೀತ್ ಅವರಿಗೆ ಮರಣೋತ್ತರವಾಗಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದರು.

1922 ರಿಂದ ಫಲಪುಷ್ಪ ಪ್ರದರ್ಶನ ನಿರಂತರವಾಗಿ ನಡೆಯುತ್ತಿದೆ. ಪ್ರತಿ ವರ್ಷ ಅತೀ ಹೆಚ್ಚು ಜನರನ್ನು ಆಕರ್ಷಿಸುತ್ತಿದೆ. ಈ ಬಾರಿ ಸ್ವಾತಂತ್ರ್ಯೋತ್ಸವದ ಅಮೃತ ವರ್ಷಾಚರಣೆಯ ಅಂಗವಾಗಿ ಸಂಭ್ರಮ ತುಂಬಿದೆ. ಫಲಪುಷ್ಪ ಪ್ರದರ್ಶನಕ್ಕೆ ವಿಶೇಷ ಕಳೆ ಬಂದಿದೆ. ಮುಂದಿನ 10 ದಿನಗಳ ಕಾಲ ಪ್ರತಿ ದಿನ ಲಕ್ಷಾಂತರ ಜನ ಬರುವ ನಿರೀಕ್ಷೆ ಇದೆ. ಈ ಬಾರಿ ಡಾ.ರಾಜ್‌ಕುಮಾರ್ ಹಾಗೂ ಪುನೀತ್ ರಾಜ್ ಕುಮಾರ್ ಅವರ ಸ್ಮರಣಾರ್ಥ ವಿಶೇಷವಾದ ಪ್ರದರ್ಶನ ಏರ್ಪಟ್ಟಿದೆ. ಹಾಗಾಗಿ ಇನ್ನಷ್ಟು ಜನರನ್ನು ಪ್ರದರ್ಶನ ಆಕರ್ಷಿಸುವ ನಿರೀಕ್ಷೆ ಇದೆ. ತೋಟಗಾರಿಕಾ ಇಲಾಖೆ ಸಚಿವ ಮುನಿರತ್ನ ಅವರ ನೇತೃತ್ವದಲ್ಲಿ ಅಧಿಕಾರಿಗಳು ಉತ್ತಮವಾಗಿ ವ್ಯವಸ್ಥೆ ಮಾಡಿದ್ದಾರೆ. ಸಾರ್ವಜನಿಕರು ಇಲ್ಲಿಗೆ ಭೇಟಿ ನೀಡಿ ಆನಂದಿಸಬೇಕೆಂದು ತಿಳಿಸಿದರು.

ಹಿಂದೂ ಯುವಕರ ಸಂರಕ್ಷಣೆಗೆ ಹಿಂದೂಸ್ತಾನ್ ಜನತಾ ಪಕ್ಷ ಅಸ್ತಿತ್ವಕ್ಕೆ

- 224 ವಿಧಾನಸಭಾ ಕ್ಷೇತ್ರದಲ್ಲೂ ಸ್ಪರ್ಧಿಸುವ ಉದ್ದೇಶ
- ಬಿಜೆಪಿ ವರಿಷ್ಠರಿಗೆ ಭಾರೀ ತಲೆನೋವು ತಂದ ಹೊಸ ಬೆಳವಣಿಗೆ

ಬೆಂಗಳೂರು, ಆ.5(ಕೆಎಂಶಿ)–ಹಿಂದೂ ಯುವಕರು ಸಂಘಟಿತರಾಗಿ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಹಿಂದೂಸ್ತಾನ್ ಜನತಾ ಪಕ್ಷ (ಹೆಚ್‌ಜೆಪಿ) ಕಟ್ಟಲು ಹೊರಟಿದ್ದಾರೆ.

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ 224 ಕ್ಷೇತ್ರಗಳಲ್ಲಿ ಯುವಕರನ್ನು ಕಣಕ್ಕಿಳಿಸಲು ಪಕ್ಷ ಮುಂದಾಗಿದೆ. ಇತ್ತೀಚೆಗೆ ದಕ್ಷಿಣ ಕನ್ನಡದಲ್ಲಿ ಹಿಂದೂ ಯುವಕನ ಹತ್ಯೆಯ ನಂತರ ಈ ಸಂಘಟಕರು ಇಂತಹ ತೀರ್ಮಾನಕ್ಕೆ ಬಂದಿದ್ದಾರೆ ಎನ್ನಲಾಗಿದೆ. ಹಿಂದೂಸ್ತಾನ್ ಜನತಾ ಪಕ್ಷವನ್ನು 2004ರಲ್ಲೇ ಕೇಂದ್ರ ಚುನಾವಣಾ ಆಯೋಗದಲ್ಲಿ ನೋಂದಾಯಿಸಿಕೊಳ್ಳಲಾಗಿದೆ. ಬಿಜೆಪಿಯ ಅಂಗ ಸಂಘಟನೆಗಳಲ್ಲಿ ಸಕ್ರಿಯವಾಗಿ ದುಡಿಯುತ್ತಿದ್ದವರು ಈ ಘಟನೆಯ ನಂತರ ಬಿಜೆಪಿಯ ವಿರುದ್ಧವೇ ಸಿಡಿದೆದ್ದಿದ್ದಾರೆ.

ತಮ್ಮ ಸ್ನೇಹಿತರು ಹಾಗೂ ಸಹೋದ್ಯೋಗಿ ಹತ್ಯೆಯಾದ ನಂತರ ಮಂಗಳೂರು ಮತ್ತಿತರೆಡೆ ಯುವಕರು ತಮ್ಮ ಸರ್ಕಾರದ ವಿರುದ್ಧವೇ ಅಪಸ್ವರ ಎತ್ತಿದ್ದಲ್ಲದೆ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ಆ ಪಕ್ಷದ ಮುಖಂಡರ ವಿರುದ್ಧ ತಿರುಗಿಬಿದ್ದಿದ್ದರು.

ಒಂದು ಹೆಜ್ಜೆ ಮುಂದೆ ಹೋಗಿರುವ ಹಿಂದೂ ಸಂಘಟನೆ ಯುವಕರು ತಮ್ಮ ಅಸ್ತಿತ್ವ ಮತ್ತು ಪ್ರಾಣ ಉಳಿಸಿಕೊಳ್ಳಲು ಹೊಸ ಪಕ್ಷದತ್ತ ಆಸಕ್ತಿ ಹೊಂದಿದ್ದಾರೆ.

ಮುಂದಿನ ತಿಂಗಳು ಬೆಂಗಳೂರಿನಲ್ಲಿ ಮೊದಲ ಕಾರ್ಯಕಾರಿಣಿ ಸಭೆಯನ್ನು ಕರೆದಿದ್ದು, ಅಂದು ಪದಾಧಿಕಾರಿಗಳ ಆಯ್ಕೆ ಮಾಡಿಕೊಳ್ಳಲಿದ್ದಾರೆ. ಹಿಂದೂ ಸಂಘಟನೆಯ ಯುವಕರು ಹೊಸ ಪಕ್ಷ ಕಟ್ಟಲು ಹೊರಟಿರುವುದು ಬಿಜೆಪಿಯ ವರಿಷ್ಠರಿಗೆ ಇರಿಸುಮುರಿಸು ಉಂಟು ಮಾಡಿದೆ. ಈ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಷಾ ಬಿಜೆಪಿ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್ ಅವರನ್ನು ಕರೆಸಿಕೊಂಡು ಮಾತನಾಡಿದ್ದಾರೆ.

ಅವರು ರಾಜ್ಯಕ್ಕೆ ಭೇಟಿ ನೀಡುವ ಸಂದರ್ಭದಲ್ಲಿ ಕಟೀಲ್ ಅವರನ್ನು ದೆಹಲಿಗೆ ಕರೆಸಿಕೊಂಡು, ಅಲ್ಲಿಂದ ಕರ್ನಾಟಕಕ್ಕೆ ವಿಶೇಷ ವಿಮಾನದಲ್ಲಿ ತಮ್ಮ ಜೊತೆಯಲ್ಲೇ ಕರೆದುಕೊಂಡು ಬರುವ ವೇಳೆ ಕರ್ನಾಟಕದಲ್ಲಿ ಹಿಂದೂ ಯುವಕರ ಹತ್ಯೆಗೆ ಸಂಬಂಧಿಸಿದಂತೆ ಮತ್ತು ಸಂಘಟನೆಗಳ ಚಟುವಟಿಕೆಗಳು, ಯುವಕರು ಪಕ್ಷದ ವಿರುದ್ಧ ತಿರುಗಿ ಬಿದ್ದಿರುವ ಬಗ್ಗೆ ಪೂರ್ಣ ಮಾಹಿತಿ ಪಡೆದುಕೊಂಡಿದ್ದಾರೆ.

ಅದಾದ ನಂತರ ನಗರದಲ್ಲಿ ಅವರು ತಂಗಿದ್ದ ಸಂದರ್ಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಗೃಹ ಸಚಿವ ಆರಗ ಜ್ಞಾನೇಂದ್ರ, ಹಿರಿಯ ಪೊಲೀಸ್ ಅಧಿಕಾರಿಗಳ ಜೊತೆಗೂ ಕಾನೂನು ಸುವ್ಯವಸ್ಥೆಗೆ ಸಂಬಂಧಿಸಿದಂತೆ ಚರ್ಚೆ ಮಾಡಿದರು.

ನಾನು ಹೇಳಿದಂತೆ ಜಲಪ್ರಳಯ ಆಗುತ್ತಿದೆ!

- ಕೋಡಿ ಮಠದ ಶ್ರೀಗಳ ದಿಟ ಮಾತು
- ಪ್ರಕೃತಿ ರಕ್ಷಿಸದಿದ್ದರೆ ಭಾರೀ ಅನಾಹುತದ ಎಚ್ಚರಿಕೆ



ಕೆ.ಆರ್.ಪೇಟೆ ಪಟ್ಟಣದಲ್ಲಿ ಕಾರ್ಯಕ್ರಮಕ್ಕೆ ಆಗಮಿಸಿದ್ದ ಕೋಡಿಮಠದ ಶ್ರೀಗಳನ್ನು ಭೇಟಿ ಮಾಡಿದ ಯುವಜನ ಸಬಲೀಕರಣ ಹಾಗೂ ಕ್ರೀಡಾ ಸಚಿವ ಡಾ.ಕೆ.ಸಿ.ನಾರಾಯಣಗೌಡರು ತಾಲೂಕಿನ ಪರವಾಗಿ ಗೌರವಿಸಿ, ಆಶೀರ್ವಾದ ಪಡೆದರು.

ಕೆ.ಆರ್.ಪೇಟೆ,ಆ.5– ನಾನು ಈ ಹಿಂದೆ ಹೇಳಿದಂತೆ ದೇಶ ಮತ್ತು ರಾಜ್ಯದಲ್ಲಿ ಜಲಪ್ರಳಯವಾಗುತ್ತಿದೆ ಎಂದು ಕೋಡಿ ಮಠದ ಶ್ರೀಗಳು ತಿಳಿಸಿದ್ದಾರೆ. ತಮ್ಮನ್ನು ಭೇಟಿ ಮಾಡಿದ ರೇಷ್ಮೆ, ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವ ಡಾ.ಕೆ.ಸಿ.ನಾರಾಯಣಗೌಡರಿಗೆ ಆಶೀರ್ವಾದ ಮಾಡಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದರು.

ನಾನು ಕಳೆದ ವರ್ಷ ಮುಂದಿನ ವರ್ಷ ದೇಶ ಮತ್ತು ರಾಜ್ಯದಲ್ಲಿ ಜಲಪ್ರಳಯವಾಗಲಿದೆ. ಜನ ಜಾನುವಾರು, ಪಶು ಪಕ್ಷಿಗಳು ತೊಂದರೆಗೆ ಸಿಲುಕಲಿವೆ ಎಂದು ತಾಳೆಗರಿ ಭವಿಷ್ಯ ನುಡಿದಿದ್ದೆ. ಆಗ ಕೆಲವರು ದೇಶದಲ್ಲಿ ಮಳೆ ಇಲ್ಲದೆ ಬರಗಾಲ ಆವರಿಸಿದೆ. ಜಲಪ್ರಳಯ ಎಲ್ಲಿಂದ ಆಗುತ್ತದೆ ಎಂದು ನನ್ನ ಭವಿಷ್ಯವಾಣಿ ಬಗ್ಗೆ ಪ್ರತಿಕ್ರಿಯೆ ನೀಡಿದ್ದರು. ಅಂದು ನಾನು ಹೇಳಿದಂತೆ ಈಗ ದೇಶಾದ್ಯಂತ ಜಲಪ್ರಳಯ ಆಗುತ್ತಿದೆ, ಜನ–ಜಾನುವಾರು, ಪಶು–ಪಕ್ಷಿಗಳು ತೊಂದರೆಗೆ ಸಿಲುಕಿವೆ ಎಂದು ತಮ್ಮ ಹಿಂದಿನ ಭವಿಷ್ಯವಾಣಿಯನ್ನು ನೆನಪಿಸಿದರು. ಇನ್ನಾದರೂ ಮನುಷ್ಯರು ಪ್ರಕೃತಿಯ ಮೇಲೆ ದಬ್ಬಾಳಿಕೆ ನಡೆಸುವುದನ್ನು ಬಿಡಬೇಕು. ಅರಣ್ಯ ರಕ್ಷಿಸಬೇಕು. ಗಿಡಗಳನ್ನು ನೆಟ್ಟು ಪೋಷಣೆ ಮಾಡಬೇಕು. ಪ್ಲಾಸ್ಟಿಕ್ ಸಂಪೂರ್ಣ ನಿಷೇಧಿಸಬೇಕು ಈ ಮೂಲಕ ಸೂರ್ಯನ ತಾಪಮಾನ ಹೆಚ್ಚಾಗದಂತೆ ನೋಡಿಕೊಳ್ಳಬೇಕು. ಪರಿಸರದ ಸಮತೋಲನ ಕಾಪಾಡಬೇಕು. ಪಶು, ಪಕ್ಷಿಗಳಿಗೆ ನೀರು ಮತ್ತು ಆಹಾರ ಸಿಗುವಂತೆ ನೋಡಿಕೊಳ್ಳಬೇಕು. ಈ ಮೂಲಕ ಮನುಷ್ಯನ ಆರೋಗ್ಯಕ್ಕೆ ಅಗತ್ಯವಿರುವ ಪರಿಸರವನ್ನು ಉಳಿಸಿದರೆ ಮಾತ್ರ ಸಕಲ ಜೀವ ಸಂಕುಲಕ್ಕೆ ಉಳಿಗಾಲ, ಇಲ್ಲದಿದ್ದರೆ ದೇಶದಲ್ಲಿ ಅತಿವೃಷ್ಟಿ, ಅನಾವೃಷ್ಟಿ ಉಂಟಾಗುವ ಅಪಾಯವಿದೆ. ಇದನ್ನು ಮಾನವರು ಅರ್ಥ ಮಾಡಿಕೊಂಡು ಪರಿಸರ ಉಳಿಸುವ ಕೆಲಸ ಮಾಡಬೇಕು. ಉಳ್ಳವರು ಸಮಾಜಕ್ಕೆ ಹಾಗೂ ಬಡವರಿಗೆ ದಾನ ನೀಡಬೇಕು. ಶಿಕ್ಷಣ, ಆರೋಗ್ಯ ಕ್ಷೇತ್ರದಲ್ಲಿ ದೇಶವು ಅಭಿವೃದ್ಧಿ ಸಾಧಿಸಲು ಕೈಜೋಡಿಸಬೇಕು ಎಂದು ಶ್ರೀಗಳು ಸಲಹೆ ನೀಡಿದರು. ಈ ಸಂದರ್ಭದಲ್ಲಿ ಮಂಡ್ಯ ಜಿಲ್ಲಾ ಹಾಪ್ ಕಾಮ್ಸ್ ನಿಗಮದ ಅಧ್ಯಕ್ಷ ಕೆ.ಜಿ.ತಮ್ಮಣ್ಣ ಇತರರು ಇದ್ದರು.

ಶುಂಠಿ ಖರೀದಿಸಿ 1.96 ಲಕ್ಷ ವಂಚನೆ: ವ್ಯಕ್ತಿ ವಿರುದ್ಧ ಕೇಸ್

ಹೆಚ್.ಡಿ.ಕೋಟೆ, ಆ.5–ರೈತನಿಂದ ಶುಂಠಿ ಖರೀದಿಸಿ 1.96 ಲಕ್ಷ ರೂ. ನೀಡದೇ ವಂಚಿಸಿರುವ ಬಗ್ಗೆ ವರದಿಯಾಗಿದೆ. ಹೆಚ್.ಡಿ.ಕೋಟೆ ತಾಲೂಕು ಹಿರೇಹಳ್ಳಿ ಗ್ರಾಮದ ರೈತ ಬಸವರಾಜು (50) ವಂಚನೆಗೊಳಗಾದವರಾಗಿದ್ದು, ಸರಗೂರು ತಾಲೂಕು ಮಾಗುಡಿಲು ಗ್ರಾಮದ ರಮೇಶ್‌ಬಾಬು ಎಂಬಾತ ಬಸವರಾಜು ಅವರಿಂದ 2.96 ಲಕ್ಷ ರೂ. ಮೌಲ್ಯದ ಶುಂಠಿ ಖರೀದಿಸಿ, 1 ಲಕ್ಷ ರೂ. ಮಾತ್ರ ನೀಡಿ, ಉಳಿದ 1.96 ಲಕ್ಷ ರೂ. ನೀಡದೇ ವಂಚಿಸಿದ್ದಾನೆ ಎಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಹೆಚ್.ಡಿ.ಕೋಟೆ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಕೊಡಗಲ್ಲಿ ಭಾರೀ ಮಳೆಗೆ ಮುಳುಗಿದ ತ್ರಿವೇಣಿ ಸಂಗಮ

- ಭಾಗಮಂಡಲ–ಮಡಿಕೇರಿ ಸಂಚಾರವೂ ಬಂದಾಗುವ ಸಾಧ್ಯತೆ
- ದಬ್ಬಡ್ಕದಲ್ಲಿ ಜಲಸ್ಫೋಟ ಆತಂಕ, ಕುಟುಂಬಗಳ ಸ್ಥಳಾಂತರ
- ಕೊಚ್ಚಿ ಹೋದ ಸೇತುವೆ, ಮೋರಿ, ದುರಸ್ತಿಗೆ ಹರಸಾಹಸ
- ಶಾಸಕ ಕೆ.ಜಿ.ಬೋಪಯ್ಯ ಅವರಿಂದ ಪರಿಹಾರ ವಿತರಣೆ

ಭಾಗಮಂಡಲ–ಅಯ್ಯಂಗೇರಿ ರಸ್ತೆ ಸಂಚಾರ ಬಂದ್





ಮಡಿಕೇರಿ,ಆ.5– ಕೊಡಗು ಜಿಲ್ಲೆಯಾದ್ಯಂತ ಮಳೆ ಅಬ್ಬರಿಸುತ್ತಿದೆ. ಭಾರೀ ಗಾತ್ರದ ಮರಗಳು ಧರೆಗುರುಳುತ್ತಿದ್ದರೆ, ರಸ್ತೆ ಸಂಚಾರ ಅಸ್ತವ್ಯಸ್ತವಾಗಿದೆ. ಜಿಲ್ಲೆ ಭಾಗಶಃ ಜಲಾವೃತಗೊಂಡಂತೆ ಕಂಡುಬರುತ್ತಿದೆ. ಶನಿವಾರ ಬೆಳಗ್ಗೆ 8.30ರವರೆಗೆ 'ರೆಡ್ ಅಲರ್ಟ್' ಘೋಷಣೆ ಮಾಡಲಾಗಿದೆ. ಈ ಅವಧಿಯಲ್ಲಿ ಗಾಳಿ ಸಹಿತ 200 ಮಿ.ಮೀ.ಗೂ ಅಧಿಕ ಮಳೆ ಸುರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ.

ಸಂಗಮ ಮುಳುಗಡೆ: ಬ್ರಹ್ಮಗಿರಿ ಬೆಟ್ಟ ಶ್ರೇಣಿ, ತಲಕಾವೇರಿ, ಕೋರಂಗಾಲ, ಚೇರಂಗಾಲ ಭಾಗಮಂಡಲ ವ್ಯಾಪ್ತಿಯಲ್ಲಿ ಭಾರೀ ಮಳೆ ಸುರಿಯುತ್ತಿದ್ದು, ತ್ರಿವೇಣಿ ಸಂಗಮ ಮುಳುಗಡೆಯಾಗಿದೆ. ಸಂಗಮದಲ್ಲಿ ನೀರಿನ ಮಟ್ಟ ತೀವ್ರ ಏರಿಕೆಯಾಗಿದ್ದು, ನಾಗನಕಟ್ಟೆ ಮುಳುಗಡೆಯಾಗಿ ಸಂಗಮಕ್ಕೆ ತೆರಳುವ ಮೆಟ್ಟಿಲುಗಳು ಕೂಡ ನೀರಿನಿಂದ ಆವೃತ್ತವಾಗಿದೆ. ಪ್ರವಾಹ ಪರಿಸ್ಥಿತಿಯ ಕಾರಣ ಭಾಗಮಂಡಲ–ಅಯ್ಯಂಗೇರಿ ರಸ್ತೆ ಮೇಲೆ 5 ಅಡಿ ನೀರು ಹರಿಯುತ್ತಿದ್ದು, ಈ ರಸ್ತೆಯಲ್ಲಿ ವಾಹನ ಸಂಚಾರ ಸಂಪೂರ್ಣ ಬಂದ್ ಆಗಿದೆ.

ಭಾಗಮಂಡಲ–ಮಡಿಕೇರಿ ರಸ್ತೆ ಸಂಚಾರಕ್ಕೆ ಮುಕ್ತವಾಗಿದ್ದರೂ ಮಳೆ ಮುಂದುವರೆದಲ್ಲಿ ಮತ್ತೆ ಮುಳುಗುವ ಸಾಧ್ಯತೆಗಳಿವೆ. ಕಳೆದ 24 ಗಂಟೆಗಳ ಅವಧಿಯಲ್ಲಿ ಭಾಗಮಂಡಲ ವ್ಯಾಪ್ತಿಯಲ್ಲಿ 126 ಮಿ.ಮೀ ಮಳೆ ಸುರಿದಿದೆ. ಕಾವೇರಿ ನದಿಯಲ್ಲಿ ನೀರಿನ ಪ್ರಮಾಣ ಭಾರೀ ಏರಿಕೆ ಆಗಿದೆ. ಮದೆನಾಡು ವ್ಯಾಪ್ತಿಯಲ್ಲಿ 125.5 ಮಿ.ಮೀ ಹಾಗೂ ಗಾಳಿಬೀಡು ವ್ಯಾಪ್ತಿಯಲ್ಲಿ 124.5 ಮಿ.ಮೀ ಮಳೆಯಾಗಿರುವುದಾಗಿ ರಾಜ್ಯ ಪ್ರಾಕೃತಿಕ ವಿಕೋಪ ನಿರ್ವಹಣಾ ಕೇಂದ್ರ ಮಾಹಿತಿ ನೀಡಿದೆ. ಪಯಶ್ವಿನಿ ನದಿಯಲ್ಲಿ ನೀರಿನ ಮಟ್ಟ ಏರಿಕೆಯಾಗಿದೆ.

ಕುಟುಂಬಗಳ ಸ್ಥಳಾಂತರ: ಸರಣಿ ಭೂಕಂಪನದ ಗ್ರಾಮಗಳಾದ ಸಂಪಾಜೆ, ಚೆಂಬು, ಕೊಯನಾಡು, ದಬ್ಬಡ್ಕ, ಊರುಬೈಲು, ಎಂ.ಚೆಂಬು ವ್ಯಾಪ್ತಿಯಲ್ಲಿ ಭಾರೀ ಮಳೆ ಸುರಿಯುತ್ತಿದ್ದು, ಭೂ ಕುಸಿತದ ಆತಂಕ ಕಾಡುತ್ತಿದೆ. ದಬ್ಬಡ್ಕ ಗ್ರಾಮದಲ್ಲಿ ಜಲ ಸ್ಫೋಟ ಸಂಭವಿಸಿ ಭೂ ಕುಸಿತದ ಆತಂಕ ಎದುರಿಸುತ್ತಿರುವ 3 ಕುಟುಂಬಗಳನ್ನು ಸ್ಥಳಾಂತರಿಸಲಾಗಿದೆ. ಎಂ.ಚೆಂಬು ಸರಕಾರಿ ಶಾಲೆಯಲ್ಲಿ ಕಾಳಜಿ ಕೇಂದ್ರ ತೆರೆಯಲಾಗಿದ್ದು, ಅಲ್ಲಿ ಆಶ್ರಯ ಪಡೆದಿವೆ. ಕಳೆದ 2 ದಿನಗಳ ಹಿಂದೆ ದಬ್ಬಡ್ಕ ಗ್ರಾಮದ ಕೊಪ್ಪದ ಬಾಲಕೃಷ್ಣ ಎಂಬುವರ ಮನೆ ಹಿಂಭಾಗದ ರಬ್ಬರ್ ತೋಟ ಕುಸಿದು, ಮನೆ ನಾಶವಾಗಿತ್ತು. ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದ ಎನ್‌ಡಿಆರ್‌ಎಫ್, ಅಲ್ಲಿನ ನಿವಾಸಿಗಳನ್ನು ಸ್ಥಳಾಂತರಿಸುವಂತೆ ಸೂಚಿಸಿದ್ದರು.

ಸೇತುವೆ–ಮೋರಿ ದುರಸ್ತಿ: ದಬ್ಬಡ್ಕ–ಕೊಪ್ಪ, ದಬ್ಬಡ್ಕ–ಸಂಪಾಜೆ ಸಂಪರ್ಕಿಸುವ ಸೇತುವೆಗಳ ತಡೆಗೋಡೆಯ ಪಕ್ಕದ ಮಣ್ಣು ನದಿ ಪ್ರವಾಹಕ್ಕೆ ಕೊಚ್ಚಿ ಹೋಗಿದ್ದು, ಹಿಟಾಚಿ ಸಹಾಯದಿಂದ ತಾತ್ಕಾಲಿಕ ದುರಸ್ತಿ ಕಾರ್ಯ ನಡೆಸಲಾಗುತ್ತಿದೆ. ನದಿಯ ಒಳಗಿನಿಂದ ಬೃಹತ್ ಕಲ್ಲುಗಳ ಹೊರತೆಗೆದು ಮಣ್ಣು ಕೊಚ್ಚಿ ಹೋದ ಸ್ಥಳಕ್ಕೆ ತುಂಬಿಸಲಾಗುತ್ತಿದೆ. ನದಿ ಪಕ್ಕದಲ್ಲಿ ಭೂಮಿ ಕುಸಿಯುವ ಸಾಧ್ಯತೆ ಇರುವ ಕಡೆಗಳಲ್ಲಿ ಬಂಡೆಕಲ್ಲುಗಳನ್ನು ಜೋಡಿಸಲಾಗುತ್ತಿದ್ದು, ತಾತ್ಕಾಲಿಕ ದುರಸ್ತಿ ಕಾರ್ಯ ಭರದಿಂದ ಸಾಗಿದೆ. ಇನ್ನು ಚೆಂಬು ಮಾರ್ಪಡ್ಕ ಗ್ರಾಮ ಸಂಪರ್ಕ ಕಲ್ಪಿಸುವ ಮಾರ್ಪಡ್ಕ ಮೋರಿ ಕೊಚ್ಚಿ ಹೋಗಿದ್ದು, ಇಲ್ಲಿಯೂ ಪರ್ಯಾಯ ವ್ಯವಸ್ಥೆ ಕಾರ್ಯ ನಡೆದಿದೆ.

ಪರಿಹಾರ ವಿತರಣೆ: ಶಾಸಕ ಕೆಜಿ. ಬೋಪಯ್ಯ, ಮಡಿಕೇರಿ ತಹಸೀಲ್ದಾರ್ ಮಹೇಶ್, ಕಂದಾಯ ಇಲಾಖೆ ಅಧಿಕಾರಿಗಳು ಚೆಂಬು, ದಬ್ಬಡ್ಕ ಎಂ.ಚೆಂಬು, ಊರುಬೈಲು, ಪೆರಾಜೆ ಗ್ರಾಮಗಳಿಗೆ ತೆರಳಿ ಮಳೆಹಾನಿ ಕುರಿತು ಪರಿಶೀಲನೆ ನಡೆಸಿದರು. ಭಾರೀ ಮಳೆಯಿಂದ ಮಾರ್ಪಡ್ಕ, ಆನೆಹಳ್ಳ, ದಬ್ಬಡ್ಕ ಸೇತುವೆಗಳು, ಭೂ ಕುಸಿತವಾದ ಪ್ರದೇಶಗಳನ್ನು ವೀಕ್ಷಿಸಿದರು. ಬಳಿಕ ತೀವ್ರ ಮನೆ ಹಾನಿಗೆ ಒಳಗಾದ ದಬ್ಬಡ್ಕ ನಿವಾಸಿಗಳಾದ ಕೊಪ್ಪದ ಬಾಲಕೃಷ್ಣ, ಎನ್.ಕೆ. ಉಮೇಶ್ ಅವರುಗಳಿಗೆ ಲಕ್ಷ ರೂ. ಹಾಗೂ ಪೆರಾಜೆ ಗ್ರಾಮ ನಿವಾಸಿಗಳಾದ ಉಪೇಂದ್ರ ಮತ್ತು ಪುರುಷೋತ್ತಮ್ ನಾಯರ್ ಅವರುಗಳಿಗೆ ತಲಾ 10 ಸಾವಿರ ರೂ. ಪರಿಹಾರವನ್ನು ವಿತರಿಸಿದರು. ಚೆಂಬು ವ್ಯಾಪ್ತಿಯಲ್ಲಿ ಅತಿಯಾಗಿ ಮಳೆ ಸುರಿಯುತ್ತಿರುವ ಕಾರಣ ಅಲ್ಲಿರುವ ಜಾನುವಾರುಗಳ ಆರೋಗ್ಯದ ಹಿತದೃಷ್ಟಿಯಿಂದ ಪಶುಪಾಲನಾ ಇಲಾಖೆ ವತಿಯಿಂದ ಹಿಂಡಿ ಮಿಶ್ರಿತ ಪಶು ಆಹಾರವನ್ನು ವಿತರಿಸಲಾಗಿದೆ.

ಜಿಲ್ಲೆಯಾದ್ಯಂತ ಭಾರೀ ಮಳೆ ಮುಂದುವರೆದಿರುವ ಕಾರಣ ಎಲ್ಲೆಡೆ 'ರೆಡ್ ಅಲರ್ಟ್' ಘೋಷಿಸಲಾಗಿದೆ ಈ ಹಿನ್ನೆಲೆಯಲ್ಲಿ ಜಿಲ್ಲೆಯ ಎಲ್ಲಾ ಅಂಗನವಾಡಿ, ಶಾಲೆಗಳಿಗೆ ಜಿಲ್ಲಾಧಿಕಾರಿ ಡಾ. ಬಿ.ಸಿ. ಸತೀಶ, ಶನಿವಾರ ರಜೆ ಘೋಷಿಸಿದ್ದಾರೆ.

ಹಾರಂಗಿ ಒಳಹರಿವು ಹೆಚ್ಚಳ: ಹಾರಂಗಿ ಜಲಾಶಯದ ನದಿ ಮೂಲ ವ್ಯಾಪ್ತಿಯಲ್ಲಿ ಭಾರೀ ಮಳೆ ಸುರಿಯುತ್ತಿರುವ ಕಾರಣ ಹಾರಂಗಿ ಜಲಾಶಯಕ್ಕೆ ಹರಿದು ಬರುತ್ತಿರುವ ಒಳಹರಿವಿನ ಪ್ರಮಾಣದಲ್ಲಿ ಏಕಾಏಕಿ ಭಾರೀ ಏರಿಕೆಯಾಗಿದೆ. ಶುಕ್ರವಾರ ಬೆಳಗಿನ 6 ಗಂಟೆಯ ವೇಳೆಗೆ ಹಾರಂಗಿ ಜಲಾಶಯಕ್ಕೆ ಕೇವಲ 3619 ಕ್ಯೂಸೆಕ್ ನೀರಿನ ಒಳಹರಿವು ಹಾಗೂ 5125 ಕ್ಯೂಸೆಕ್ ಹೊರ ಹರಿವು ಕಂಡು ಬಂದಿತ್ತು. ಸಂಜೆ 5 ಗಂಟೆಯ ವೇಳೆಗೆ ಜಲಾಶಯಕ್ಕೆ 9400 ಕ್ಯೂಸೆಕ್ ಒಳಹರಿವು ದಾಖಲಾಗಿದೆ.

ವಿರಾಜಪೇಟೆ ನೂತನ ತಹಸೀಲ್ದಾರ್ ಅರ್ಚನಾ ಭಟ್ ಅಧಿಕಾರ ಸ್ವೀಕಾರ

ವಿರಾಜಪೇಟೆ,ಆ.5– ನಿವೃತ್ತ ವಾಯುಸೇನಾ ಅಧಿಕಾರಿ ಡಿ.ಅರ್ಚನಾ ಭಟ್ ಅವರು ವಿರಾಜಪೇಟೆಯ ನೂತನ ತಹಸೀಲ್ದಾರ್ ಆಗಿ ಶುಕ್ರವಾರ ಅಧಿಕಾರ ಸ್ವೀಕರಿಸಿದರು.



ಈ ಹಿಂದೆ ಕರ್ತವ್ಯದಲ್ಲಿದ್ದ ಯೋಗನಂದ ಅವರ ವರ್ಗಾವಣೆ ಹಿನ್ನೆಲೆ ಅರ್ಚನಾ ಭಟ್ ಅವರನ್ನು ನೂತನ ತಹಸೀಲ್ದಾರ್ ಆಗಿ ಸರಕಾರ ನೇಮಕ ಮಾಡಿದೆ. ಜಿಲ್ಲೆಯಲ್ಲಿ ಮಾಜಿ ಸೈನಿಕರ ಬಹಳಷ್ಟು ಸಮಸ್ಯೆಗಳು ಇರುವುದರಿಂದ ಸೇನಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುವ ಮಹಿಳಾ ಅಧಿಕಾರಿ ತಹಸೀಲ್ದಾರ್ ಆಗಿ ಜಿಲ್ಲೆಗೆ ಆಗಮಿಸಿರುವುದಕ್ಕೆ ಮಾಜಿ ಸೈನಿಕರ ಬಳಗ ಸಂತೊಷ ವ್ಯಕ್ತಪಡಿಸಿದೆ. ಅರ್ಚನಾ ಭಟ್ ಅವರು ಮೂಲತಃ ಉಡುಪಿಯ ವರಾಗಿದ್ದು, ಈ ಹಿಂದೆ ಬೆಂಗಳೂರಿನ ಪಿಂಚಣಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದರು.

ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ,ಆ.5– 220 ಕೆ.ವಿ ವಿದ್ಯುತ್ ವಿತರಣಾ ಕೇಂದ್ರ ಮತ್ತು ಮಾರ್ಗದಲ್ಲಿ ತುರ್ತು ನಿರ್ವಹಣೆ ಮತ್ತು ದುರಸ್ತಿ ಕಾರ್ಯ ನಿರ್ವಹಿಸಬೇಕಿರುವುದರಿಂದ ಕ.ವಿ.ಪ್ರ.ನಿ.ನಿ. ಅವರ ಕೋರಿಕೆಯಂತೆ ಆ.6 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಸುಂಟಿಕೊಪ್ಪ, ಚೆಟ್ಟಳ್ಳಿ, ಮಡಿಕೇರಿ ಪಟ್ಟಣ, ಬೋಯಿಕೇರಿ ಗಾಳಿಬೀಡು, ಕುಂಡಮೇಸ್ತ್ರಿ, ಮೇಕೇರಿ, ಕಡಗದಾಳು, ಸಂಪಾಜೆ, ಭಾಗಮಂಡಲ, ಹಾಗೂ ಸುತ್ತಮುತ್ತಲ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಆ.8ಕ್ಕೆ ಮೈಷುಗರ್ ಬಾಯ್ಲರ್‌ಗೆ ಚಾಲನೆ

ಆ.15ರ ನಂತರ ಕಬ್ಬು ಅರೆಯುವ ಕಾರ್ಯ ಆರಂಭ

ಮಂಡ್ಯ,ಆ.5– ಜಿಲ್ಲೆಯ ಜೀವನಾಡಿ ಮೈಷುಗರ್ ಕಾರ್ಖಾನೆಯ ಬಾಯ್ಲರ್‌ಗೆ ಆ.8ರಂದು ಬಾಯ್ಲರ್‌ಗೆ ಬೆಂಕಿ ಹಾಕಲಾಗುವುದು. ನಂತರ ಕಾರ್ಖಾನೆ ಚಾಲನೆಯಲ್ಲಿಟ್ಟು ಆ.15ರ ನಂತರ ಕಬ್ಬು ಅರೆಯಲು ಪ್ರಾರಂಭಿಸಲಾಗುವುದು ಎಂದು ವ್ಯವಸ್ಥಾಪಕ ನಿರ್ದೇಶಕ ಅಪ್ಪಾಸಾಹೇಬ್ ಪಾಟೀಲ್ ಭರವಸೆ ನೀಡಿದರು.

ಕಾರ್ಖಾನೆಗೆ ಭೇಟಿ ನೀಡಿದ ರೈತರು ಹಾಗೂ ಜನಪ್ರತಿನಿಧಿಗಳ ನಿಯೋಗದೊಂದಿಗೆ ಸಭೆ ನಡೆಸಿದ ಅವರು, ಮೈಷುಗರ್ ದುರಸ್ತಿಗೆ ಸರ್ಕಾರ ಈಗಾಗಲೇ ಸುಮಾರು 20 ಕೋಟಿ ರೂ. ಹಣವನ್ನು ಬಿಡುಗಡೆ ಮಾಡಿದೆ ಸದ್ಯದಲ್ಲೇ ಇನ್ನು 13 ಕೋಟಿ ರೂ. ಹಣವನ್ನು ಬಿಡುಗಡೆ ಮಾಡಲಿದೆ. ಅಲ್ಲದೆ, ರೈತರು ಸಹ 4 ಲಕ್ಷ ಟನ್ ಕಬ್ಬು ಒಪ್ಪಿಗೆ ಮಾಡಿಸಿದ್ದಾರೆ. ಪ್ರತಿದಿನ 5 ಸಾವಿರ ಟನ್ ಕಬ್ಬು ಅರೆಯಲು ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು.

ರೈತರು, ಮುಖಂಡರು, ಜನಪ್ರತಿನಿಧಿಗಳ ನಿರೀಕ್ಷೆಗಳಿಗನುಗುಣವಾಗಿ ನಿಗದಿತ ಸಮಯಕ್ಕೆ ಕಾರ್ಖಾನೆ ಪ್ರಾರಂಭ ಮಾಡಲು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಯಾವುದೇ ತಾಂತ್ರಿಕ ದೋಷವಾಗದಂತೆ ಶಾಶ್ವತವಾಗಿ ಕಬ್ಬು ನುರಿಯುವ ಕೆಲಸ ಪ್ರಾರಂಭಿಸುತ್ತೇವೆ. ಬಗಾಸ್ ನೀಡಲು ಎನ್‌ಎಸ್‌ಎಲ್, ಚಾಮುಂಡೇಶ್ವರಿ, ಬಣ್ಣಾರಿ ಅಮ್ಮಾನ್ ಕಾರ್ಖಾನೆಗಳು ಒಪ್ಪಿವೆ. ಇದಕ್ಕೆ ಸಚಿವರು ಸಹ ಮಾತನಾಡಿದ್ದಾರೆ. ಅಲ್ಲದೆ, ವಿದ್ಯುತ್ ಪೂರೈಸಲು ಸೆಸ್ಕಾಂ ಸಹ ಒಪ್ಪಿಗೆ ನೀಡಿದೆ ಎಂದು ವಿವರಿಸಿದರು. ವಿಧಾನಪರಿಷತ್ ಮಾಜಿ ಸದಸ್ಯ ಕೆಟಿ.ಶ್ರೀಕಂಠೇಗೌಡ ಮಾತನಾಡಿ, ಮುಖ್ಯಮಂತ್ರಿ ಹಾಗೂ ಸಚಿವರ ಜತೆ ದೂರವಾಣಿ ಮೂಲಕ ಮಾತನಾಡಿದ್ದು, ಶೀಘ್ರದಲ್ಲಿಯೇ ಹಣ ಬಿಡುಗಡೆ ಮಾಡುವ ಭರವಸೆ ನೀಡಿದ್ದಾರೆ. ಕಾರ್ಖಾನೆ ದುರಸ್ತಿ ಕಾರ್ಯ ಪರಿಣಾಮಕಾರಿಯಾಗಿ ಮತ್ತು ಯಶಸ್ವಿಯಾಗಿ ನಡೆಯುತ್ತಿದೆ ಎಂದರು.

ಆ.8ರಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಬಾಯ್ಲರ್‌ಗೆ ಬೆಂಕಿ ಹಾಕುವ ಹಾಗೂ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಲಿದ್ದಾರೆ. ಮೈಷುಗರ್ ಸಕ್ಕರೆ ಕಾರ್ಖಾನೆ ವ್ಯಾಪ್ತಿಯಲ್ಲಿನ 4 ಲಕ್ಷ ಟನ್ ಒಪ್ಪಿಗೆ ಪಡೆಯಲಾಗಿದೆ. ಕಬ್ಬನ್ನು ಅರೆಯಲು ಎಲ್ಲ ಏರ್ಪಾಡು ಮಾಡಲಾಗಿದೆ. ಕಾರ್ಖಾನೆ ಬಾಯ್ಲರ್‌ಗೆ ಚಾಲನೆ ನೀಡುವ ದಿನದಂದು ಕಾರ್ಖಾನೆ ಯಾವಾಗ ಪ್ರಾರಂಭವಾಗುತ್ತದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪ್ರಕಟಿಸಲಿದ್ದಾರೆ. ಶೀಘ್ರದಲ್ಲೇ ಕಾರ್ಖಾನೆ ಪ್ರಾರಂಭವಾಗುವ ಎಲ್ಲ ಲಕ್ಷಣಗಳಿದ್ದು, ಕಾರ್ಖಾನೆ ಆರಂಭವಾಗುವ ವಿಶ್ವಾಸವಿದೆ ಎಂದರು.

ಮೈಷುಗರ್ ಕಾರ್ಖಾನೆ ಹಿಂದಿನ ಸ್ಥಿತಿಗೆ ಬರುವ ಎಲ್ಲ ಲಕ್ಷಣಗಳು ಕಂಡು ಬರುತ್ತಿವೆ. ಇದು ಆಶಾದಾಯಕ ಬೆಳವಣಿಗೆಯಾಗಿದೆ. ಸರ್ಕಾರದ ಹಂತದಲ್ಲಿ ಮೈಷುಗರ್ ಕಾರ್ಖಾನೆ ಪ್ರಾರಂಭ ಮಾಡುವುದಕ್ಕೆ ಏನೇನು ಆಗಬೇಕು ಅದನ್ನು ಮಾಡಿಸುತ್ತಿದ್ದೇವೆ. ಮೈಷುಗರ್ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಅಧಿಕಾರಿಗಳಿಂದಲೂ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದು, ಮೈಷುಗರ್ ಕಾರ್ಖಾನೆ ಆರಂಭವಾಗುವ ಸೂಚನೆ ಸಿಕ್ಕಿದೆ ಎಂದರು. ರೈತನಾಯಕಿ ಸುನಂದಾ ಜಯರಾಂ ಮಾತನಾಡಿ, ಮೈಷುಗರ್ ದುರಸ್ತಿ ಕಾರ್ಯ ಶೇ.80ರಷ್ಟು ಭಾಗ ಮುಗಿದಿದ್ದು, ಮೈಷುಗರ್ ಕಾರ್ಖಾನೆ ಪ್ರಾರಂಭದ ದಿನಾಂಕವನ್ನು ಸರ್ಕಾರ ಪ್ರಕಟಿಸಬೇಕು ಎಂದು ಒತ್ತಾಯಿಸಿದರು. ಈಗಾಗಲೇ ಕಾರ್ಖಾನೆ ಪ್ರಾರಂಭ ವಿಳಂಭವಾಗಿದೆ. ಆ.15ರೊಳಗೆ ಪ್ರಾರಂಭ ಮಾಡದಿದ್ದರೆ ಹೋರಾಟ ಅನಿವಾರ್ಯ ಎಂದು ಎಚ್ಚರಿಸಿದ ಅವರು, ಮೈಷುಗರ್ ಕಾರ್ಖಾನೆಯಲ್ಲಿ ಗುತ್ತಿಗೆ ನೇಮಕಾತಿ ಪ್ರಕ್ರಿಯೆ, ಬಗಾಸ್ ಪ್ರಕ್ರಿಯೆ ಯಾವ ಹಂತದಲ್ಲಿದೆ. ವಿದ್ಯುತ್ ಸರಬರಾಜು, ಸ್ಟೋರ್‌ಗಳಲ್ಲಿರುವ ಸಾಮಾಗ್ರಿಗಳ ಬಗ್ಗೆ ಮಾಹಿತಿ ಪಡೆದಿದ್ದೇವೆ ಎಂದರು.

ಮಂಡ್ಯ ಜಿಲ್ಲೆಯಲ್ಲಿ ಕೊಂಚ ತಗ್ಗಿದ ವರುಣನ ಆರ್ಭಟ

ಬೆಂಗಳೂರು– ಮೈಸೂರು ಹೆದ್ದಾರಿ ಸಂಚಾರ ಮುಕ್ತ, ಮದ್ದೂರು ಬಳಿ ರೈಲ್ವೆ ಹಳಿ ಸಮಸ್ಯೆ ನಿವಾರಣೆ

- ಬೀಡಿ ಕಾಲೋನಿ ನಿವಾಸಿಗಳಿಗೆ ಶಾಸಕರಿಂದ ಆರ್ಥಿಕ ಸಹಾಯ
- ನಿನ್ನೆ ಸುರಿದಿದ್ದ ಭಾರೀ ಮಳೆಗೆ ಕೆಲ ಮನೆಗಳ ಗೋಡೆ ಕುಸಿತ
- ಮೈದುಂಬಿ ಹರಿಯುತ್ತಿವೆ ಜಿಲ್ಲೆ ವ್ಯಾಪ್ತಿಯ ನದಿಗಳು, ಕೆರೆಗಳು



ಮಂಡ್ಯ,ಆ.5– ಕಳೆದ ಒಂದು ವಾರದಿಂದ ಅಬ್ಬರಿಸುತ್ತಿದ್ದ ವರುಣನ ಆರ್ಭಟ ನಿನ್ನೆ ಸಂಜೆಯಿಂದ ಕೊಂಚ ತಗ್ಗಿದೆ. ಮಂಡ್ಯ ಜಿಲ್ಲೆಯಾದ್ಯಂತ ಜನ ನೆಮ್ಮದಿಯಿಂದ ವರಮಹಾಲಕ್ಷ್ಮಿ ಹಬ್ಬ ಆಚರಿಸಿದ್ದಾರೆ. ಕಳೆದ ಹಲವು ದಿನಗಳಿಂದ ಕೇವಲ ರಾತ್ರಿ ಸಂದರ್ಭದಲ್ಲಿ ಮಾತ್ರ ಅಬ್ಬರಿಸುತ್ತಿದ್ದ ಮಳೆ ನಿನ್ನೆ ಗುರುವಾರ ಬೆಳಿಗ್ಗೆ ಹತ್ತರಿಂದ ಸಂಜೆ 5ರವರೆಗೆ ನಿರಂತರವಾಗಿ ಸುರಿದ ಪರಿಣಾಮ ಜನಜೀವನ ಅಸ್ತವ್ಯಸ್ತಗೊಂಡಿತ್ತು. ಆದರೆ ನಿನ್ನೆ ಸಂಜೆಯಿಂದ ಇಂದು ರಾತ್ರಿಯವರೆಗೆ ತುಂತುರು ಮಳೆ ಬೀಳುತ್ತಿದೆ.

ಜಿಲ್ಲೆಯಲ್ಲಿ ನಿರಂತರ ಮಳೆಗೆ ಕೆರೆ ಕೋಡಿಗಳು ಒಡೆದು ರಸ್ತೆಗಳು ಜಲಾವೃತ್ತವಾದರೆ, ಕೆಲವೆಡೆ ರಸ್ತೆಗಳೇ ಬಿರುಕು ಬಿಟ್ಟಿದ್ದವು. ಸಾವಿರಾರು ಹೆಕ್ಟೇರ್ ಕೃಷಿ ಭೂಮಿ ಜಲಾವೃತವಾದರೆ ಮಂಡ್ಯದ ಬೀಡಿ ಕಾಲೋನಿಯ 250 ಮನೆಗಳು ಜಲಮಯವಾಗಿದ್ದವು.

ಹೆದ್ದಾರಿ ಸಂಚಾರ ಮುಕ್ತ: ಕಳೆದ ಮೂರು ದಿನಗಳಿಂದ ಭಾರೀ ಮಳೆಯಿಂದ ಮಂಡ್ಯದ ಬೂದನೂರು ಬಳಿ ಕೆರೆ ಕೋಡಿ ಒಡೆದು ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ಜಲಮಯವಾಗಿತ್ತು. ಇದರಿಂದ ಮೈಸೂರು, ಮಂಡ್ಯದಿಂದ ಬೆಂಗಳೂರು ತಲುಪುವವರಿಗೆ ಕೆ.ಎಂ.ದೊಡ್ಡಿ ರಸ್ತೆಯನ್ನು ಬದಲಿ ಮಾರ್ಗವಾಗಿ ಕಲ್ಪಿಸಲಾಗಿತ್ತು ಕೆ.ಎಂ. ದೊಡ್ಡಿ ರಸ್ತೆ ಕಿರಿದಾಗಿದ್ದರಿಂದ ಸಂಚಾರಕ್ಕೂ ಸಾಹಸ ಪಡಬೇಕಿತ್ತು.

ಮದ್ದೂರು ಬಳಿಯೂ ಮದ್ದೂರಮ್ಮನ ಕೆರೆ ಒಡೆದು ಕೊಲ್ಲಿ ವೃತ್ತದಲ್ಲಿ ಹೆದ್ದಾರಿ ಜಲಾವೃತ್ತವಾದ ಪರಿಣಾಮ ಜನರು ಹೈರಾಣಾಗಿದ್ದರು. ಇದರಿಂದ ಮಂಡ್ಯದಿಂದ ಬೆಂಗಳೂರು ತಲುಪುವವರು ಕೆ.ಎಂ.ದೊಡ್ಡಿ, ಹಲಗೂರು, ಕನಕಪುರ ಮಾರ್ಗದಲ್ಲಿ ಬೆಂಗಳೂರು ಹಾಗೂ ಮೈಸೂರಿನವರು ಮಳವಳ್ಳಿ, ಹಲಗೂರು, ಕನಕಪುರ ಮಾರ್ಗದಿಂದ ಬೆಂಗಳೂರು ತಲುಪುವಂತಾಗಿತ್ತು. ಇದೀಗ ಬೂದನೂರು ಬಳಿ ಹಾಗೂ ಕೊಲ್ಲಿ ವೃತ್ತದ ಬಳಿ ಕೆರೆ ಕೋಡಿ ಸಿದ್ಧಪಡಿಸಿದ ಪರಿಣಾಮ ನಿನ್ನೆಯಿಂದ ಬೆಂಗಳೂರು– ಮೈಸೂರು ಹೆದ್ದಾರಿ ಸಂಚಾರ ಮುಕ್ತವಾಗಿದೆ.

ರೈಲ್ವೆ ಸಂಚಾರಕ್ಕೂ ಅಡ್ಡಿ ಇಲ್ಲ: ಮೊನ್ನೆ ಮದ್ದೂರಿನ ಶಿವಪುರ ಬಳಿ ಭಾರೀ ಮಳೆಗೆ ರೈಲ್ವೆಹಳಿ ಬಿರುಕು ಬಿಟ್ಟು ಕೆಲ ರೈಲುಗಳ ಸಂಚಾರ ವ್ಯತ್ಯಯವಾಗಿತ್ತು. ನಿನ್ನೆಯೇ ಬೆಂಗಳೂರು–ಮೈಸೂರು ರೈಲ್ವೆ ಮಾರ್ಗ ರೆಟಡಿಯಾಗಿದ್ದು, ರೈಲುಗಳು ಎಂದಿನಂತೆ ಸಂಚರಿಸುತ್ತಿವೆ.

ಗೋಡೆ ಕುಸಿತ: ನಿನ್ನೆ ಬೆಳಿಗ್ಗೆಯಿಂದ ಸಂಜೆಯವರೆಗೆ ಸುರಿದ ಭಾರೀ ಮಳೆಗೆ ಮಂಡ್ಯ ತಾಲೂಕಿನ ಬಸರಾಳು ಬಳಿಯ ಕೆಂಚನಹಳ್ಳಿಯಲ್ಲಿ ಮನೆಯೊಂದು ಸಂಪೂರ್ಣ ಕುಸಿದು ಬಿದ್ದಿದೆ. ಸಿದ್ದೇಗೌಡ ಎಂಬುವವರಿಗೆ ಸೇರಿದ ಮನೆ ಸಂಪೂರ್ಣ ಕುಸಿದ ಪರಿಣಾಮ ಅಧಿಕಾರಿಗಳು ಭೇಟಿ ನೀಡಿ, ಸೂಕ್ತ ಪರಿಹಾರದ ಭರವಸೆ ನೀಡಿದ್ದಾರೆ.

ಬೋರ್ಗರೆಯುತ್ತಿರುವ ನದಿ, ಕೆರೆಗಳು: ಭಾರೀ ಮಳೆಗೆ ಮಂಡ್ಯ ಜಿಲ್ಲೆಯ ಬಹುತೇಕ ಕೆರೆ, ನದಿಗಳು ಬೋರ್ಗರೆಯುತ್ತಿವೆ. ಕೆ.ಆರ್.ಎಸ್. ಅಣೆಕಟ್ಟೆಯಿಂದ ಭಾರೀ ಪ್ರಮಾಣದಲ್ಲಿ ಹರಿಯುತ್ತಿದ್ದು, ನೀರು ಬಿಡಲಾಗಿದೆ. ಬಲಮುರಿ, ರಂಗನತಿಟ್ಟು, ನಿಮಿಷಾಂಬ ಬಳಿ ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿದೆ. ಶ್ರೀರಂಗಪಟ್ಟಣದ ವೆಲ್ಲೆಸ್ಲಿ ಸೇತುವೆ ಬಳಿ ನೀರಿನ ವೈಭವ ವೀಕ್ಷಿಸಲು ಜನ ಮುಗಿ ಬೀಳುತ್ತಿದ್ದಾರೆ. ಇದರ ಜೊತೆಗೆ ಮಳವಳ್ಳಿಯ ಮುತ್ತತ್ತಿ, ಗಾಣಾಳು, ಗಗನಚುಕ್ಕಿ ಹಾಗೂ ಪಕ್ಕದ ಭರಚುಕ್ಕಿ ಸಹ ಮೈದುಂಬಿ ಹರಿಯುತ್ತಿದ್ದು, ಪ್ರವಾಸಿಗರು ಸಾವಿರ ಸಾವಿರ ಸಂಖ್ಯೆಯಲ್ಲಿ ಆಗಮಿಸುತ್ತಿದ್ದಾರೆ.

ನಿರಾಶ್ರಿತ ಕುಟುಂಬಗಳಿಗೆ ತಲಾ 10 ಸಾವಿರ ನೆರವು: ಮಳೆಯಿಂದ ಹಾನಿಗೊಳಗಾದ ಒಂದೂವರೆ ಸಾವಿರ ಬೀಡಿ ಕಾರ್ಮಿಕರ ಕುಟುಂಬಗಳಿಗೆ ಸರ್ಕಾರದಿಂದ ತಲಾ 10 ಸಾವಿರ ರೂ. ನೆರವು ನೀಡಿದ್ದು, ಶಾಸಕ ಎಂ.ಶ್ರೀನಿವಾಸ್ ಫಲಾನುಭವಿಗಳಿಗೆ ವಿತರಿಸಿದರು.

ನಂತರ ಮಾತನಾಡಿದ ಅವರು, ಬೀಡಿ ಕಾಲೋನಿಯಲ್ಲೇ ಒಂದೂವರೆ ಸಾವಿರ ಮನೆಗಳು, ತಾಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ಸುಮಾರು 300 ಮನೆಗಳು ಹಾನಿಯಾಗಿವೆ. ಮಳೆಯಿಂದಾಗಿ ಸಂಪೂರ್ಣ ಹಾನಿಗೊಳಗಾದ ಮನೆಗಳಿಗೆ 5 ಲಕ್ಷ, ಭಾಗಶಃ ಹಾನಿಯಾಗಿರುವ ಮನೆಗಳಿಗೆ 3 ಲಕ್ಷ, ಅಲ್ಪ ಹಾನಿಗೊಳಗಾದ ಮನೆಗಳಿಗೆ 50 ಸಾವಿರ ಪರಿಹಾರವನ್ನು ಸರ್ಕಾರ ನೀಡುತ್ತಿದೆ ಎಂದು ಹೇಳಿದರು.

ಬೀಡಿ ಕಾರ್ಮಿಕರ ಕಾಲೋನಿಗೆ ಶಾಶ್ವತ ಪರಿಹಾರ ಹುಡುಕುವ ನಿಟ್ಟಿನಲ್ಲಿ ಅಂದಾಜು ಪಟ್ಟಿಯನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಈಗಾಗಲೇ ಅದು ಡಿಪಿಆರ್ ಆಗಿ, ಗುತ್ತಿಗೆ ನೀಡಲಾಗಿದೆ. ಹೌಸಿಂಗ್ ಬೋರ್ಡ್ ಕಾಲೋನಿ, ವಿವೇಕಾನಂದ ಬಡಾವಣೆಗೆ ಮೂಲಭೂತ ಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದ್ದು, ಶೀಘ್ರ ಕಾಮಗಾರಿ ಪ್ರಾರಂಭಿಸಲಾಗುವುದು ಎಂದು ಭರವಸೆ ನೀಡಿದರು. ಸರ್ಕಾರ ಬಿಡುಗಡೆ ಮಾಡಿರುವ ಹಣ ಫಲಾನುಭವಿಗಳ ಖಾತೆಗೆ ಆರ್‌ಟಿಜಿಎಸ್ ಮೂಲಕ ತಲುಪಲಿದೆ. ಇಂದು ಅನೇಕ ಮಂದಿಗೆ ಚೆಕ್ ಮೂಲಕ ಸಾಂಕೇತಿಕವಾಗಿ ನೀಡಲಾಗಿದೆ. ಕೆಲವರ ಖಾತೆಗೆ ಜಮಾ ಆಗಲಿದೆ. ಆತಂಕ ಪಡುವ ಅಗತ್ಯವಿಲ್ಲ ಎಂದು ತಿಳಿಸಿದರು.

ನಗರಸಭಾಧ್ಯಕ್ಷ ಎಚ್.ಎಸ್.ಮಂಜು, ತಹಸೀಲ್ದಾರ್ ಕುಂಞಅಹಮದ್ ಮಾತನಾಡಿ, ಕಾಣಿಕಾ ರೈತ ಉತ್ಪಾದಕರ ಕಂಪನಿ ನಿರ್ದೇಶಕ ಎಸ್.ಎನ್.ಮಹೇಶ್, ಮುಖಂಡರಾದ ಮಂಜುನಾಥ್, ಆನಂದ್, ಶಿವರಾಮು, ವಿನೋದ್, ರವಿ, ಕುಮಾರ್, ಅಪ್ಪಾಜಿ, ಶ್ರೀನಿವಾಸ್ ಇತರರಿದ್ದರು.

ರಾಷ್ಟ್ರ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

ಮಂಡ್ಯ,ಆ.5– ಜಿಲ್ಲೆಯಲ್ಲಿ ವಿಕಲಚೇತನರ ಸಬಲೀಕರಣಕ್ಕಾಗಿ ವಿವಿಧ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವ್ಯಕ್ತಿ/ಸಂಸ್ಥೆಗಳಿಗೆ 2021–22ನೇ ಸಾಲಿನಲ್ಲಿ ರಾಷ್ಟ್ರ ಪ್ರಶಸ್ತಿಯನ್ನು ನೀಡಲು ಆನ್‌ಲೈನ್ ಮೂಲಕ ಅರ್ಜಿಗಳನ್ನು ಕೇಂದ್ರ ಸರ್ಕಾರದಿಂದ ಆಹ್ವಾನಿಸಲಾಗಿದೆ. ಆಸಕ್ತರು www.awards.gov.in ಮೂಲಕ ಆ.28ರೊಳಗಾಗಿ ಅರ್ಜಿ ಸಲ್ಲಿಸಬಹುದು. ಮಾಹಿತಿಗಾಗಿ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಕಲ್ಯಾಣಾಧಿಕಾರಿಗಳ ದೂ.ಸಂ. 08232–231090/239234 ಅಥವಾ www.disabilityaffairs.gov.in ಸಂಪರ್ಕಿಸಿ.

ಮಳೆ ಹಾನಿ, ಪ್ರವಾಹ ಪೀಡಿತ ಪ್ರದೇಶಗಳಿಗೆ ಕಂದಾಯ ಸಚಿವರ ಭೇಟಿ, ಪರಿಶೀಲನೆ

ಚಾಮರಾಜನಗರ, ಆ.5–ಜಿಲ್ಲೆಯಲ್ಲಿ ಮಳೆ ಹಾಗೂ ಜಲಾಶಯಗಳಿಂದ ನೀರು ಹೊರಬಿಟ್ಟಿರುವ ಹಿನ್ನೆಲೆಯಲ್ಲಿ ಪ್ರವಾಹ ಪೀಡಿತ ಪ್ರದೇಶಗಳಿಗೆ ಶುಕ್ರವಾರ ಕಂದಾಯ ಸಚಿವ ಆರ್.ಅಶೋಕ ಭೇಟಿ ನೀಡಿ ಪರಿಶೀಲಿಸಿದರಲ್ಲದೆ, ಕಾಳಜಿ ಕೇಂದ್ರಕ್ಕೆ ತೆರಳಿ ಸಂತ್ರಸ್ತ ಕುಟುಂಬಗಳಿಗೆ ಪರಿಹಾರ ವಿತರಿಸಿದರು.



ದಾಸನಪುರದ ಬಳಿ ಕಾವೇರಿ ನದಿ ತೀರಕ್ಕೆ ಆರ್.ಅಶೋಕ್ ಭೇಟಿ ನೀಡಿ ಪರಿಶೀಲಿಸಿದರು.

ಕೊಳ್ಳೇಗಾಲ ತಾಲೂಕಿನ ದಾಸನಪುರ ಗ್ರಾಮದ ಬಳಿ ಹರಿಯುವ ಕಾವೇರಿ ನದಿ ತೀರಕ್ಕೆ ಭೇಟಿ ನೀಡಿ ಪರಿಶೀಲಿಸಿದ ಸಚಿವರು, ಮಳೆಯ ಪ್ರಮಾಣ, ಯಾವ ಸಂದರ್ಭದಲ್ಲಿ ನೀರು ಗ್ರಾಮಗಳಿಗೆ ನುಗ್ಗಲಿದೆ, ಇದರಿಂದ ಆಗುತ್ತಿರುವ ತೊಂದರೆಗಳೇನು ಎಂದು ಮಾಹಿತಿ ಪಡೆದರು. ಇದೇ ವೇಳೆ ಗ್ರಾಮಸ್ಥರು ಸಚಿವರಿಗೆ ತಮ್ಮ ಅಹವಾಲು ಸಲ್ಲಿಸಿದರು. ಪ್ರವಾಹದ ಸಮಸ್ಯೆಗಳ ಬಗ್ಗೆ ವಿವರಿಸಿದರು.

ಬಳಿಕ ಸಚಿವರು ಸುವರ್ಣಾವತಿ ನದಿ ಜಲಾಶಯದ ನೀರು ಹೆಚ್ಚಳದ ಹಿನ್ನೆಲೆಯಲ್ಲಿ ತೊಂದರೆಗೆ ಒಳಗಾಗಿರುವ ಯಳಂದೂರು ಭಾಗದ ವಿವಿಧ ಗ್ರಾಮಗಳಿಗೂ ಭೇಟಿ ನೀಡಿ ಪರಿಶೀಲಿಸಿದರು. ಕೆಲವೆಡೆ ಮನೆ ಆವರಣ, ಜಮೀನುಗಳಲ್ಲಿ ನೀರು ಆವೃತವಾಗಿರುವುದನ್ನು ವೀಕ್ಷಿಸಿದರು. ಯಳಂದೂರು ತಾಲೂಕಿನ ಗಣಿಗನೂರು ಗ್ರಾಮದ ಸರ್ಕಾರಿ ಶಾಲೆಯಲ್ಲಿ ತೆರೆಯ ಲಾಗಿರುವ ಕಾಳಜಿ ಕೇಂದ್ರಕ್ಕೆ ಭೇಟಿ ನೀಡಿ ಸಂತ್ರಸ್ತರೊಂದಿಗೆ ಕುಳಿತು ಸಚಿವರು ಅವರ ಸಮಸ್ಯೆ ಗಳನ್ನು ಆಲಿಸಿದರು. ಈ ಸಂದರ್ಭದಲ್ಲಿ 'ಕೇವಲ ಅನ್ನ ಸಂಬಾರ್ ನೀಡಲಾಗುತ್ತಿದೆ. ಸಾಂಬಾರಿನಲ್ಲಿ ತರಕಾರಿಯೂ ಇರುವುದಿಲ್ಲ. ತಿನ್ನಲು ಅಸಾಧ್ಯವಾಗಿದೆ. ತಾಲೂಕು ಆಡಳಿತ ಸಹ ಸಂಪೂರ್ಣ ನಿರ್ಲಕ್ಷ್ಯ ವಹಿಸಿದೆ ಎಂದು ಸಂತ್ರಸ್ತರು ಸಚಿವರಲ್ಲಿ ಅಳಲು ತೋಡಿಕೊಂಡರು. ಇದಕ್ಕೆ ಕೆಂಡಾಮಂಡಲರಾದ ಅಶೋಕ್, ತಹಸೀಲ್ದಾರ್ ಆನಂದಪ್ಪ ನಾಯಕ್‌ರನ್ನು ತರಾಟೆ ತೆಗೆದುಕೊಂಡರು. ಮೆನು ಪ್ರಕಾರ ಊಟ ನೀಡುವಂತೆ ತಾಕೀತು ಮಾಡಿದರು.

ಬಳಿಕ ಚಾಮರಾಜನಗರ ತಾಲೂಕಿನ ಚಂದಕವಾಡಿ, ಕೋಡಿಮೋಳೆ ಭಾಗಗಳನ್ನು ವೀಕ್ಷಿಸಿದ ಸಚಿವರು, ಕೋಡಿಮೋಳೆ ಗ್ರಾಮದಲ್ಲಿ ಸಂತ್ರಸ್ತರಿಗೆ ಪರಿಹಾರದ ಚೆಕ್‌ಗಳನ್ನು ವಿತರಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಅಶೋಕ್, ರಾಜ್ಯದಲ್ಲಿ ಮಳೆ ಸಂತ್ರಸ್ತ ಜಿಲ್ಲೆಗಳಿಗೆ ಪ್ರವಾಸ ಕೈಗೊಂಡು ಜನರ ಸಂಕಷ್ಟಗಳಿಗೆ ಸ್ಪಂದಿಸುತ್ತಿದ್ದೇವೆ. ಮಳೆ–ಬೆಳೆ ಹಾನಿಗೆ ಪರಿಹಾರ ತ್ವರಿತವಾಗಿ ನೀಡುವ ನಿಟ್ಟಿನಲ್ಲಿ ಹಾನಿ ಪ್ರದೇಶಗಳಿಗೆ ಭೇಟಿ ನೀಡಲಾಗುತ್ತಿದೆ ಎಂದರು.

ರಾಜ್ಯದ ವಿವಿಧೆಡೆ ಪ್ರವಾಸ ಮಾಡುತ್ತಿದ್ದು, ಕಾಳಜಿ ಕೇಂದ್ರಗಳಿಗೂ ತೆರಳಿ ಪರಿಶೀಲಿಸಲಾಗುತ್ತಿದೆ. ಪರಿಹಾರ ವಿತರಣೆಯಲ್ಲಿ ಅಧಿಕಾರಿಗಳಿಗೆ ಚುರುಕು ಮುಟ್ಟಿಸುವ ಕೆಲಸ ಮಾಡಲಾಗುತ್ತಿದೆ ಈಗಾಗಲೇ ಪರಿಸ್ಥಿತಿ ನಿಭಾಯಿಸಲು 300 ಕೋಟಿ ರೂ. ಹಣ ಬಿಡುಗಡೆಯಾಗಿದೆ. ಇನ್ನೂ 500 ಕೋಟಿ ರೂ. ಬಿಡುಗಡೆ ಮಾಡಲಿದ್ದೇವೆ. ಜಿಲ್ಲಾಧಿಕಾರಿಗಳ ಖಾತೆಯಲ್ಲೂ ಹಣ ಲಭ್ಯವಿದೆ ಎಂದು ಸಚಿವರು ತಿಳಿಸಿದರು.

ಈ ಸಂದರ್ಭದಲ್ಲಿ ಶಾಸಕ ಎನ್.ಮಹೇಶ್, ಕಾಡಾ ಅಧ್ಯಕ್ಷ ಜಿ. ನಿಜಗುಣರಾಜು, ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಆಯುಕ್ತ ಮನೋಜ್ ರಾಜ್, ಡಿಸಿ ಚಾರುಲತಾ ಸೋಮಲ್, ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಎಸ್ಪಿ ಟಿ.ಪಿ.ಶಿವಕುಮಾರ್, ಎಡಿಸಿ ಎಸ್.ಕಾತ್ಯಾಯಿನಿದೇವಿ, ಎಎಸ್ಪಿ ಕೆಎಸ್.ಸುಂದರ್‌ರಾಜ್, ಎಸಿ ಗೀತಾ ಹುಡೇದ ವಿವಿಧ ಅಧಿಕಾರಿಗಳಿದ್ದರು.

> ಪ್ರವಾಹದಿಂದ ಹಾನಿಗೀಡಾದ ಮನೆ, ಬೆಳೆಗೆ ಸರ್ಕಾರ ಪರಿಹಾರ ನೀಡುತ್ತಿದೆ. ಈ ಹಿಂದೆ ಇದ್ದ ಪರಿಹಾರ ಹಣವನ್ನು ಪ್ರಸ್ತುತ ದುಪ್ಪಟ್ಟು ಮಾಡಲಾಗಿದೆ. ಬೆಳೆ ಹಾನಿ ಪರಿಹಾರವನ್ನು 6,800ರಿಂದ 13,800 ರೂ. ಹೆಚ್ಚಳ ಮಾಡಿದ್ದೇವೆ. ಮನೆಗೆ ನೀರು ನುಗ್ಗಿದರೆ 10 ಸಾವಿರ ರೂ, ಮನೆಯ ಗೋಡೆ ಕುಸಿದರೆ 50 ಸಾವಿರ, ಸಂಪೂರ್ಣವಾಗಿ ಕುಸಿದ ಮನೆಗೆ 5 ಲಕ್ಷ ರೂ. ಪರಿಹಾರ ನೀಡುತ್ತಿದ್ದೇವೆ. ಸಂತ್ರಸ್ತರ ಎಲ್ಲಾ ಮನವಿ ಹಾಗೂ ಅರ್ಜಿಗಳನ್ನು ಸ್ವೀಕರಿಸಿದ್ದು, ಕ್ರಮ ವಹಿಸಿ, ಪರಿಹಾರ ಹಣ ತ್ವರಿತವಾಗಿ ನೀಡಲಾಗುವುದು.
>
> –ಆರ್.ಅಶೋಕ್, ಕಂದಾಯ ಸಚಿವ.

ಜಿಲ್ಲೆಯಾದ್ಯಂತ ವರಮಹಾಲಕ್ಷ್ಮಿ ವ್ರತಾಚರಣೆ

ಚಾಮರಾಜನಗರ, ಆ.5– ವರಮಹಾಲಕ್ಷ್ಮಿ ವ್ರತ ದಿನವಾದ ಶುಕ್ರವಾರ ಜಿಲ್ಲೆಯಲ್ಲಿ ಮಳೆ ಬಿಡುವು ನೀಡಿದ್ದರಿಂದ ಜಿಲ್ಲಾದ್ಯಂತ ಸಂಭ್ರಮದಂದ ಹಬ್ಬ ಆಚರಿಸಲಾಯಿತು.

ನಗರ ಹಾಗೂ ಜಿಲ್ಲೆಯಲ್ಲೆಡೆ ಬಹುತೇಕ ಮನೆಗಳಲ್ಲಿ ಕಳಸ ಇಟ್ಟು, ಲಕ್ಷ್ಮಿ ಮುಖವಾಡ ಧರಿಸಿ ಪೂಜೆ ಸಲ್ಲಿಸಲಾಯಿತು. ಸುಮಂಗಲಿಯರು ನೆರೆಹೊರೆ ಮಹಿಳೆಯರಿಗೆ ಕುಂಕುಮ ಮಿನಿಯಮ ಮಾಡಿಕೊಂಡರಲ್ಲದೆ, ಸಿಹಿ ಹಾಗೂ ಪ್ರಸಾದ ವಿತರಿಸಿದರು.

ಬಟ್ಟೆ ವಿತರಣೆ: ವರಮಹಾಲಕ್ಷ್ಮಿ ಹಬ್ಬದ ಅಂಗವಾಗಿ ಚಾ.ನಗರದ ಹಳೆ ಬಸ್ ನಿಲ್ದಾಣದ ಬಳಿ ಇರುವ ಶ್ರೀಮಾರಮ್ಮನ ದೇವಸ್ಥಾನದಲ್ಲಿ ವಿಶೇಷ ಪೂಜೆ ಜರುಗಿತು. ನಗರಸಭೆ ಪೌರ ಕಾರ್ಮಿಕರಿಗೆ ಚಾಮರಾಜನಗರ ಕೃಷಿ ಮಾರುಕಟ್ಟೆ ಸಮಿತಿ ನಿರ್ದೇಶಕ ವೆಂಕಟರಾವ್‌ಸಾಠೆ ಅವರು ಹಬ್ಬದ ಉಡುಗೊರೆಯಾಗಿ ಸೀರೆ ಮತ್ತು ಪುರುಷರ ವಸ್ತ್ರಗಳನ್ನು ವಿತರಿಸಿದರು. 150ಕ್ಕೂ ಹೆಚ್ಚು ಪೌರಕಾರ್ಮಿಕರಿಗೆ ವಸ್ತ್ರ ನೀಡಲಾಯಿತು. ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷೆ ಆಶಾ ನಟರಾಜು, ನಗರಸಭಾ ಸದಸ್ಯ ಸುದರ್ಶನ್‌ಗೌಡ, ಮುಖಂಡರಾದ ಅಂಗಡಿ ಮೋಹನ್, ವಾಟಾಳ್ ಬಾಬು, ವೆಂಕಟರಾವ್ ಕುಟುಂಬದ ಅನಿತಾ ಬಾಯಿ ಇತರರಿದ್ದರು.



ಚಾಮರಾಜನಗರದ ವಿವೇಕನಗರದ ಮನೆಯೊಂದರಲ್ಲಿ ಮಹಿಳೆಯರು ವರ ಮಹಾಲಕ್ಷ್ಮಿ ವ್ರತ ಆಚರಿಸಿದರು.

ಯಳಂದೂರು ವರದಿ: ಹೂವು, ಹಣ್ಣುಗಳ ಬೆಲೆ ಏರಿಕೆಯ ನಡುವೆಯೂ ವರಮಹಾಲಕ್ಷ್ಮಿ ವ್ರತ ಸಂಭ್ರಮ ಸಡಗರಗಳಿಂದ ಜರುಗಿತು. ಪಟ್ಟಣ ಹಾಗೂ ತಾಲೂಕಿನೆಲ್ಲೆಡೆ ಬೆಳಗ್ಗೆಯಿಂದಲೇ ಪೂಜಾ ಕೈಂಕರ್ಯದಲ್ಲಿ ತೊಡಗಿದ್ದ ಮಹಿಳೆಯರು ಶ್ರದ್ಧಾ ಭಕ್ತಿಯಿಂದ ವರಮಹಾಲಕ್ಷ್ಮಿ ಹಬ್ಬ ಆಚರಿಸಿದರು.

ಗುಂಡ್ಲುಪೇಟೆ ವರದಿ: ತುಂತುರು ಮಳೆಯ ಕಿರಿಕಿರಿ ಹಾಗೂ ಬೆಲೆ ಏರಿಕೆಯ ನಡುವೆಯೂ ಪಟ್ಟಣ ಹಾಗೂ ತಾಲೂಕಿನಾದ್ಯಂತ ವರಮಹಾಲಕ್ಷ್ಮಿ ವ್ರತವನ್ನು ಸಂಭ್ರಮ ಮತ್ತು ಸಡಗರದಿಂದ ಆಚರಿಸಲಾಯಿತು.

ಪಟ್ಟಣದ ಬಹುತೇಕ ಮನೆಗಳಲ್ಲಿ ಕಳಸ ಇಟ್ಟು, ಲಕ್ಷ್ಮೀದೇವಿಯ ಮುಖವಾಡ ಧರಿಸಿ ಹೂವು, ಚಿನ್ನಾಭರಣ ತೊಡಿಸಿ ಪೂಜೆ ಸಲ್ಲಿಸಲಾಯಿತು. ಮಹಿಳೆಯರು ನೆರೆಹೊರೆಯವರನ್ನು ಆಹ್ವಾನಿಸಿ ಅರಿಶಿಣ–ಕುಂಕುಮ ವಿನಿಮಯ ಮಾಡಿಕೊಂಡರು. ವಿವಿಧ ಬಗೆಯ ಹಣ್ಣು, ನೈವೇದ್ಯವನ್ನು ದೇವಿಗೆ ಅರ್ಪಿಸುವುದರೊಂದಿಗೆ ತಮ್ಮ ಭಕ್ತಿಭಾವ ಮೆರೆದರು.

ಚಲಿಸುತ್ತಿದ್ದ ಓಮ್ನಿ ಮೇಲೆ ಉರುಳಿ ಬಿದ್ದ ಆಲದ ಮರ ತಂದೆ–ಮಗ ಸ್ಥಳದಲ್ಲೇ ಸಾವು

ಚಾಮರಾಜನಗರ, ಆ.5– ಚಲಿಸುತ್ತಿದ್ದ ಓಮ್ನಿ ಮೇಲೆ ಆಲದ ಮರ ಉರುಳಿ ಬಿದ್ದ ಪರಿಣಾಮ ತಂದೆ–ಮಗ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಸಂತೇಮರಹಳ್ಳಿ ಸಮೀಪದ ಹೆಗ್ಗವಾಡಿಪುರ ಗೇಟ್ ಬಳಿ ಶುಕ್ರವಾರ ಸಂಜೆ ಸಂಭವಿಸಿದೆ. ಹೆಗ್ಗವಾಡಿಪುರದ ಗ್ರಾಮದ ನಿವಾಸಿ ಹೆಚ್.ಪಿ.ರಾಜು (49), ಅವರ ಪುತ್ರ ಶರತ್(15) ಮೃತಪಟ್ಟವರು.



ಸಂತೇಮರಹಳ್ಳಿಯಲ್ಲಿ ವಾಸವಿದ್ದ ಇವರು, ಸಗಟು ದರದಲ್ಲಿ ಅಂಗಡಿಗಳಿಗೆ ವಸ್ತುಗಳನ್ನು ಪೂರೈಸುತ್ತಿದ್ದರು. ಶುಕ್ರವಾರ ಸಂಜೆ 6 ಗಂಟೆ ಸುಮಾರಿಗೆ ಸಂತೇಮರಹಳ್ಳಿಯಿಂದ ಕುದೇರಿನತ್ತ ಓಮ್ನಿಯಲ್ಲಿ ಹೊರಟಿದ್ದರು. ಈ ಸಂದರ್ಭದಲ್ಲಿ ಹೆಗ್ಗವಾಡಿಪುರ ಕೆರೆ ಬಳಿ ಇದ್ದ ಬೃಹತ್ ಆಲದ ಮರ ಓಮ್ನಿ ಮೇಲೆ ಬಿದ್ದಿದೆ. ಇದರಿಂದ ಓಮ್ನಿ ನಜ್ಜುಗುಜ್ಜಾಗಿದ್ದು, ಓಮ್ನಿಯಲ್ಲಿ ಸಿಲುಕಿ ರಾಜು ಹಾಗೂ ಶರತ್ ಸ್ಥಳದಲ್ಲೇ ಅಸುನೀಗಿದ್ದಾರೆ.

ದಾರಿಹೋಕರು ಹಾಗೂ ಸುತ್ತಮುತ್ತಲ ಗ್ರಾಮಸ್ಥರು ಸ್ಥಳದಲ್ಲಿ ಜಮಾಯಿಸಿದರು. ವಿಷಯ ತಿಳಿದು ಪೊಲೀಸರು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿದರು. ಬಳಿಕ ಓಮ್ನಿ ಮೇಲೆ ಬಿದ್ದಿದ್ದ ಮರವನ್ನು ತೆರವುಗೊಳಿಸಿ, ಮೃತದೇಹಗಳನ್ನು ನಗರದ ಜಿಲ್ಲಾಸ್ಪತ್ರೆಯ ಶವಾಗಾರಕ್ಕೆ ಸಾಗಿಸಲಾಯಿತು. ಸಂತೇಮರಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಎಸ್‌ಜೆಸಿಇಯಲ್ಲಿ 3 ದಿನಗಳ ಮೈಸೂರು ಸ್ಟಾರ್ಟ್‌ಅಪ್ ಪೆವಿಲಿಯನ್ ಆರಂಭ

150ಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳು, ಎಂಎಸ್‌ಎಂಇ, 25ಕ್ಕೂ ಹೆಚ್ಚು ಹೂಡಿಕೆದಾರರು ಭಾಗಿ



ಪ್ರೋಟಿಯನ್ ಕ್ಲೌಡ್ ಟೆಕ್ನಾಲಜೀಸ್ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಓ ಸುರೇಶ್ ಸೇಥಿ ಮಾತನಾಡುತ್ತಿರುವುದು.



ಸ್ಟಾರ್ಟ್‌ಅಪ್ ಪೆವಿಲಿಯನ್‌ನಲ್ಲಿ (ಎಡದಿಂದ) ಎಕ್ಸಲ್‌ಸಾಫ್ಟ್ ಟೆಕ್ನಾಲಜೀಸ್ ಸಂಸ್ಥಾಪಕ ಸುಧನ್ವ ಧನಂಜಯ, ಮೈಸೂರು ವಿವಿ ಕುಲಪತಿ ಪ್ರೊ ಜಿ.ಹೇಮಂತ್‌ಕುಮಾರ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ॥ ಸಿ.ಜಿ. ಬೆಟಸೂರಮಠ, ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸುತ್ತೂರು ಮಠಾಧೀಶ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಪ್ರೋಟಿಯನ್ ಕ್ಲೌಡ್ ಟೆಕ್ನಾಲಜೀಸ್ ಲಿ. ಎಂ.ಡಿ. ಸುರೇಶ್ ಸೇಥಿ, ಸ್ಕ್ಯಾನ್‌ರೇ ಟೆಕ್ನಾಲಜೀಸ್ ಸಂಸ್ಥಾಪಕ ವಿಶ್ವಪ್ರಸಾದ್ ಆಳ್ವ ಹಾಗೂ ಕರ್ನಾಟಕ ಸರ್ಕಲ್ ಚೀಫ್ ಪೋಸ್ಟ್ ಮಾಸ್ಟರ್ ಎಸ್.ರಾಜೇಂದ್ರ ಕುಮಾರ್ ಭಾಗವಹಿಸಿದ್ದರು.

ಮೈಸೂರು, ಆ. 5(ಆರ್‌ಕೆ)– ಮೈಸೂರಿನ ಎಸ್‌ಜೆಸಿಇ ಕ್ಯಾಂಪಸ್‌ನಲ್ಲಿ ಇಂದಿನಿಂದ 3 ದಿನಗಳ ಮೆಗಾ ಮೈಸೂರು ಸ್ಟಾರ್ಟ್‌ಅಪ್ ಪೆವಿಲಿಯನ್ ಮತ್ತು ಕಾನ್‌ಕ್ಲೇವ್ ಆರಂಭವಾಯಿತು.

ಎಸ್‌ಜೆಸಿಇ–ಸ್ಟೆಪ್, ಟೈ ಮೈಸೂರು, ಸಿಐಐಎಲ್, ವೈಐ, ಮೈಸೂರು ಸ್ಟಾರ್ಟ್ ಅಪ್ ಇಂಡಿಯಾ, ಸ್ಟಾರ್ಟ್‌ಅಪ್ ಕರ್ನಾಟಕ, ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಎಕ್ಸೆಲ್‌ಸಾಫ್ಟ್, ಜೆಎಸ್‌ಎಸ್ ಮಹಾವಿದ್ಯಾಪೀಠ ಇವರ ಸಂಯುಕ್ತಾಶ್ರಯದಲ್ಲಿ ಅಮೃತ ಸ್ವಾತಂತ್ರ್ಯೋತ್ಸವದ ಅಂಗವಾಗಿ ಏರ್ಪಡಿಸಿರುವ ಸ್ಟಾರ್ಟ್ ಅಪ್ ಸಮಿಟ್ ಅನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹಾಗೂ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಿದರು.

ಪ್ರೋಟಿಯನ್ ಕ್ಲೌಡ್ ಟೆಕ್ನಾಲಜೀಸ್ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಓ ಸುರೇಶ್ ಸೇಥಿ, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ. ಬೆಟಸೂರ ಮಠ, ಟೈ ಮೈಸೂರು ಚಾಪ್ಟರ್ ಅಧ್ಯಕ್ಷರೂ ಆದ ಎಕ್ಸೆಲ್‌ಸಾಫ್ಟ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥಾಪಕ ಡಿ. ಸುಧನ್ವ ಧನಂಜಯ, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಜಿ. ಹೇಮಂತಕುಮಾರ್ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ವಿಶ್ವ ಹಿಂದೂ ಪ್ರತಿಷ್ಠಾನ ಸಂಸ್ಥಾಪಕ ಸ್ವಾಮಿ ವಿಗ್ಯಾನಂದ ಅವರು 'Economic Forum: Enterpreneurship and Wealth Creations Central to Prosperous Bharat' ವಿಷಯ ಕುರಿತು ಮಾತನಾಡಿದರೆ, ಸ್ಕ್ಯಾನ್‌ರೇ ಟೆಕ್ನಾಲಜೀಸ್ ಮುಖ್ಯಸ್ಥ ವಿಶ್ವಪ್ರಸಾದ್ ಆಳ್ವ ಅವರು 'Mysuru Vision 2030: What, Why, When for Mysuru' ಕುರಿತು ವಿಷಯ ಮಂಡಿಸಿದರು.

ಇದೇ ವೇಳೆ ಅಂಚೆ ಇಲಾಖೆ ಹೊರತಂದಿರುವ ವಿಶೇಷ ಅಂಚೆ ಲಕೋಟೆ (Special Postal Cover)ಯನ್ನು ಚೀಫ್ ಪೋಸ್ಟ್ ಮಾಸ್ಟರ್ ಎಸ್. ರಾಜೇಂದ್ರಪ್ರಸಾದ್ ಬಿಡುಗಡೆ ಮಾಡಿದರು. ಕ್ಲೌಡ್ ಪ್ರೋಟೇನಿಯಾ ಕಂಪನಿ ಸಿದ್ಧಪಡಿಸಿದ್ದ ಕ್ಲೌಡ್ ಟೆಕ್ನಾಲಜಿ ಲೋಗೋವನ್ನೂ ಇದೇ ಸಂದರ್ಭ ಬಿಡುಗಡೆ ಗೊಳಿಸಲಾಯಿತು. ಕೇಂದ್ರದ ಐಟಿ–ಬಿಟಿ, ಸೈನ್ಸ್ ಅಂಡ್ ಟೆಕ್ನಾಲಜಿ ಇಲಾಖೆ ಮುಖ್ಯಸ್ಥೆ ಡಾ. ಅಮಿತಾ ಗುಪ್ತ, ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ. ರಮಣರೆಡ್ಡಿ ಅವರು ಮೈಸೂರು ಸ್ಟಾರ್ಟ್ ಅಪ್ ಪೆವಿಲಿಯನ್ ಕುರಿತಂತೆ ವರ್ಚುಯಲ್ ಮೂಲಕ ಪಾಲ್ಗೊಂಡು, ಮಾತನಾಡಿದರು.

ಮೂರು ದಿನಗಳ ಕಾಲ ನಡೆಯುವ ಪೆವಿಲಿಯನ್ ಅಂಗವಾಗಿ ಏರ್ಪಡಿಸಿರುವ ವಿವಿಧ ಕಂಪನಿಗಳ ವಸ್ತುಪ್ರದರ್ಶನವನ್ನೂ ಗಣ್ಯರು ಇದೇ ವೇಳೆ ಉದ್ಘಾಟಿಸಿದರು. ಎಕ್ಸೆಲ್‌ಸಾಫ್ಟ್, ಸ್ಕ್ಯಾನ್‌ರೇ, ಎಸ್‌ಜೆಸಿಇ–ಸ್ಟೆಪ್, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಸಿಎಫ್‌ಟಿ ಆರ್‌ಐ, ಆಯುಷ್ ಇಲಾಖೆ, ವಿಗ್ಯಾನ ಲ್ಯಾಬ್ಸ್ ಇನ್ನೋವೇಷನ್ಸ್ ಪ್ರೈ. ಲಿ. ಸೇರಿದಂತೆ ಹಲವು ಕಂಪನಿಗಳು 150ಕ್ಕೂ ಹೆಚ್ಚು ಮಳಿಗೆಗಳನ್ನು ವಸ್ತುಪ್ರದರ್ಶನದಲ್ಲಿ ತೆರೆದಿವೆ. ಸಣ್ಣ, ಅತೀ ಸಣ್ಣ, ಮಧ್ಯಮ ಉದ್ಯಮಿಗಳು, ಹೂಡಿಕೆದಾರರು, ವಿದ್ಯಾರ್ಥಿಗಳು, ನವ ಉದ್ಯಮ ಆಕಾಂಕ್ಷಿಗಳು, ಇಂಡಸ್ಟ್ರೀ ಪಾರ್ಟ್‌ನರ್‌ಗಳು, ಇನ್ನೋವೇಟರ್ಸ್, ಸಂಶೋಧಕರು, ಮೆಂಟರ್ಸ್, ಇನ್‌ಕ್ಯುಬೇಟರ್‌ಗಳು ಪೆವಿಲಿಯನ್‌ನಲ್ಲಿ ಭಾಗವಹಿಸುತ್ತಿದ್ದಾರೆ. ನಂತರ ನಡೆಯಲಿರುವ 3 ದಿನಗಳ ಗೋಷ್ಠಿ, ಪ್ಯಾನಲ್ ಡಿಸ್ಕಷನ್, ಡಿಬೇಟ್‌ಗಳಲ್ಲಿ ಇ–ಕಾಮರ್ಸ್ ರೆವೆಲ್ಯೂಷನ್, ಸೈಬರ್ ಸೆಕ್ಯೂರಿಟಿ, ಕ್ಲೌಡ್ ಟೆಕ್ನಾಲಜಿ, ಡಿಜಿಟಲ್ ಟ್ರಾನ್ಸ್‌ಫರ್ಮೇಷನ್ ಸೇರಿದಂತೆ ವಿವಿಧ ವಿಷಯ ಕುರಿತು ನುರಿತ ವೃತ್ತಿಪರರು ಮಾತನಾಡುವರು.



ಭಾಗವಹಿಸಿದ್ದ ನವೋದ್ಯಮಿಗಳು

ನವೋದ್ಯಮಕ್ಕೆ ಮೈಸೂರು ಪ್ರಶಸ್ತ ಸ್ಥಳ

ಸ್ಕ್ಯಾನ್‌ರೇ ಟೆಕ್ನಾಲಜೀಸ್ ಸಂಸ್ಥಾಪಕ ವಿಶ್ವಪ್ರಸಾದ್ ಆಳ್ವ ಅಭಿಮತ

ಮೈಸೂರು, ಆ.5(ಆರ್‌ಕೆ)– ನವೋದ್ಯಮ (ಸ್ಟಾರ್ಟ್‌ಅಪ್)ಕ್ಕೆ ಮೈಸೂರು ಪ್ರಶಸ್ತ ಸ್ಥಳವಾಗಿದೆ ಎಂದು ಸ್ಕ್ಯಾನ್‌ರೇ ಟೆಕ್ನಾಲಜೀಸ್ ಸಂಸ್ಥಾಪಕ ಮತ್ತು ವ್ಯವಸ್ಥಾಪಕ ನಿರ್ದೇಶಕ ವಿಶ್ವಪ್ರಸಾದ್ ಆಳ್ವ ಅಭಿಪ್ರಾಯಪಟ್ಟಿದ್ದಾರೆ. ಮೈಸೂರಿನ ಎಸ್‌ಜೆಸಿಇಯಲ್ಲಿ ಇಂದು ಆರಂಭವಾದ ಮೈಸೂರು ಸ್ಟಾರ್ಟ್‌ಅಪ್ ಪೆವಿಲಿಯನ್‌ನಲ್ಲಿ ಭಾಗವಹಿಸಿ 'Mysuru Vision 2030: What, Why, When for Mysuru' ವಿಷಯವಾಗಿ ಮಾತನಾಡುತ್ತಿದ್ದ ಅವರು, ಮೈಸೂರಿನಲ್ಲಿ ಸ್ಟಾರ್ಟ್‌ಅಪ್‌ಗೆ ಸದೃಢ ಆರ್ಥಿಕ ನೀತಿ, ಮಾನವ ಸಂಪನ್ಮೂಲ, ಸಂಶೋಧನೆ, ಅಭಿವೃದ್ಧಿ ವಾತಾವರಣ ಕಲ್ಪಿಸುವ ಅಗತ್ಯವಿದೆ ಎಂದರು.

ಮೈಸೂರಿನ ಸಮಗ್ರ ಅಭಿವೃದ್ಧಿಗೆ ನಾಗರಿಕರು ಕೈಜೋಡಿಸಬೇಕೆಂದು, ಪ್ರತಿಯೊಬ್ಬರೂ 'ನಮ್ಮ ಮೈಸೂರು–ನಮ್ಮ ಹೆಮ್ಮೆ, ಸ್ವಚ್ಛ, ಶುದ್ಧ, ಸಮೃದ್ಧಗೊಳಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕು. ಮೈಸೂರು ಹೊರವಲಯದ ಪಾರಂಪರಿಕ ಪ್ರದೇಶದಲ್ಲಿರುವ 12,000 ಎಕರೆ ಭೂಮಿ ಬಳಕೆಯಾಗದೇ ಹಾಗೆಯೇ ಉಳಿದಿದೆ. 1990ರಲ್ಲೇ ಸ್ವಾಧೀನಪಡಿಸಿಕೊಂಡಿರುವ ಆ ಭೂಮಿಯನ್ನು ಕೈಗಾರಿಕೆಗಳು, ಜ್ಞಾನಾಧಾರಿತ ಸಂಸ್ಥೆ ಅಥವಾ ಕಂಪನಿಗಳಿಗೆ ಬಳಸಲು ಹಸ್ತಾಂತರಿಸಬಹುದು ಎಂದು ಅವರು ಇದೇ ಸಂದರ್ಭ ನುಡಿದರು.

ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಕೈಗಾರಿಕೆ, ಶಿಕ್ಷಣ, ಆರೋಗ್ಯ ಕ್ಷೇತ್ರಗಳಿಗೆ ಮೈಸೂರು ರಾಜರು ನೀಡಿದ್ದ ಇನ್ನೋವೇಷನ್ ತಂತ್ರಜ್ಞಾನಗಳೇ ಇಂದಿಗೂ ಮುಂದುವರಿಯುತ್ತಿವೆ. ಸೈಬರ್ ಸೆಕ್ಯೂರಿಟಿ, ಸಾರಿಗೆಯಂತಹ ಅಭಿವೃದ್ಧಿಗೆ ಭದ್ರಬುನಾದಿ ಹಾಕಿದ ರಾಜರು ಮೈಸೂರಿನ ಸಮಗ್ರ ಅಭಿವೃದ್ಧಿಗೆ ಕೊಡುಗೆ ನೀಡಿದ್ದಾರೆ. ಅದನ್ನು ಉಳಿಸಿ ಮತ್ತಷ್ಟು ಸದೃಢಗೊಳಿಸಬೇಕೆಂದೂ ನುಡಿದರು.

ಪ್ರೋಟಿಯನ್ ಇಗೌ ಟೆಕ್ನಾಲಜೀಸ್ ಲಿಮಿಟೆಡ್ ಮ್ಯಾನೇಜಿಂಗ್ ಡೈರೆಕ್ಟರ್ ಹಾಗೂ ಸಿಇಓ ಸುರೇಶ್ ಸೇಥಿ ಮಾತನಾಡಿ, 'ಆತ್ಮನಿರ್ಭರ ಭಾರತ' ಸಾಕಾರಗೊಳಿಸಲು ವಿಗ್ಯಾನ್‌ಲ್ಯಾಬ್ಸ್ ಇನ್ನೋವೇಷನ್ಸ್‌ನೊಂದಿಗೆ ಎನರ್ಜಿ ಎಫಿಷಿಯೆಂಟ್ ಕ್ಲೌಡ್ ಸರ್ವೀಸ್ ಒದಗಿಸಬೇಕಾಗಿದೆ ಎಂದರು.

ಭಾರತವು ವಿಶ್ವದ ಶಕ್ತಿಶಾಲಿ ನವೋದ್ಯಮ ಆರ್ಥಿಕ ವ್ಯವಸ್ಥೆ ಹೊಂದಿರುವ ದೇಶ

ಪ್ರಧಾನಿ ನರೇಂದ್ರ ಮೋದಿ ಸಂದೇಶ



ಮೈಸೂರು, ಆ.5(ಆರ್‌ಕೆ)– ಭಾರತವು ವಿಶ್ವದ ಶಕ್ತಿಶಾಲಿ ಸ್ಟಾರ್ಟ್‌ಅಪ್ ಆರ್ಥಿಕ ವ್ಯವಸ್ಥೆ ಹೊಂದಿರುವ ದೇಶವಾಗಿ ಹೊರಹೊಮ್ಮಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ.

ಮೈಸೂರಿನ ಎಸ್‌ಜೆಸಿಇ ಆವರಣದಲ್ಲಿ ಇಂದಿನಿಂದ ಆರಂಭವಾದ 3 ದಿನಗಳ ಮೈಸೂರು ಸ್ಟಾರ್ಟ್ ಅಪ್ ಪೆವಿಲಿಯನ್ ಅನ್ನು ವರ್ಚುಯಲ್ ಮೂಲಕ ಉದ್ಘಾಟಿಸಬೇಕಾಗಿತ್ತಾದರೂ, ಕಾರ್ಯ ಒತ್ತಡದಿಂದ ಭಾಗವಹಿಸಲು ಸಾಧ್ಯವಾಗದ ಕಾರಣ ಕಾರ್ಯಕ್ರಮದಕ್ಕೆ ಶುಭ ಕೋರಿ ಪ್ರಧಾನಿಗಳು ಕಳುಹಿಸಿರುವ ಲಿಖಿತ ಸಂದೇಶವನ್ನು ಕಾರ್ಯಕ್ರಮದಲ್ಲಿ ಪ್ರಸ್ತುತಪಡಿಸಲಾಯಿತು.

ಜನರ ಸಬಲೀಕರಣ ಮಾಡುವ ಒಂದು ಮಾಧ್ಯಮವಾಗಿ ನಾವು ತಂತ್ರಜ್ಞಾನವನ್ನು ಬಳಸಿಕೊಂಡಿದ್ದೇವೆ. ಅದು ಪ್ರತಿಯೊಂದು ಕ್ಷೇತ್ರಕ್ಕೂ ಬಲ ತುಂಬಿ ವಹಿವಾಟುಗಳನ್ನು ಸುಲಭಗೊಳಿಸುವುದಕ್ಕೂ ಸಹಾಯ ಮಾಡಿದೆ ಎಂದು ಪ್ರಧಾನಿಗಳು ಸಂದೇಶದಲ್ಲಿ ಅಭಿಪ್ರಾಯಪಟ್ಟಿದ್ದಾರೆ. ನಮ್ಮ ದೇಶವು ಅತ್ಯಂತ ಶಕ್ತಿಶಾಲಿ ಸ್ಟಾರ್ಟ್‌ಅಪ್ ಅರ್ಥವ್ಯವಸ್ಥೆ ಹೊಂದಿರುವ ರಾಷ್ಟ್ರವಾಗಿದ್ದು, ಈ ನವೋದ್ಯಮಗಳು ನಮ್ಮ ಯುವ ಮತ್ತು ಸೃಜನಶೀಲ ಉದ್ಯಮಿಗಳಿಗೆ ವರದಾನವಾಗಿ ಪರಿಣಮಿಸಿವೆ. ನಮ್ಮ ದೇಶವು ಇಂದು ಚಲನಶೀಲ ಸ್ಟಾರ್ಟ್‌ಅಪ್ ನೀತಿ ಹೊಂದಿರುವುದರಿಂದ ಯುವ ಸಮೂಹಕ್ಕೆ ಮತ್ತಷ್ಟು ಬಲ ತುಂಬುತ್ತಿದ್ದು, ನಮ್ಮ ದೇಶದ ಅಭಿವೃದ್ಧಿ ಯಶೋಗಾಥೆಗೆ ಈ ನೀತಿಯು ಒಂದು ಪರಿವರ್ತಕ ಪಾತ್ರದ ಮೂಲಕ ಪುಷ್ಠಿ ನೀಡುತ್ತಿದೆ ಎಂದೂ ನರೇಂದ್ರ ಮೋದಿ ತಿಳಿಸಿದ್ದಾರೆ.

ನಮ್ಮ ಸ್ಟಾರ್ಟ್‌ಅಪ್‌ಗಳು ಕೇವಲ ನಗರ ಪ್ರದೇಶಗಳಿಗೆ ಮಾತ್ರ ಸೀಮಿತವಾಗದೇ, ಗ್ರಾಮಾಂತರ ಯುವಕರಿಗೂ ನವಚೈತನ್ಯ ನೀಡುತ್ತಿವೆ. ಕೃಷಿ, ಶಿಕ್ಷಣ, ಆರೋಗ್ಯ ಕ್ಷೇತ್ರಗಳಲ್ಲೂ ಸಹ ನವೋದ್ಯಮಗಳು ಪ್ರಮುಖ ಪಾತ್ರ ವಹಿಸುತ್ತಿರುವುದು ಆಶಾದಾಯಕ ಬೆಳವಣಿಗೆಯೇ ಸರಿ. ಭಾರತವು ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಿಸುತ್ತಿರುವ ಸಂದರ್ಭದಲ್ಲಿ ಈ ಸ್ಟಾರ್ಟ್ ಅಪ್‌ಗಳು ಉತ್ತೇಜನಕರವಾಗಿವೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ವಿದ್ಯಾರ್ಥಿಗಳು, ಶಿಕ್ಷಣ ಸಂಸ್ಥೆಗಳು, ಸಂಶೋಧನಾ ವಿದ್ಯಾರ್ಥಿಗಳು, ಶಿಕ್ಷಕರು, ಉದ್ಯಮ ಪ್ರತಿನಿಧಿಗಳು, ಎಂಎಸ್‌ಎಂಇಗಳು ಸ್ಟಾರ್ಟ್‌ಅಪ್‌ಗಳಲ್ಲಿ ಭಾಗವಹಿಸುತ್ತಿರುವುದು ಪರಸ್ಪರ ಜ್ಞಾನ ಮತ್ತು ಚಿಂತನೆಗಳನ್ನು ಹಂಚಿಕೊಳ್ಳಲು ಒಂದು ಉತ್ತಮ ವೇದಿಕೆ ಯಾಗಿದೆಯಲ್ಲದೆ, ಯುವ ಜನರಲ್ಲಿ ಕ್ರಿಯಾಶೀಲತೆ ಹಾಗೂ ಉದ್ಯಮಶೀಲತೆಯ ಬೆಳವಣಿಗೆಗೆ ಸಹಕಾರಿಯಾಗಿದೆ ಎಂದು ಪ್ರಧಾನಿಗಳು ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ಸ್ಟಾರ್ಟ್‌ಅಪ್ ಪೆವಿಲಿಯನ್ ಮತ್ತು ಕಾನ್‌ಕ್ಲೇವ್ ಒಂದು ಕಾರ್ಯರೂಪದ ಮಾರ್ಗಸೂಚಿಯನ್ನು ಸಿದ್ಧಪಡಿಸಲಿ ಎಂದು ಆಶಿಸುತ್ತೇನೆ. ಗ್ರಾಮೀಣ ಪ್ರದೇಶದ ಜನರ ಆಶೋತ್ತರ, ಆಕಾಂಕ್ಷೆಗಳನ್ನು ಈಡೇರಿಸಲು ಪ್ರೋಟಿಯನ್ ಕ್ಲೌಡ್ ಟೆಕ್ನಾಲಜಿಯು ತಂತ್ರಜ್ಞಾನವನ್ನು ಒಂದು ಸಾಮೂಹಿಕ ಪ್ರಸರಣ ಸಾಧನವನ್ನಾಗಿ ಬಳಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತದೆ ಎಂಬ ಅಚಲ ವಿಶ್ವಾಸ ಹೊಂದಿದ್ದೇನೆ ಎಂದು ನರೇಂದ್ರ ಮೋದಿ ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

ಮೈಸೂರು ನವೋದ್ಯಮ ಉತ್ಸವದಲ್ಲಿ ಮೈಸೂರಿಗರದ್ದೇ ಪಾರುಪತ್ಯ : ನಾನಾ ಹೊಸ ಯೋಜನೆಗಳಲ್ಲಿ ಪ್ರತಿಭೆ ಪ್ರದರ್ಶನ



'ಮೈಸೂರು ನವೋದ್ಯಮ ಉತ್ಸವ' (ಮೈಸೂರು ಸ್ಟಾರ್ಟ್ ಅಪ್ ಪೆವಿಲಿಯನ್)ದಲ್ಲಿ ಭಾಗವಹಿಸಿದ್ದ ಯದುವೀರ್ ಅವರ ಪತ್ನಿ ತ್ರಿಷಿಕಾ ದೇವಿ ಒಡೆಯರ್ ಎಲ್ಲಾ ಮಳಿಗೆಗಳಿಗೆ ಭೇಟಿ ನೀಡಿ ಮಾಹಿತಿಗಳನ್ನು ಪಡೆದುಕೊಂಡರು.



ಮೈಸೂರಿನ 'ಐಡಿಯಾಸ್ ಅಲ್ಟಿಮೇಟ್ ಮೈಸೂರು' ಸಂಸ್ಥೆಯೂ ಜೆಎಸ್‌ಎಸ್‌ನ ಉನ್ನತ ಶಿಕ್ಷಣ ಮತ್ತು ಸಂಶೋಧನೆಯ ಅಕಾಡೆಮಿ ಜೊತೆಗೂಡಿ ನಿರ್ಮಿಸಿರುವ ಪೋರ್ಟಬಲ್ ಕ್ರಿಟಿಕಲ್ ಕೇರ್ ಐಸೋಲೇಶನ್ ಯೂನಿಟ್

ಮೈಸೂರು, ಆ.5(ಜಿಎ)– ಮೈಸೂರಿನಲ್ಲಿ ಸ್ಟಾರ್ಟ್‌ಅಪ್‌ಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಆರಂಭವಾಗಿರುವ 3 ದಿನಗಳ 'ಮೈಸೂರು ನವೋದ್ಯಮ ಉತ್ಸವ' (ಮೈಸೂರು ಸ್ಟಾರ್ಟ್ ಅಪ್ ಪೆವಿಲಿಯನ್) ಮೊದಲ ದಿನವೇ ಅಪಾರ ಮೆಚ್ಚುಗೆಗೆ ಪಾತ್ರವಾಗಿದೆ.

ಎಸ್‌ಜೆಸಿಇ ಸ್ಟೆಪ್, ಟಿಐಇ ಮೈಸೂರು, ಯಂಗ್ ಇಂಡಿಯನ್ಸ್, ಸಿಐಐ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಡಿಜಿಟಲ್, ಸ್ಟಾರ್ಟ್ ಅಪ್ ಇಂಡಿಯಾ ಮತ್ತು ಸ್ಟಾರ್ಟ್ ಅಪ್ ಕರ್ನಾಟಕದ ಸಹಯೋಗದಲ್ಲಿ ಆರಂಭವಾಗಿದ್ದು, 20ಕ್ಕೂ ಹೆಚ್ಚು ಹೂಡಿಕೆದಾರರು, ಮೆಂಟರ್‌ಗಳು, 25ಕ್ಕೂ ಹೆಚ್ಚು ಭಾಷಣಕಾರರು ಪ್ರೇರಣೆ ನೀಡಲಿದ್ದಾರೆ. ನೂರು ಮಳಿಗೆಗಳು ಮತ್ತು 15ಸಾವಿರಕ್ಕೂ ಹೆಚ್ಚಿನ ವಿದ್ಯಾರ್ಥಿಗಳು, ಸಂಶೋಧಕರು, ಕೈಗಾರಿಕಾ ವೃತ್ತಿಪರರು ಭಾಗವಹಿಸುತ್ತಿದ್ದಾರೆ. ಈ ಮೂಲಕ ಯುವ ಜನರು ಹಾಗೂ ವಿದ್ಯಾರ್ಥಿಗಳಿಗೆ ನವೋದ್ಯಮದ ಬಗ್ಗೆ ಜಾಗೃತಿ ಮೂಡಿಸುವ ಪ್ರಯತ್ನ ನಡೆದಿದೆ.

ವಿಶೇಷ ಎಂದರೆ ಈ ಮೂರು ದಿನಗಳ ಕಾಲ ಉತ್ಸವದ ಭಾಗವಾಗಿ ಮೊದಲ ದಿನವಾದ ಇಂದು ನಡೆದ ಸಮ್ಮೇಳನವು, ನವೋದ್ಯಮಗಳಿಗೆ ಇರುವ ಅವಕಾಶ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ದೊರೆಯುತ್ತಿರುವ ಪ್ರೋತ್ಸಾಹ ಹಾಗೂ ಸಾಂಸ್ಕೃತಿಕ ನಗರಿಯಲ್ಲಿ ಇರುವಂತಹ ಉದ್ಯಮಿ ಸ್ನೇಹಿ ಪೂರಕ ವಾತಾವರಣ ಬಾರೀ ಮೆಚ್ಚುಗೆಗೆ ಪಾತ್ರವಾಗುತ್ತಿದ್ದು, ನವೋದ್ಯಮದಲ್ಲಿ ಮೈಸೂರಿಗರೇ ಹೊಸ ಹೊಸ ಯೋಜನೆಗಳನ್ನು ರೂಪಿಸಿ ಆರೋಗ್ಯ, ಶಿಕ್ಷಣ, ತಂತ್ರಜ್ಞಾನ, ಆಹಾರ ಸೇರಿದಂತೆ ಬಹುತೇಕ ಮಳಿಗೆಗಳಲ್ಲಿ ಮೈಸೂರಿನ ನವ ಉದ್ಯಮಿಗಳು ಇರುವುದು ವಿಶೇಷವಾಗಿತ್ತು.

ಕೊರೊನಾ ಸಂದರ್ಭದಲ್ಲಿ ವೆಂಟಿಲೇಟರ್‌ಗಳಿಲ್ಲದೆ ಅನೇಕ ಸಾವು–ನೋವುಗಳು ಸಂಭವಿಸಿತ್ತು. ಇದನ್ನು ಮನದಲ್ಲಿಟ್ಟುಕೊಂಡು ಮೈಸೂರಿನ 'ಐಡಿಯಾಸ್ ಅಲ್ಟಿಮೇಟ್ ಮೈಸೂರು' ಸಂಸ್ಥೆಯೂ ಜೆಎಸ್‌ಎಸ್‌ನ ಉನ್ನತ ಶಿಕ್ಷಣ ಮತ್ತು ಸಂಶೋಧನೆಯ ಅಕಾಡೆಮಿ ಜೊತೆಗೂಡಿ ನಿರ್ಮಿಸಿರುವ ಪೋರ್ಟಬಲ್ ಕ್ರಿಟಿಕಲ್ ಕೇರ್ ಐಸೋಲೇಶನ್ ಯುನಿಟ್ (portable on demand critical care isoloation unit) ಅನ್ನು ದೇಶದಲ್ಲಿಯೇ ಮೊದಲ ಬಾರಿಗೆ ನಿರ್ಮಿಸಿದ್ದು, ಮೈಸೂರು ಸ್ಟಾರ್ಟ್ ಅಪ್ ಪೆವಿಲಿಯನ್‌ಗೆ ಭೇಟಿ ನೀಡಿದ ಆರೋಗ್ಯ ಕ್ಷೇತ್ರದ ಉದ್ಯಮಿಗಳ ಮೆಚ್ಚುಗೆಗೆ ಪಾತ್ರವಾಯಿತು.

ಪೋರ್ಟಬಲ್ ಕ್ರಿಟಿಕಲ್ ಕೇರ್ ಐಸೋಲೇಶನ್ ಯುನಿಟ್‌ನ ವಿಶೇಷ ಎಂದರೆ ಈ ಯುನಿಟ್‌ನಲ್ಲಿ ತೀವ್ರ ನಿಗಾ ಘಟಕದಲ್ಲಿ ಯಾವ ರೀತಿ ವ್ಯವಸ್ಥೆಯನ್ನು ಮಾಡಲಾಗಿರುತ್ತದೊ ಅಂತೆಯೇ ರೋಗಿಗೆ ಚಿಕಿತ್ಸೆ ನೀಡಲು ಎಲ್ಲಾ ರೀತಿಯ ವೈದ್ಯಕೀಯ ಸಲಕರಣೆಗಳ ಸಿದ್ಧತೆಗಳನ್ನು ಮಾಡಲಾಗಿದೆ. ರೋಗಿಗಳು ಇರುವ ಸ್ಥಳದಲ್ಲಿ ಚಿಕಿತ್ಸೆ ನೀಡಬಹುದಾಗಿದೆ. ಈ ಯುನಿಟ್ ಅನ್ನು ವಿದ್ಯುತ್ ಮತ್ತು ಯುಪಿಎಸ್ ಮೂಲಕವೂ ಬಳಸ ಬಹುದಾಗಿದೆ. ಕೊರೊನಾ ಸೋಂಕಿ ನಿಂದ ಬಳಲುತ್ತಿರುವ ರೋಗಿಗಳಿಗೆ ಯಾವುದೇ ಆತಂಕವಿಲ್ಲದೆ ಚಿಕಿತ್ಸೆ ನೀಡಲು ಈ ಘಟಕ ಉಪಯುಕ್ತವಾಗಲಿದೆ ಎಂದು 'ಐಡಿಯಾಸ್ ಅಲ್ಟಿಮೇಟ್ ಮೈಸೂರು' ಸಂಸ್ಥೆಯ ನಾಗೇಂದ್ರ ಆರ್. ಶೆಟ್ಟಿ ತಿಳಿಸಿದರು.

ಮೊದಲ ದಿನವಾದ ಇಂದು ಅನೇಕ ವಿಷಯಗಳ ಬಗ್ಗೆ ಪರಿಣಿತಿ ಹೊಂದಿರುವವರು ಪ್ಯಾನಲ್‌ನಲ್ಲಿ ಚರ್ಚೆ ನಡೆಸಿದರು. ಅದರಲ್ಲಿ ಪ್ರಮುಖವಾಗಿ ಇಂದು cyber security erring on the caution ಎಂಬ ವಿಷಯದ ಬಗ್ಗೆ ಮೈಸೂರಿನ 'ಸೈಬರ್‌ವರ್ಸ್ ಫೌಂಡೇಷನ್' ಸಂಸ್ಥೆಯೂ ಸೈಬರ್ ಕ್ರೈಮ್ ಸಮಸ್ಯೆಗಳಿಂದ ಪಾರಾಗುವುದರ ಬಗ್ಗೆ ಮಾಹಿತಿ ನೀಡಿದರು ಅದರಲ್ಲಿ ಪ್ರಮುಖವಾಗಿ ಕಾಪ್ ಕನೇಕ್ಟಿವಿಟಿ ಎಂಬ ತಮ್ಮ ಹೊಸ ಯೋಜನೆ ಬಗ್ಗೆ ತಿಳಿಸಿದರು. ಇದರ ಮೂಲಕ ಸೈಬರ್ ಪ್ರಕರಣಗಳಲ್ಲಿ ನೇರವಾಗಿ ಠಾಣೆಗೆ ಭೇಟಿ ನೀಡಲು ಮುಜುಗರವಾಗುತ್ತದೆ. ಆ ಹಿನ್ನೆಲೆಯಲ್ಲಿ ಕಾಪ್ ಕನೆಕ್ಟಿವಿಟಿ ಯೋಜನೆಯನ್ನು ರೂಪಿಸುತ್ತಿದ್ದು, ಇದರ ಮೂಲಕ ಒಂದು ಕೆಫೆಯಲ್ಲಿ ಕುಳಿತುಕೊಂಡು ತಮ್ಮ ಸಮಸ್ಯೆ ಬಗ್ಗೆ ಪೊಲೀಸ್ ಮತ್ತು ವಕೀಲರ ಸಹಾಯದೊಂದಿಗೆ ದೂರು ಸಲ್ಲಿಸಬಹುದಾಗಿದೆ ಕೆಲವೇ ದಿನಗಳಲ್ಲಿ ಈ ಯೋಜನೆಯನ್ನು ಪರಿಚಯಿಸಲಾಗುವುದು ಎಂದು ಚರ್ಚೆಯಲ್ಲಿ ತಿಳಿಸಲಾಯಿತು

ಮೈಸೂರು ರಿಂಗ್ ರಸ್ತೆಯ ರೈಲ್ವೆ ಅಂಡರ್‌ಪಾಸ್‌ಗಳಲ್ಲಿ ರಸ್ತೆ ವಿಸ್ತರಣೆ ಆಗ್ರಹಿಸಿ ಪ್ರತಿಭಟನೆ

ಮೈಸೂರು,ಆ.5(ಎಂಟಿವೈ)– ಮೈಸೂರು ರಿಂಗ್ ರಸ್ತೆಯ ಅಪಾಯಕಾರಿ ಅಂಡರ್ ಪಾಸ್ ಸೇತುವೆಗಳ ಬಳಿ ರಸ್ತೆ ವಿಸ್ತರಣೆಗೆ ಆಗ್ರಹಿಸಿ ನಗರ ಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್ ನೇತೃತ್ವದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಕೆಆರ್‌ಎಸ್ ರಸ್ತೆ ಜಂಕ್ಷನ್ ಹಾಗೂ ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್ ನಡುವೆ ರಿಂಗ್ ರಸ್ತೆಯಲ್ಲಿರುವ ರೈಲ್ವೆ ಅಂಡರ್ ಪಾಸ್ ಸೇತುವೆ ಬಳಿ ಜಮಾಯಿಸಿ, ಅಮಾಯಕರು ಜೀವ ಕಳೆದುಕೊಳ್ಳುತ್ತಿದ್ದರೂ ರಸ್ತೆ ವಿಸ್ತರಣೆ ಬಗ್ಗೆ ನಿರ್ಲಕ್ಷ್ಯ ವಹಿಸಿರುವ ವ್ಯವಸ್ಥೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಆಗಿನ ಪರಿಸ್ಥಿತಿಗೆ ಅನುಗುಣವಾಗಿ ರೈಲ್ವೆ ಅಂಡರ್ ಪಾಸ್ ಸೇತುವೆಗಳನ್ನು ನಿರ್ಮಿಸಲಾಗಿದೆ. ಇಂತಹ ಕಿರಿದಾದ ಅಂಡರ್‌ಪಾಸ್‌ಗಳನ್ನೇ ಒಳಗೂಡಿಸಿಕೊಂಡು ರಿಂಗ್ ರಸ್ತೆ ನಿರ್ಮಿಸಲಾಗಿದೆ. ಆಗ ತಕ್ಷಣಕ್ಕೆ ರೈಲ್ವೆ ಸೇತುವೆಗಳ ಬಳಿ ರಸ್ತೆ ವಿಸ್ತರಣೆ ಸಾಧ್ಯವಾಗದಿರಬಹುದು. ಆದರೆ 2 ದಶಕವಾದರೂ ಈ ನಿಟ್ಟಿನಲ್ಲಿ ಯಾವುದೇ ಕ್ರಮ ಕೈಗೊಳ್ಳದಿರುವುದು ವಿಷಾಧನೀಯ. ದಿನ ಕಳೆದಂತೆ ರಿಂಗ್ ರಸ್ತೆಯಲ್ಲಿ ವಾಹನ ದಟ್ಟಣೆ ಹೆಚ್ಚಾಗಿದ್ದು ಅಂಡರ್‌ಪಾಸ್‌ಗಳ ಬಳಿ ಆಗಾಗ್ಗೆ ಅಪಘಾತ ಸಂಭವಿಸಿ, ಜೀವಹಾನಿಯಾಗುತ್ತಿದೆ ಎಂದು



ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿದರು.

ಈ ವೇಳೆ ಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್ ಮಾತನಾಡಿ, ರಿಂಗ್‌ರಸ್ತೆಯಲ್ಲಿರುವ ರೈಲ್ವೆ ಅಂಡರ್ ಪಾಸ್‌ಗಳ ಬಳಿ 2 ನಿಮಿಷ ನಿಂತು ವಾಹನ ಸಂಚಾರವನ್ನು ಗಮನಿಸಿದರೆ ಅಲ್ಲಿನ ಗಂಭೀರತೆ ಅರ್ಥವಾಗುತ್ತದೆ. ನಾಲ್ಕು ಪಥದ ರಸ್ತೆಯಲ್ಲಿ ಎರಡೂ ಕಡೆಯಿಂದ ಬರುವ ವಾಹನಗಳು ಅಂಡರ್‌ಪಾಸ್‌ಗಳ ಬಳಿ ಡಿವೈಡರ್ ಇಲ್ಲದ ದ್ವಿಪಥದಲ್ಲಿ ಸಂಚರಿಸುತ್ತವೆ. ವೇಗವಾಗಿ ಬರುವ ವಾಹನಗಳನ್ನು ತಕ್ಷಣ ನಿಯಂತ್ರಿಸುವುದು ಕಷ್ಟ, ಅಂಡರ್‌ಪಾಸ್ ನಂತರ ತಕ್ಷಣ ಎಡಕ್ಕೆ ತಿರುವು ಪಡೆಯುವುದೂ ಸುಲಭವಲ್ಲ. ಈ ಸಂದರ್ಭದಲ್ಲಿ ಚಾಲಕನ ನಿಯಂತ್ರಣ ಕಳೆದು ಕೊಂಡು ಅಪಘಾತಗಳು ಸಂಭವಿಸುತ್ತವೆ. ಅಂಡರ್‌ಪಾಸ್ ಬಳಿಯೇ ಆಗಾಗ್ಗೆ ಇಂತಹ ದುರಂತ ಸಂಭವಿಸುತ್ತಿದ್ದರೂ ಸಂಬಂಧಪಟ್ಟವರು ಇತ್ತ ಗಮನ ಹರಿಸಿಲ್ಲ ಎಂದು ತೀವ್ರ ಬೇಸರ ವ್ಯಕ್ತಪಡಿಸಿದರು.

ರಿಂಗ್ ರಸ್ತೆಯಲ್ಲಿ ವಾಹನ ದಟ್ಟಣೆ ಹೆಚ್ಚಾಗಿದೆ. ಅದರಲ್ಲೂ ಕೆಆರ್‌ಎಸ್ ಜಂಕ್ಷನ್‌ನಿಂದ ಬೆಂಗಳೂರು ರಸ್ತೆ ಜಂಕ್ಷನ್ ನಡುವೆ ಅತೀ ಹೆಚ್ಚು ವಾಹನ ಓಡಾಡುತ್ತವೆ. ಕೈಗಾರಿಕೆಗಳು, ವಸತಿ ಪ್ರದೇಶಗಳೂ ಇರುವುದರಿಂದ ಭಾರೀ ವಾಹನ ಮಾತ್ರವಲ್ಲದೆ ದ್ವಿಚಕ್ರ ವಾಹನಗಳ ಸಂಖ್ಯೆಯೂ ಅಧಿಕವಾಗಿರುತ್ತವೆ. ಅಂಡರ್‌ಪಾಸ್ ಬಳಿ ಸ್ವಲ್ಪ ಎಚ್ಚರ ತಪ್ಪಿದರೂ ಅಪಘಾತ ಖಚಿತ. ಜಾಗರೂಕತೆಯಿಂದ ಚಾಲನೆ ಮಾಡಿದರೂ ಎದುರಿನಿಂದ ಬರುವವರ ಅಚಾತುರ್ಯದಿಂದಲೂ ಅವಘಡ ಸಂಭವಿಸುತ್ತಿವೆ ಎಂದು ತಿಳಿಸಿದರು.

ಮುಂದಾಲೋಚನೆಯಿಂದ ವೈಜ್ಞಾನಿಕ ರೀತಿಯಲ್ಲಿ ಅಂಡರ್‌ಪಾಸ್‌ಗಳನ್ನು ನಿರ್ಮಿಸಬೇಕಿತ್ತು. ಇಲ್ಲವೇ ಅಂಡರ್‌ಪಾಸ್ ಬಳಿ ರಸ್ತೆ ವಿಸ್ತರಣೆ ಮಾಡಿಯೇ ರಿಂಗ್ ರಸ್ತೆಯನ್ನು ಬಳಕೆಗೆ ಮುಕ್ತಗೊಳಿಸಬೇಕಿತ್ತು. ವ್ಯವಸ್ಥೆ ನಿರ್ಲಕ್ಷ್ಯಕ್ಕೆ ಅಮಾಯಕರನ್ನು ಬಲಿಕೊಡುವುದು ಸರಿಯೇ?. ರೈಲ್ವೆ ಇಲಾಖೆ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಸಮಾಲೋಚನೆ ನಡೆಸಿ, ಸಮನ್ವಯತೆಯಿಂದ ಪರಿಹಾರ ಕಾರ್ಯ ಕೈಗೊಳ್ಳಬೇಕು. ತುರ್ತಾಗಿ ಅಂಡರ್‌ಪಾಸ್‌ಗಳ ಬಳಿ ರಸ್ತೆ ವಿಸ್ತರಣೆ ಮಾಡಿ, ಜನರ ಜೀವ ಕಾಪಾಡಬೇಕೆಂದು ಅವರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಪಾಲಿಕೆ ಸದಸ್ಯರಾದ ಪ್ರೇಮ ಶಂಕರೇಗೌಡ, ರಮೇಶ್, ಮಾಜಿ ಸದಸ್ಯರಾದ ಕೆ.ವಿ. ಮಲ್ಲೇಶ್, ಶಿವಣ್ಣ ಸೇರಿದಂತೆ ಅನೇಕ ಮುಖಂಡರು ಹಾಗೂ ಸಾರ್ವಜನಿಕರು, ಅದರಲ್ಲೂ ಹೆಬ್ಬಾಳು, ಮೇಟಗಳ್ಳಿ ಭಾಗದವರು ಪಾಲ್ಗೊಂಡಿದ್ದರು.

ಶ್ರೀರಾಂಪುರ ಪಟ್ಟಣ ಪಂಚಾಯಿತಿ ಕಾರ್ಯಾಲಯ ಮೈಸೂರು ಜಿಲ್ಲೆ- 570008

ದೂರವಾಣಿ ಸಂಖ್ಯೆ :-0821-2330109 ಇ–ಮೇಲ್:itstaff_ulb_srirampur@yahoo.com
ಫ್ಯಾಕ್ಸ್ ಸಂಖ್ಯೆ :- ವೆಬ್ ಸೈಟ್–
ಸಂ: ಪಪಂಶ್ರೀ:.ಎಸ್.ಎಫ್.ಸಿ.ಪ.ಪಂ.ನಿ:ವ.ಕಾ:/ಸಿಆರ್:1:2022–23 ದಿನಾಂಕ : 05–08–2022

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಶ್ರೀರಾಂಪುರ ಪಟ್ಟಣ ಪಂಚಾಯ್ತಿಯ ವ್ಯಾಪ್ತಿಯ ನಾಗರೀಕರಿಗೆ ತಿಳಿಯಪಡಿಸುವುದೇನೆಂದರೆ ಶ್ರೀರಾಂಪುರ ಪಟ್ಟಣ ಪಂಚಾಯ್ತಿಯ 2022–23ನೇ ಸಾಲಿನ ಕ್ರಿಯಾಯೋಜನೆಯು ಮಾನ್ಯ ಜಿಲ್ಲಾಧಿಕಾರಿಗಳು,ಮೈಸೂರು ಜಿಲ್ಲೆ,ಮೈಸೂರುರವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಮುನಿಎಸ್.ಎಫ್.ಸಿ.ಮುನಿ:ಶ್ರೀಪಪಂ/ಕ್ರಿಅ ಸಿಆರ್–38/2022–23.ದಿ:29–07–2022ರ ರೀತ್ಯಾ ಮಂಜೂರಾಗಿದ್ದು, ಅದರಂತೆ 1)ಶೇ.24.10ರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, 2)ಶೇ.7.25ರ ಇತರೆ ಬಡಜನರು ಮತ್ತು 3)ಶೇ.5ರ ವಿಶೇಷಚೇತನರ ಕಲ್ಯಾಣಕ್ಕಾಗಿ ಸರ್ಕಾರದ ನಿಯಮ/ನಿಬಂದನೆಗಳಿಗೊಳಪಟ್ಟು ವಿವಿಧ ವೈಯಕ್ತಿಕ ಸೌಲಭ್ಯಗಳನ್ನು ಕಲ್ಪಿಸುವ ಉದ್ದೇಶಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಪೂರಕ ದಾಖಲೆಗಳೊಂದಿಗೆ ಅರ್ಜಿಯನ್ನು ಆಹ್ವಾನಿಸಲಾಗಿರುತ್ತದೆ. ನಿಗಧಿತ ನಮೂನೆಯಲ್ಲಿ ಅರ್ಜಿಗಳನ್ನು ಭರ್ತಿ ಮಾಡಿ ಪೂರಕ ದಾಖಲಾತಿಗಳೊಂದಿಗೆ ದಿ:30–08–2022ರ ಸಂಜೆ 5.00 ಗಂಟೆಯೊಳಗೆ ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ. ಹೆಚ್ಚಿನ ಮಾಹಿತಿ ಮತ್ತು ಅರ್ಜಿಗಳಿಗಾಗಿ ಕಛೇರಿ ವೇಳೆಯಲ್ಲಿ ಯೋಜನಾ ಶಾಖೆಯನ್ನು ಭೇಟಿ ಮಾಡತಕ್ಕದ್ದು.

ಕ್ರ.ಸ	ಕಾರ್ಯಕ್ರಮಗಳ ವಿವರಗಳು	ಸಲ್ಲಿಸಬೇಕಾದ ದಾಖಲೆಗಳು.
1	ಪ.ಜಾತಿಯ ಎಂ.ಬಿ.ಬಿ.ಎಸ್./ಬಿ.ಇ. ವ್ಯಾಸಂಗ ಮಾಡುತ್ತಿರುವ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಕಂಪ್ಯೂಟರ್/ ಲ್ಯಾಪ್ ಟಾಪ್ ಖರೀದಿ ಮತ್ತು ಎಲ್.ಎಲ್.ಬಿ. ಪದವಿ ಹೊಂದಿದ ವೃತ್ತಿ ನಿರತ ವಕೀಲರುಗಳಿಗೆ ಪುಸ್ತಕ ಖರೀದಿಗೆ ಸಹಾಯಧನ ನೀಡುವುದು. (ಎಸ್.ಎಫ್.ಸಿ–2.88 ಪ.ಪಂ.ನಿಧಿ=0.23=3.11 ಲಕ್ಷ)	ಪ್ರಸಕ್ತ ಸಾಲಿನ ವ್ಯಾಸಂಗ ದೃಢೀಕರಣ ಪತ್ರ, ಸಮಾಜ ಕಲ್ಯಾಣ ಇಲಾಖೆಯಿಂದ ಲ್ಯಾಪ್‌ಟಾಪ್‌ಗೆ ಸಹಾಯಧನ/ಪುಸ್ತಕ ಖರೀದಿಗೆ ಸಹಾಯಧನ ಪಡೆದಿಲ್ಲದಿರುವ ಬಗ್ಗೆ ದೃಢೀಕರಣ ಪತ್ರ, ಬಾರ್ ಕೌನ್ಸಿಲ್‌ನಲ್ಲಿ ನೋಂದಣಿ ಆಗಿರುವ ಬಗ್ಗೆ ದೃಢೀಕರಣ ಪತ್ರ
2	ಪ.ಪಂಗಡದ ಎಂ.ಬಿ.ಬಿ.ಎಸ್./ಬಿ.ಇ. ವ್ಯಾಸಂಗ ಮಾಡುತ್ತಿರುವ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಕಂಪ್ಯೂಟರ್/ ಲ್ಯಾಪ್ ಟಾಪ್ ಖರೀದಿಗೆ ಸಹಾಯಧನ ನೀಡುವುದು. (ಎಸ್.ಎಫ್.ಸಿ–0.96 ಪ.ಪಂ.ನಿಧಿ=0.09=1.05 ಲಕ್ಷ)	ಪ್ರಸಕ್ತ ಸಾಲಿನ ವ್ಯಾಸಂಗ ದೃಢೀಕರಣ ಪತ್ರ, ಪರಿಶಿಷ್ಟ ಪಂಗಡ ಕಲ್ಯಾಣ ಇಲಾಖೆಯಿಂದ ಲ್ಯಾಪ್‌ಟಾಪ್ ಪಡೆದಿಲ್ಲದಿರುವ ಬಗ್ಗೆ ದೃಢೀಕರಣ ಪತ್ರ
3	ಪಟ್ಟಣ ಪಂಚಾಯ್ತಿ ವ್ಯಾಪ್ತಿಯ ಇತರೆ ಹಿಂದುಳಿದ ವರ್ಗದ ಜನರಿಗೆ ವಸತಿ ಯೋಜನೆಯಡಿ ಪಕ್ಕಾ ಮನೆ ನಿರ್ಮಾಣ ಫಲಾನುಭವಿಗಳಿಗೆ ಸಹಾಯಧನ ನೀಡುವುದು. (ಎಸ್.ಎಫ್.ಸಿ–1.45 ಪ.ಪಂ.ನಿಧಿ=0.12=1.57 ಲಕ್ಷ)	ಪ್ರಸಕ್ತ ಸಾಲಿನ ಅಸೆಸ್‌ಮೆಂಟ್ ನಕಲು, ಬ್ಯಾಂಕ್ ಪಾಸ್ ಬುಕ್ ನಕಲು.
4	ಪಟ್ಟಣ ಪಂಚಾಯ್ತಿ ವ್ಯಾಪ್ತಿಯ ವಿಕಲಚೇತನ ಸಣ್ಣ ಉದ್ದಿಮೆದಾರರಿಗೆ ಸಹಾಯಧನ ನೀಡುವುದು. (ಎಸ್.ಎಫ್.ಸಿ–1.25 ಪ.ಪಂ.ನಿಧಿ=0.10=1.35 ಲಕ್ಷ)	ವೃತ್ತಿ ಕೌಶಲ್ಯ ಪಡೆದಿರುವ ಬಗ್ಗೆ ತರಬೇತಿ ಪಡೆದಿದ್ದಲ್ಲಿ ಪ್ರಮಾಣ ಪತ್ರ,ವಿಕಲಚೇತನ ದೃಢೀಕರಣ ಪತ್ರ, ಯೋಜನಾ ವರದಿ,

ಪ್ರತಿ ಅರ್ಜಿದಾರರು ಕಡ್ಡಾಯವಾಗಿ ಶ್ರೀರಾಂಪುರ ಟೌನ್ ನಿವಾಸಿಗಳಾಗಿದ್ದು, ಭರ್ತಿ ಮಾಡಲಾದ ನಿಗಧಿತ ನಮೂನೆಯ ಅರ್ಜಿ ಜೊತೆ ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, (ವಾರ್ಷಿಕ ಆದಾಯ 3 ಲಕ್ಷದೊಳಗಿರಬೇಕು) ಪಡಿತರ ಚೀಟಿ,ಆಧಾರ್ ಕಾರ್ಡ್, ಚುನಾವಣಾ ಗುರುತಿನ ಚೀಟಿಗಳ ಸ್ವಯಂ ದೃಢೀಕೃತ ನಕಲುಗಳು, 3 ಸಂಖ್ಯೆ ಇತ್ತೀಚಿನ ಭಾವಚಿತ್ರ, ಮೊಬೈಲ್ ಸಂಖ್ಯೆ, ಇನ್ನಿತರೆ ಅಗತ್ಯ ದಾಖಲೆಗಳನ್ನು ಲಗತ್ತಿಸುವುದು. ಮೇಲಿನ ಸೌಲಭ್ಯಗಳನ್ನು ಕಲ್ಪಿಸುವ/ ಮಾರ್ಪಡಿಸುವ/ರದ್ದುಪಡಿಸುವ/ವಿತರಣೆ ಮಾಡುವ/ಮಾಡದಿರುವ ಹಕ್ಕನ್ನು ಸರ್ಕಾರ/ಪಟ್ಟಣ ಪಂಚಾಯ್ತಿ,ಶ್ರೀರಾಂಪುರ ಕಾಯ್ದಿರಿಸಿಕೊಂಡಿರುತ್ತದೆ.

ಹೆಚ್ಚಿನ ಮಾಹಿತಿ ಮತ್ತು ನಿಗಧಿತ ನಮೂನೆಯ ಅರ್ಜಿಗಳಿಗಾಗಿ ಪಟ್ಟಣ ಪಂಚಾಯ್ತಿಯ ಯೋಜನಾ ಶಾಖೆಗೆ ಭೇಟಿ ನೀಡಿ ಪಡೆದುಕೊಳ್ಳತಕ್ಕದ್ದು.

ಸಹಿ/– ಆಡಳಿತಾಧಿಕಾರಿಗಳು, ಪಟ್ಟಣ ಪಂಚಾಯ್ತಿ, ಶ್ರೀರಾಂಪುರ.

ಸಹಿ/– ಮುಖ್ಯಾಧಿಕಾರಿ, ಪಟ್ಟಣ ಪಂಚಾಯ್ತಿ, ಶ್ರೀರಾಂಪುರ.

ಒಂದನೇ ಪುಟದಿಂದ

ದಸರಾಗೆ 17 ಆನೆ ಅರ್ಹ

ಬೀಡು ಬಿಡುವ ಆನೆಗಳಲ್ಲಿ ಏನಾದರೂ ಆರೋಗ್ಯ ಸಮಸ್ಯೆ ಕಂಡು ಬಂದರೆ, ಬದಲಿಯಾಗಿ ಈ ಮೂರು ಆನೆಗಳನ್ನು ಕರೆತರಲು ಇಲಾಖೆ ನಿರ್ಧರಿಸಿದೆ.

ಆ.7ರಂದು ಗಜಪಯಣ: ಈ ಸಾಲಿನ ನಾಡಹಬ್ಬ ದಸರಾ ಮಹೋತ್ಸವದ ಗಜಪಯಣಕ್ಕೆ ಆ.7ರಂದು ಬೆಳಗ್ಗೆ 9.01ರಿಂದ 9.35ರೊಳಗೆ ಸಲ್ಲುವ ಕನ್ಯಾ ಲಗ್ನದಲ್ಲಿ ಚಾಲನೆ ದೊರೆಯಲಿದೆ. ಅಂಬಾರಿ ಆನೆ ಅಭಿಮನ್ಯು ನೇತೃತ್ವದ 9 ಆನೆಗಳಿಗೆ ಪೂಜೆ ಸಲ್ಲಿಸಿ, ವೀರನಹೊಸಳ್ಳಿಯಲ್ಲಿ ಬೀಳ್ಕೊಡಲಾಗುತ್ತಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಶಾಸಕ ಹೆಚ್.ಪಿ.ಮಂಜುನಾಥ್ ಸೇರಿದಂತೆ ಇನ್ನಿತರರು ಪಾಲ್ಗೊಳ್ಳಲಿದ್ದಾರೆ. ಅಂದು ಮಧ್ಯಾಹ್ನದೊಳಗೆ ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯ ಭವನಕ್ಕೆ ಆನೆಗಳು ಆಗಮಿಸಲಿವೆ.

ಗಜಪಯಣಕ್ಕೆ ಮೆರಗು: ಗಜಪಯಣಕ್ಕೆ ಈ ಬಾರಿ ಜಾನಪದ ಮೆರಗು ನೀಡಲು ಉದ್ದೇಶಿಸಲಾಗಿದೆ. ಅಲ್ಲದೆ, ಸುತ್ತಮುತ್ತಲಿನ ಗ್ರಾಮಸ್ಥರು ಹಾಗೂ ಶಾಲಾ-ಕಾಲೇಜು ವಿದ್ಯಾರ್ಥಿಗಳು ಗಜಪಯಣ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಮನವಿ ಮಾಡಲಾಗಿದೆ. ಅಲ್ಲದೆ ಕಂಸಾಳೆ, ಡೊಳ್ಳು ಕುಣಿತ, ವೀರಗಾಸೆ ಕುಣಿತ, ಪೂಜಾ ಕುಣಿತ, ಬುಡಕಟ್ಟು ಸಾಂಪ್ರದಾಯಿಕ ನೃತ್ಯ, ಟಿಬೆಟಿಯನ್ನರ ನೃತ್ಯ, ಗೊರವರ ಕುಣಿತ, ಜೇನು ಕುರುಬರ ಕುಣಿತ ಸೇರಿದಂತೆ ಸುಮಾರು 15ಕ್ಕೂ ಹೆಚ್ಚಿನ ಕಲಾ ತಂಡಗಳನ್ನು ಆಹ್ವಾನಿಸಿ, ಗಜಪಡೆಯನ್ನು ಮೆರವಣಿಗೆ ಮೂಲಕ ಮೈಸೂರಿಗೆ ಕಳುಹಿಸುವ ಉದ್ದೇಶವನ್ನು ಅರಣ್ಯ ಇಲಾಖೆ ಮಾಡಿಕೊಂಡಿದೆ.

ಸಿದ್ಧತೆ: ವೀರನಹೊಸಳ್ಳಿ ಸಮೀಪ ಆಶ್ರಮ ಶಾಲೆ ಮುಂಭಾಗದ ಮೈದಾನದಲ್ಲಿ ಗಜಪಯಣದ ಕಾರ್ಯಕ್ರಮಕ್ಕೆ ವೇದಿಕೆ ನಿರ್ಮಿಸುವ ಕಾರ್ಯ ಭರದಿಂದ ಸಾಗಿದೆ. ಕಳೆದ ಎರಡು ದಿನಗಳಿಂದ ಹುಣಸೂರು ಭಾಗದಲ್ಲಿ ಎಡಬಿಡದೇ ಸುರಿಯುತ್ತಿರುವ ಮಳೆಯಿಂದಾಗಿ ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಕೆಸರು ಆವರಿಸಿದ್ದು, ವಾಟರ್ ಪ್ರೂಫ್ ಪೆಂಡಾಲ್ ಹಾಕಿ ಕಾರ್ಯಕ್ರಮಕ್ಕೆ ಅಡಚಣೆಯಾಗದಂತೆ ನೋಡಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ. ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಡಲು ಆಯ್ಕೆಯಾಗಿರುವ ಶಾಲಾ ಮಕ್ಕಳು ಅಭ್ಯಾಸದಲ್ಲಿ ನಿರತರಾಗಿದ್ದು, ಗಜಪಯಣದ ಕಾರ್ಯಕ್ರಮಕ್ಕೆ ಮೆರಗು ತುಂಬಲು ಸಿದ್ದರಾಗುತ್ತಿದ್ದಾರೆ.

ಆ.10ರಂದು ಅರಮನೆ ಪ್ರವೇಶ: ಆ.10ರಂದು ಬೆಳಗ್ಗೆ 7ಗಂಟೆಗೆ ಅರಣ್ಯ ಭವನದಲ್ಲಿ ಅರಣ್ಯ ಇಲಾಖೆಯಿಂದ ಪೂಜೆ ಸಲ್ಲಿಸುವ ಅರಮನೆಯತ್ತ ಕಳುಹಿಸಿಕೊಡಲಾಗುತ್ತದೆ. ಅಂದು ಬೆಳಗ್ಗೆ 9.20ರಿಂದ 10ಗಂಟೆಯೊಳಗೆ ಸಲ್ಲುವ ಕನ್ಯಾ ಲಗ್ನದಲ್ಲಿ ಗಜಪಡೆ ಅರಮನೆ ಜಯಮಾರ್ತಾಂಡ ದ್ವಾರ ಪ್ರವೇಶಿಸಲು ಮಹೂರ್ತ ನಿಗಧಿ ಮಾಡಲಾಗಿದೆ. ಅ.5ರಂದು ಜಂಬೂಸವಾರಿ ನೆರವೇರಿದ ನಂತರ ಅ.7ರಂದು ಬೆಳಗ್ಗೆ 6.30ರಿಂದ 6.45ರೊಳಗೆ ಸಲ್ಲುವ ಕನ್ಯಾ ಲಗ್ನದಲ್ಲಿ ಆನೆಗಳಿಗೆ ಪೂಜೆ ಮಾಡಿ, ಬೀಳ್ಕೊಡಲಾಗುತ್ತದೆ.

ಹರಿಹಾಯ್ದ ಶಾಸಕ ಸುರೇಶ್‌ಗೌಡ

ವಿಷಯವನ್ನು ಪ್ರಸ್ತಾಪಿಸಿ, ಶಾಸಕರು ಹರಿಹಾಯ್ದಿದ್ದಾರೆ.

ವಿಡಿಯೋದಲ್ಲಿ ಇರುವುದೇನು?: ಅರಣ್ಯಾಧಿಕಾರಿಗಳು ಟ್ರಂಚ್ ತೋಡುತ್ತಿದ್ದ ಸ್ಥಳಕ್ಕೆ ಆಗಮಿಸಿದ ಶಾಸಕ ಸುರೇಶ್‌ಗೌಡ, 'ಏಯ್, ಯಾವನೋ ಅವ್ನು, ಶೂಟ್ ಮಾಡೋಕ್ ಬಂದೋನು? ಯಾರ್ ನಿನಗೆ ಶೂಟ್ ಮಾಡಕ್ ಪರ್ಮಿಷನ್ ಕೊಟ್ಟಿದ್ದು? ನಿನಗೆ ಕೆಳಗಿನಿಂದ ಬಿಟ್ಟರೆ ತಲೆಯಿಂದ ಬುಲೆಟ್ ಬರಬೇಕು. ಇದೆಲ್ಲಾ ನಿಮ್ಮಪ್ಪನ ಆಸ್ತಿನಾ? ಜಂಟಿ ಸರ್ವೆ ಮಾಡ್ಸಿ, ಅಲ್ಲಿವರೆಗೂ ಈ ಜಾಗಕ್ಕೆ ಕಾಲಿಡಬೇಡ. ಇಲ್ಲಿ ಕೆಲಸ ಮಾಡ್ತೀಯಾ, ಮಾಡು ನೋಡೋಣ. ಏನ್ ಆಟ ಆಡ್ತಿದ್ದೀಯಾ ನೀನು, ಪೊಲೀಸರನ್ನು ಕರ್ಕೊಂಡ್ ಬಂದ್ ಹೆದರಿಸ್ತೀಯಾ? ನಿನ್ನನ್ನು ಏನನ್ಕೊಂಡಿದ್ದೀಯಾ? ದಾದಾಗಿರಿ ಮಾಡ್ತಿದ್ದೀಯಾ? ಎದೆಗೆ ಒದ್ದುಬಿಡ್ತೀನಿ' ಎಂದು ದಬಾಯಿಸಿದ್ದಲ್ಲದೇ ಮಧ್ಯೆ ಮಧ್ಯೆ ಅವಾಚ್ಯ ಪದಗಳನ್ನು ಧಾರಾಳವಾಗಿ ಬಳಸಿದರು. 'ನಾನು ದಾದಾಗಿರಿ ಮಾಡ್ತಾ ಇಲ್ಲ ಸಾರ್. ನಾವು ಅರಣ್ಯ ಉಳಿಸೋ ಕೆಲಸ ಮಾಡ್ತಾ ಇದ್ದೀವಿ' ಎಂದು ಆರ್‌ಎಫ್‌ಓ ಸತೀಶ್ ಅವರು ಹೇಳುತ್ತಿದ್ದಂತೆಯೇ ಶಾಸಕರು, 'ಏಯ್, ಅದು ನಿನಗಿಂತ ನನಗೆ ಚೆನ್ನಾಗಿ ಗೊತ್ತು. ಎಷ್ಟರ ಮಟ್ಟಿಗೆ ಅರಣ್ಯ ಉಳಿಸ್ತಾ ಇದ್ದೀಯಾ? ಎಷ್ಟು ಲೂಟಿ ಮಾಡ್ತಾ ಇದ್ದೀಯಾ? ಅದೆಲ್ಲಾ ನನಗೆ ಗೊತ್ತು. ಅದೆಷ್ಟ್ ಜನ ಪೊಲೀಸರನ್ನು ಕರ್ಕೊಂಡ್ ಬರ್ತೀಯೋ ಬಾ, ನಾನೂ ನೋಡ್ತೇನೆ. ಜಂಟಿ ಸರ್ವೆ ಮಾಡ್ಸಿ ಅಂತ ಮೂರು ವರ್ಷದಿಂದ ಬಡ್ಕೋತಾ ಇದ್ದೀನಿ, ಇನ್ನೂ ಮಾಡ್ಸಿಲ್ಲ. ಏನ್ ಕತ್ತೆ ಕಾಯ್ತಿದ್ದೀಯಾ' ಎಂದಾಗ ಆರ್‌ಎಫ್‌ಓ ಸಾರ್, ಮೇಲಧಿಕಾರಿಗಳಿಗೆ ವರದಿ ಕೊಟ್ಟಿದ್ದೀವಿ. ಆರ್‌ಟಿಸಿ ಇಂಡೀಕರಣಕ್ಕೂ ಅರ್ಜಿ ಕೊಟ್ಟಿದ್ದೀವಿ ಎಂದಾಗ ಜಂಟಿ ಸಮೀಕ್ಷೆ ಮಾಡಿದ ಮೇಲೆ ಬಾ ಎಂದು ಶಾಸಕರು ಹೇಳಿದರು.

ಸಾರ್, ಇದನ್ನು ಮೇಲಧಿಕಾರಿಗಳು ಹೇಳ್ಬೇಕು ಎಂದು ಆರ್‌ಎಫ್‌ಓ ಸತೀಶ್ ಪ್ರತಿಕ್ರಿಯಿಸಿದಾಗ 'ಅದ್ಯಾವನು ಮೇಲಾಧಿಕಾರಿ, ತಗೋ ಅವನ ಫೋನು. ನಾನೇ ಮಾತಾಡುತ್ತೇನೆ' ಎಂದು ಹೇಳಿದ ಶಾಸಕರು ಅವರೇ ಎಸಿಎಫ್ ಶಂಕರೇಗೌಡರಿಗೆ ಕರೆ ಮಾಡಿ 'ಏಯ್, ಶಂಕರೇಗೌಡ ನಿನಗೆ ಗೌರವಯುತವಾಗಿ ಹೇಳ್ತಾ ಇದ್ದೇನೆ. ಮರ್ಯಾದೆಯಿಂದ ಜಂಟಿ ಸಮೀಕ್ಷೆ ಆಗೋವರ್ಗೂ ನಿಮ್ಮವರು ಬಂದರೆ ಸರಿ ಇರಲ್ಲ. ಪ್ರತಿಯೊಂದ್ ಕಡೆಯೂ ನಾನೇ ಬಂದು ನಿಂತ್ಕೋಬೇಕಾಗುತ್ತೆ. ಪ್ರತಿಯೊಂದನ್ನೂ ಜಂಟಿ ಸಮೀಕ್ಷೆ ಮಾಡ್ಸಿ. ಶೂಟ್ ಮಾಡಿದವನಿಗೆ ಮೊದಲು ಸಸ್ಪೆಂಡ್ ಮಾಡ್ಸು. ಏನ್, ತಮಾಷೆ ಮಾಡ್ತಾ ಇದ್ದೀರಾ? ಜನರನ್ನ, ನಮ್ಮನ್ನ ದನ ಅಂದ್ಕೊಂಡ್ಡಿದ್ದೀರಾ? ಜಂಟಿ ಸಮೀಕ್ಷೆ ಆಗೋವರ್ಗೂ ಯಾರೂ ಕಾಲಿಡಬೇಡಿ' ಎಂದಾಗ ಅತ್ತಲಿಂದ ಶಂಕರೇಗೌಡರು 'ಆಯ್ತಣ್ಣಾ' ಎಂದು ಪ್ರತಿಕ್ರಿಯಿಸುತ್ತಿದ್ದಂತೆಯೇ ಶಾಸಕರು ಕರೆ ಕಟ್ ಮಾಡಿದರು. ಈ ರಾದ್ಧಾಂತದ ನಂತರ ಅರಣ್ಯಾಧಿಕಾರಿಗಳು ಟ್ರಂಚ್ ತೋಡುವ ಕೆಲಸ ಕೈಬಿಟ್ಟು ಹಿಂತಿರುಗಿದರು.

"ತಾಲೂಕಿನಲ್ಲಿ 50 ವರ್ಷಗಳಿಂದ ರೈತರು ಸಾಗುವಳಿ ಪತ್ರಕ್ಕೆ ಅರ್ಜಿ ಹಾಕಿಕೊಂಡು ಕೂತಿದ್ದಾರೆ. ಭೂಮಿ ರೈತರ ಸ್ವಾಧೀನದಲ್ಲಿದ್ದರೂ ಅರಣ್ಯ ಇಲಾಖೆಯವರು ತೊಂದರೆ ಕೊಡುತ್ತಿದ್ದಾರೆ. ಒಬ್ಬ ಗಾರ್ಡ್ ಗನ್‌ನಲ್ಲಿ ಶೂಟ್ ಮಾಡಿ ಹೆದರಿಸಿದ್ದಾನೆ. ಇದರಿಂದ ರೈತರು ಭಯಗೊಂಡಿದ್ದಾರೆ. ನಾನೇ ಕಳೆದ ಮೂರು ವರ್ಷದಿಂದ ಜಂಟಿ ಸರ್ವೆ ಮಾಡಿಸಿ ಎಂದು ಹೇಳುತ್ತಿದ್ದರೂ, ಅರಣ್ಯ ಇಲಾಖೆಯವರು ಮಾಡಿಸುತ್ತಿಲ್ಲ. ಜಂಟಿ ಸರ್ವೆ ಆಗುವವರೆಗೂ ಅರಣ್ಯ ಇಲಾಖೆಯವರು ಮತ್ತು ರೈತರು ಸ್ಥಳಕ್ಕೆ ಹೋಗಬಾರದೆಂದು ಎಚ್ಚರಿಕೆ ನೀಡಿದ್ದೇನೆ." – ಸುರೇಶ್‌ಗೌಡ, ನಾಗಮಂಗಲ ಶಾಸಕ

"ನಮ್ಮ ಜಾಗದಲ್ಲಿ ನಾವಿದ್ದೇವೆ. ಇದು ಅರಣ್ಯ ಪ್ರದೇಶ. ನಮಗೆ ಜಂಟಿ ಸರ್ವೆ ಅಗತ್ಯವಿಲ್ಲ. ಅರಣ್ಯ ಪ್ರದೇಶಕ್ಕೆ ರಾತ್ರೋರಾತ್ರಿ ಅಕ್ರಮವಾಗಿ ಪ್ರವೇಶಿಸಿ ಮರ ಕಡಿದು ಜೆಸಿಬಿಯಿಂದ ಸಮತಟ್ಟು ಮಾಡಿ ತೆಂಗಿನ ಸಸಿ ನೆಡುವ ಮೂಲಕ ಅರಣ್ಯ ಕಬಳಿಸುವ ಪ್ರಯತ್ನ ನಡೆಯುತ್ತಿದೆ. ಈ ಬಗ್ಗೆ ಕೆಲವರ ಮೇಲೆ ಕೇಸ್ ದಾಖಲಾಗಿದೆ. ಅರಣ್ಯ ಜಾಗವನ್ನು ಯಾವುದೇ ಕಾರಣಕ್ಕೂ ಬಿಟ್ಟುಕೊಡುವುದಿಲ್ಲ. ನಮ್ಮ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಮೇಲೆ ದೌರ್ಜನ್ಯ ನಡೆಯುತ್ತಿದೆ. ಈ ಬಗ್ಗೆ ಮೇಲಾಧಿಕಾರಿಗಳ ಗಮನಕ್ಕೆ ತಂದು ಸೂಕ್ತ ಕ್ರಮ ಕೈಗೊಳ್ಳಲಾಗುವುದು." – ಶಂಕರೇಗೌಡ, ಎಸಿಎಫ್

ಏನಿದು ವಿವಾದ?...

ಮಾಲತಿ ಗ್ರಾಮದ ಸರ್ವೆ ನಂ.135ರ 374 ಎಕರೆ ಈ ಹಿಂದೆ ಗೋಮಾಳವಾಗಿತ್ತು. 1982ರಲ್ಲಿ ಅಂದಿನ ಜಿಲ್ಲಾಧಿಕಾರಿಗಳು ಸರ್ಕಾರದ ಪರವಾಗಿ ಈ ಭೂಮಿಯನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಿದ್ದಾರೆ. ಆದರೆ ಆರ್‌ಟಿಸಿಯಲ್ಲಿ ಭೂಮಿಯು ಅರಣ್ಯ ಇಲಾಖೆಗೆ ಇಂಡೀಕರಣವಾಗದೇ ಗೋಮಾಳವೆಂದೇ ನಮೂದಾಗಿದೆ. ಹೀಗಾಗಿ ಕೆಲ ರೈತರು ಈ ಜಾಗಕ್ಕೆ ಬಗರ್ ಹುಕುಂ ಸಾಗುವಳಿ ಚೀಟಿಗಾಗಿ ಅರ್ಜಿ ಹಾಕಿಕೊಂಡಿದ್ದಾರೆ. ಈ ಭೂಮಿಯಲ್ಲಿ ಅರಣ್ಯ ಇಲಾಖೆ ಸಸಿಗಳನ್ನು ನೆಟ್ಟು ಪೋಷಿಸಿಕೊಂಡು ಬರುತ್ತಿದ್ದರೆ, ಆಗಿಂದಾಗ್ಗೆ ರೈತರು ಅದನ್ನು ಕಿತ್ತು ತೆಂಗಿನ ಸೆಸಿ ನೆಡುವ ಕೆಲಸ ಮಾಡುತ್ತಿದ್ದಾರೆ. ಈ ಸಂಬಂಧ ಹಲವಾರು ಬಾರಿ ರೈತರು ಮತ್ತು ಅರಣ್ಯ ಇಲಾಖೆಯವರ ನಡುವೆ ಘರ್ಷಣೆಗಳು ನಡೆದಿವೆ. ಕೆಲ ರೈತರ ವಿರುದ್ಧ ಪೊಲೀಸ್ ಠಾಣೆಯಲ್ಲಿ ಪ್ರಕರಣಗಳೂ ದಾಖಲಾಗಿವೆ.

ರಕ್ಷಣೆಗೆ ಹಿರಿಯ ಅಧಿಕಾರಿಗಳ ಮೊರೆ ಹೋದ ಅರಣ್ಯ ಸಿಬ್ಬಂದಿ

ನಾಗಮಂಗಲ, ಆ.5–ತಾಲೂಕಿನ ಹಾಲತಿ ಗ್ರಾಮದಲ್ಲಿ ಅರಣ್ಯ ಭೂಮಿ ರಕ್ಷಣೆಗಾಗಿ ಅರಣ್ಯಾಧಿಕಾರಿ ಹಾಗೂ ಸಿಬ್ಬಂದಿ ಟ್ರಂಚ್ ತೋಡುತ್ತಿದ್ದ ವೇಳೆ ಶಾಸಕ ಸುರೇಶ್‌ಗೌಡ ದಬ್ಬಾಳಿಕೆ ನಡೆಸಿದ್ದಾರೆ ಎಂದು ಆರೋಪಿಸಿ ಹಾಗೂ ತಮಗೆ ರಕ್ಷಣೆ ನೀಡಬೇಕೆಂದು ವಲಯ ಅರಣ್ಯಾಧಿಕಾರಿಗಳು ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳ ಮೊರೆ ಹೋಗಿದ್ದಾರೆ.

ಇಂದಿನ ಘಟನೆ ಬಗ್ಗೆ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ ಆರ್.ಕೆ.ಸಿಂಗ್ ಮಾಹಿತಿ ಪಡೆದುಕೊಂಡಿದ್ದು, ಅರಣ್ಯ ರಕ್ಷಣೆ ವಿಚಾರದಲ್ಲಿ ಯಾವುದೇ ಮುಲಾಜಿಗೆ ಒಳಗಾಗುವುದು ಬೇಡ. ಅರಣ್ಯಾಧಿಕಾರಿಗಳಿಗೆ ಸೂಕ್ತ ರಕ್ಷಣೆ ನೀಡಲಾಗುವುದು ಎಂದು ಭರವಸೆ ನೀಡಿದ್ದಾರೆ. ಇಂದಿನ ಘಟನೆ ಸಂಬಂಧ ಕಾನೂನಾತ್ಮಕ ಕ್ರಮ ಜರುಗಿಸುವ ಬಗ್ಗೆ ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿ ಪಿ.ರುಥ್ರನ್ ಅವರು ಚಿಂತನೆ ನಡೆಸಿದ್ದಾರೆ ಎಂದು ಹೇಳಲಾಗಿದೆ. ಇಂದು ಸಂಜೆ ಜಿಲ್ಲೆಯ ವಿವಿಧ ವಲಯ ಅರಣ್ಯಾಧಿಕಾರಿಗಳು ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳನ್ನು ಭೇಟಿ ಮಾಡಿ ಅರಣ್ಯ ಸಂರಕ್ಷಣೆ ವಿಚಾರದಲ್ಲಿ ಸೂಕ್ತ ರಕ್ಷಣೆ ನೀಡುವಂತೆ ಮನವಿ ಮಾಡಿದ್ದಾರೆ. ಅರಣ್ಯ ಸಂರಕ್ಷಣೆ ವಿಚಾರದಲ್ಲಿ ಇದೇ ರೀತಿಯ ರಾಜಕೀಯ ಒತ್ತಡ ಹಾಗೂ ಬೆದರಿಕೆಗಳು ಎದುರಾದರೆ, ಕರ್ತವ್ಯ ನಿರ್ವಹಣೆ ಹಾಗೂ ಅರಣ್ಯ ಸಂರಕ್ಷಣೆ ಕಷ್ಟಕರವಾಗುತ್ತದೆ. ಸೂಕ್ತ ರಕ್ಷಣೆ ಇಲ್ಲದಿದ್ದರೆ ಅರಣ್ಯಾಧಿಕಾರಿಗಳು ಅರಣ್ಯ ಪ್ರದೇಶಕ್ಕೆ ಹೋಗಲು ಧೈರ್ಯ ಮಾಡಲಾಗುವುದಿಲ್ಲ ಎಂದು ವಲಯ ಅರಣ್ಯಾಧಿಕಾರಿಗಳು ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ತಿಳಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ನಾಳೆಯಿಂದ ಮೈಸೂರಲ್ಲಿ ಮಹಾರಾಜ ಟ್ರೋಫಿ ಟಿ-20 ಪಂದ್ಯಾವಳಿ

ಮೈಸೂರು ವಾರಿಯರ್ಸ್ ತಂಡ ಪ್ರಕಟ

ಗೆಲ್ಲುವ ಫೇವರಿಟ್ ತಂಡ ಎನಿಸಿಕೊಂಡಿರುವ ವಾರಿಯರ್ಸ್‌ಗೆ 20 ಆಟಗಾರರ ಆಯ್ಕೆ



ಮೈಸೂರು,ಆ.5(ಎಂಟಿವೈ)– ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ (ಕೆಎಸ್‌ಸಿಎ) ವತಿಯಿಂದ ಆ.7ರಿಂದ 26ರವರೆಗೆ ನಡೆಯಲಿರುವ 'ಮಹಾರಾಜ ಟ್ರೋಫಿ ಟಿ–20' ಕ್ರಿಕೆಟ್ ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಲಿರುವ 'ಮೈಸೂರು ವಾರಿಯರ್ಸ್' ತಂಡಕ್ಕೆ 20 ಆಟಗಾರರನ್ನು ಆಯ್ಕೆ ಮಾಡಲಾಗಿದ್ದು, ಪಟ್ಟಿಯನ್ನು ಬಿಡುಗಡೆ ಮಾಡಲಾಯಿತು.

ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಶುಕ್ರವಾರ ಸೈಕಲ್ ಪ್ಯೂರ್ ಅಗರಬತ್ತೀಸ್ ಸಂಸ್ಥೆ ವತಿಯಿಂದ ಆಯೋಜಿಸಿದ್ದ ವರ್ಣರಂಜಿತ ಕಾರ್ಯಕ್ರಮದಲ್ಲಿ ಈ ಸಾಲಿನ ಕ್ರಿಕೆಟ್ ಪಂದ್ಯಾವಳಿಯಲ್ಲಿ ಪಾಲ್ಗೊಳ್ಳುತ್ತಿರುವ 'ಮೈಸೂರು ವಾರಿಯರ್ಸ್' ತಂಡದ 20 ಮಂದಿ ಆಟಗಾರರು, ತರಬೇತಿದಾರರು ಸೇರಿದಂತೆ ವಿವಿಧ ಹುದ್ದೆಗಳನ್ನು ನಿಭಾಯಿಸುತ್ತಿರುವವರ ಪಟ್ಟಿ ಬಿಡುಗಡೆ ಮಾಡಿ, ಪರಿಚಯ ಮಾಡಿಕೊಡಲಾಯಿತು.

ಮೈಸೂರು ವಾರಿಯರ್ಸ್ ತಂಡವನ್ನು ಈ ಬಾರಿ ಭಾರತದ ತಂಡದ ಆಟಗಾರ ಕರುಣ್ ನಾಯರ್ ಮುನ್ನಡೆಸುತ್ತಿದ್ದು, ಗೆಲುವಿನ ಫೆವರಿಟ್ ತಂಡವಾಗಿ ಹೊರ ಹೊಮ್ಮಿದೆ. ಜಿಂಬಾಬ್ವೆ ವಿರುದ್ಧ ಏಕದಿನ ಪಂದ್ಯದಲ್ಲಿ ಆಟವಾಡುವ ಮೂಲಕ ಅಂತರಾಷ್ಟ್ರೀಯ ಮಟ್ಟದ ಕ್ರಿಕೆಟ್ ಪಂದ್ಯಕ್ಕೆ ಪಾದಾರ್ಪಣೆ ಮಾಡಿದ್ದ ಕರಣ್ ನಾಯರ್ ಅತ್ಯುತ್ತಮ ಬ್ಯಾಟ್ಸ್‌ಮನ್ ಆಗಿದ್ದಾರೆ ಭಾರತ ಪರ ಆಡಿರುವ ಆಟಗಾರರಲ್ಲಿ ಸ್ಫೋಟಕ್ ಬ್ಯಾಟ್ಸ್‌ಮನ್ ವೀರೇಂದ್ರ ಸೆಹ್ವಾಗ್ ನಂತರ ತ್ರಿಶತಕ ಸಿಡಿಸಿದ ದಾಖಲೆ ಕರುಣ್ ನಾಯರ್ ಹೆಸರಲ್ಲಿದೆ. 2016ರಲ್ಲಿ ಇಂಗ್ಲೆಂಡ್ ನಲ್ಲಿ ನಡೆದ ಟೆಸ್ಟ್ ಪಂದ್ಯದಲ್ಲಿ ತ್ರಿಶತಕ ಸಿಡಿಸಿ ಎಲ್ಲರ ಗಮನ ಸೆಳೆದಿದ್ದಾರೆ.

ಅತ್ಯುತ್ತಮ ತಂಡ: ಇದೇ ವೇಳೆ ತಂಡದ ನಾಯಕ ಕರುಣ್ ನಾಯರ್ ಮಾತನಾಡಿ, ಮೈಸೂರು ವಾರಿಯರ್ಸ್ ತಂಡದಲ್ಲಿ ಬ್ಯಾಟಿಂಗ್, ಬೌಲಿಂಗ್, ಫೀಲ್ಡಿಂಗ್ ಸೇರಿದಂತೆ ಎಲ್ಲಾ ಕ್ಷೇತ್ರಕ್ಕೂ ಮನ್ನಣೆ ನೀಡಲಾಗಿದೆ. ತಂಡದಲ್ಲಿ ಉತ್ತಮ ಆಟಗಾರರಿದ್ದಾರೆ. ಉತ್ತಮ ತಂಡವನ್ನು ಕಟ್ಟಿದ್ದಾರೆ. ನನಗೆ ಮೈಸೂರು ವಾರಿಯರ್ಸ್ ತಂಡವನ್ನು ಮುನ್ನಡೆಸಲು ಅವಕಾಶ ಸಿಕ್ಕಿರುವುದು ಹೆಮ್ಮೆ ಪಡುವ ಸಂಗತಿ. ನನಗಿರುವ ಅನುಭವವನ್ನು ತಂಡದ ಯಶಸ್ಸಿಗಾಗಿ ಬಳಸುತ್ತೇನೆ. ಇತರೆ ಆಟಗಾರರಿಗೂ ಅಗತ್ಯ ಸಲಹೆ, ಸೂಚನೆ ನೀಡಿ ತಂಡವನ್ನು ಯಶಸ್ವಿಯಾಗಿ ಮುನ್ನಡೆಸಬೇಕೆಂಬ ಆಲೋಚನೆ ನನ್ನದಾಗಿದೆ ಎಂದರು.

ಪ್ರತಿಯೊಂದು ಆವೃತ್ತಿಯಲ್ಲೂ ಒಂದೊಂದು ಬಗೆಯ ಸವಾಲುಗಳು ಎದುರಾಗುತ್ತವೆ. ವೃತ್ತಿಪರ ಕ್ರಿಕೆಟಿಗರು ಸವಾಲು ಹಿಮ್ಮೆಟ್ಟುವುದರೊಂದಿಗೆ ಎಲ್ಲಾ ಬಗೆಯ ವಾತಾವರಣದಲ್ಲೂ ಆಡುವುದಕ್ಕೆ ಸಿದ್ಧರಾಗಿರುತ್ತಾರೆ. ಈ ಹಿನ್ನೆಲೆಯಲ್ಲಿ ನನಗೆ ನೀಡಿರುವ ಜವಾಬ್ದಾರಿಯನ್ನು ಸ್ವೀಕರಿಸುತ್ತೇನೆ. ಮೈಸೂರು ವಾರಿಯರ್ಸ್ ತಂಡಕ್ಕೆ ನನ್ನ ಎರಡನೇ ವರ್ಷದ ನಾಯಕತ್ವದ ಹೊಣೆ ಲಭಿಸಿದೆ ಎಂದರು.

ಸೈಕಲ್ ಪ್ಯೂರ್ ಅಗರಬತ್ತಿ ವ್ಯವಸ್ಥಾಪಕ ನಿರ್ದೇಶಕ ಹಾಗೂ ಮೈಸೂರು ವಾರಿಯರ್ಸ್ ತಂಡದ ಮಾಲೀಕರಾದ ಅರ್ಜುನ್ ರಂಗ ಮಾತನಾಡಿ, ಈ ಬಾರಿ ಮೈಸೂರು ವಾರಿಯರ್ಸ್ ತಂಡ ಅನುಭವಿ ಹಾಗೂ ಉತ್ಸಾಹಿ ಆಟಗಾರರನ್ನು ಒಳಗೊಂಡಿದೆ. ಮೈಸೂರು ಹೆಮ್ಮೆಯ ತಂಡವಾಗಿದ್ದು, ಈ ಬಾರಿ ಗೆಲ್ಲುವ ವಿಶ್ವಾಸ ಹೊಂದಿದೆ. ಕರುಣ್ ನಾಯರ್ ಅವರಿಗೆ ನಾಯಕತ್ವ ವಹಿಸಲಾಗಿದೆ. ಅವರ ಅನುಭವ, ಬದ್ಧತೆ ಹಾಗೂ ಕ್ರಿಯಾಶೀಲತೆ ತಂಡಕ್ಕೆ ಚೈತನ್ಯ ತುಂಬಲಿದೆ ಇದು ಮೈಸೂರಿನ ತಂಡವಾಗಿದ್ದು, ಆ.7ರಿಂದ ಆರಂಭವಾಗಲಿರುವ ಪಂದ್ಯಾವಳಿಯಲ್ಲಿ ಪಾಲ್ಗೊಂಡು ಮೈಸೂರು ವಾರಿಯರ್ಸ್ ತಂಡದ ಆಟಗಾರರನ್ನು ಪ್ರೇರೇಪಿಸಬೇಕು. ಮೈಸೂರಿಗರು ನೀಡುವ ಉತ್ಸಾಹ ನಮ್ಮ ತಂಡ ಆಟಗಾರರನ್ನು ಪ್ರೇರೇಪಿಸುತ್ತದೆ ಎಂದರು.

ಮುಖ್ಯ ತರಬೇತಿದಾರ ಪಿ.ವಿ.ಶಶಿಕಾಂತ್ ಮಾತನಾಡಿ, ತಂಡದ 20 ಆಟಗಾರರಲ್ಲಿ ಎಲ್ಲಾ ವರ್ಗದಲ್ಲೂ ಉತ್ತಮ ಪ್ರದರ್ಶನ ನೀಡಿರುವವರೆ ಇದ್ದಾರೆ. ತುಂಬಾ ಕೇರ್‌ಫುಲ್ ಆಗಿ ಆಟಗಾರರನ್ನು ಆಯ್ಕೆ ಮಾಡಲಾಗಿದೆ ಬ್ಯಾಟಿಂಗ್, ಬೌಲಿಂಗ್, ಸ್ಪಿನ್ನಿಂಗ್, ವೇಗದ ಬೌಲಿಂಗ್ ಸೇರಿದಂತೆ ಎಲ್ಲಾ ವರ್ಗದ ಆಟಗಾರರು ಇದ್ದಾರೆ. ನಮ್ಮ ಆಟಗಾರರ ಮೇಲೆ ಕುತೂಹಲ ಹೆಚ್ಚಾಗಿದೆ. ಆಯ್ಕೆಯಾಗಿರುವ ಎಲ್ಲಾ ಆಟಗಾರರು ಕೆಸಿಎ ಆಯೋಜಿಸಿದ್ದ ಟಿ–20 ಪಂದ್ಯಾವಳಿಯಲ್ಲಿ ಆಡಿರುವ ಅನುಭವ ಹೊಂದಿದ್ದಾರೆ ಬ್ಯಾಟಿಂಗ್ ಸೊಗಸಾಗಿದ್ದು, ಈ ಬಾರಿ ಉತ್ತಮ ಪ್ರದರ್ಶನ ನೀಡುವಲ್ಲಿ ಮೈಸೂರು ವಾರಿಯರ್ಸ್ ಯಶಸ್ವಿ ಯಾಗಲಿದೆ ಎಂದು ತಿಳಿಸಿದರು.

ತಂಡದ ಮುಖ್ಯ ತರಬೇತುದಾರರಾಗಿ ಪಿ.ವಿ. ಶಶಿಕಾಂತ್ ಕಾರ್ಯನಿರ್ವಹಿಸಲಿದ್ದು, ಸಹಾಯಕ ತರಬೇತುದಾರರಾಗಿ ಕೆ.ಎಲ್. ಅಕ್ಷಯ್, ಫಿಜಿಯೋ ಥೆರಪಿಸ್ಟ್ ಆಗಿ ಟಿ.ಮಂಜುನಾಥ್, ಟ್ರೇನರ್ ಆಗಿ ಇರ್ಫಾನ್ ಉಲ್ಲಾ ಖಾನ್, ವಿಡಿಯೋ ವಿಶ್ಲೇಷಕರಾಗಿ ಕೆ.ಕಿರಣ್ ಕಾರ್ಯ ನಿರ್ವಹಿಸಲಿದ್ದಾರೆ.

ಮೈಸೂರು ವಾರಿಯರ್ಸ್ ತಂಡ

ಕರುಣ್ ನಾಯರ್ (ನಾಯಕ), ಶ್ರೇಯಸ್ ಗೋಪಾಲ್, ಪವನ್ ದೇಶಪಾಂಡೆ, ವಿದ್ಯಾಧರ ಪಾಟೀಲ್, ನಿಹಾಲ್ ಉಲ್ಲಾಳ್(ವಿಕೆಟ್ ಕೀಪರ್), ಪ್ರತೀಕ್ ಜೈನ್, ಭರತ್ ಧುರಿ, ಚಿರಂಜೀವಿ(ವಿಕೆಟ್ ಕೀಪರ್), ಶುಭಾಂಗ ಹೆಗ್ಡೆ, ಲೋಚನ್ ಅಪ್ಪಣ್ಣ, ಶಿವರಾಜ್, ಮೋನಿಶ್ ರೆಡ್ಡಿ, ವರುಣ್ ರಾವ್, ರಾಹುಲ್ ಪ್ರಸನ್ನ, ನಿತಿನ್ ಬಿಲ್ಲೆ, ಆದಿತ್ಯ ಗೋಯಲ್, ಅಭಿಷೇಕ್ ಅಲವತ್, ನಾಗ ಭರತ್, ಕೆ.ಅರುಣ್, ಹೆಚ್.ತುಷಾರ್ ಮೈಸೂರು ವಾರಿಯರ್ಸ್ ತಂಡದಲ್ಲಿ ಸ್ಥಾನಗಿಟ್ಟಿಸಿಕೊಳ್ಳಲಿದ್ದಾರೆ. ತಂಡದ ಪರಿಸ್ಥಿತಿಗೆ ಅನುಗುಣವಾಗಿ ಆಡುವ 11 ಮಂದಿ ಆಟಗಾರರ ಆಯ್ಕೆ ಮಾಡಲಾಗುತ್ತದೆ.

ಮಹಾರಾಜ ಟ್ರೋಫಿ ಟಿ–20 ಕ್ರಿಕೆಟ್ ಪಂದ್ಯಾವಳಿ ವೇಳಾಪಟ್ಟಿ

ಆ.7ರಂದು–ಮಧ್ಯಾಹ್ನ 3 ಗಂಟೆಗೆ ಹುಬ್ಬಳ್ಳಿ ಟೈಗರ್ಸ್ / ಮಂಗಳೂರು ಯುನೈಟೆಡ್
ಸಂಜೆ 7ಕ್ಕೆ – ಮೈಸೂರು ವಾರಿಯರ್ಸ್ / ಶಿವಮೊಗ್ಗ ಸ್ಟ್ರೈಕರ್ಸ್

ಆ.8 ರಂದು ಮಧ್ಯಾಹ್ನ 3ಕ್ಕೆ – ಬೆಂಗಳೂರು ಬ್ಲಾಸ್ಟರ್ಸ್ / ಗುಲ್ಬರ್ಗಾ ಮೈಸ್ಟಿಕ್ಸ್
ಸಂಜೆ 7ಕ್ಕೆ – ಮೈಸೂರು ವಾರಿಯರ್ಸ್ / ಮಂಗಳೂರು ಯುನೈಟೆಡ್

ಆ.9ರಂದು 3ಕ್ಕೆ – ಗುಲ್ಬರ್ಗಾ ಮೈಸ್ಟಿಕ್ಸ್ / ಶಿವಮೊಗ್ಗ ಸ್ಟ್ರೈಕರ್ಸ್
ಸಂಜೆ 7ಕ್ಕೆ – ಬೆಂಗಳೂರು ಬ್ಲಾಸ್ಟರ್ಸ್/ ಹುಬ್ಬಳ್ಳಿ ಟೈಗರ್ಸ್

ಆ.10ರಂದು 3ಕ್ಕೆ – ಮೈಸೂರು ವಾರಿಯರ್ಸ್ / ಹುಬ್ಬಳ್ಳಿ ಟೈಗರ್
ಸಂಜೆ 7ಕ್ಕೆ – ಮಂಗಳೂರು ಯುನೈಟೆಡ್ / ಶಿವಮೊಗ್ಗ ಸ್ಟ್ರೈಕರ್ಸ್

ಆ.11ರಂದು 3ಕ್ಕೆ – ಬೆಂಗಳೂರು ಬ್ಲಾಸ್ಟರ್ಸ್/ ಮಂಗಳೂರು ಯುನೈಟೆಡ್
ಸಂಜೆ 7ಕ್ಕೆ – ಮೈಸೂರು ವಾರಿಯರ್ಸ್ / ಗುಲ್ಬರ್ಗಾ ಮೈಸ್ಟಿಕ್ಸ್

ಆ.12ರಂದು 3ಕ್ಕೆ – ಹುಬ್ಬಳ್ಳಿ ಟೈಗರ್ಸ್ / ಗುಲ್ಬರ್ಗಾ ಮೈಸ್ಟಿಕ್ಸ್
ಸಂಜೆ 7ಕ್ಕೆ – ಬೆಂಗಳೂರು ಬ್ಲಾಸ್ಟರ್ಸ್/ ಶಿವಮೊಗ್ಗ ಸ್ಟ್ರೈಕರ್ಸ್

ಆ.13ರಂದು 3ಕ್ಕೆ – ಹುಬ್ಬಳ್ಳಿ ಟೈಗರ್ಸ್ / ಶಿವಮೊಗ್ಗ ಸ್ಟ್ರೈಕರ್ಸ್
ಸಂಜೆ 7ಕ್ಕೆ – ಮೈಸೂರು ವಾರಿಯರ್ಸ್/ ಬೆಂಗಳೂರು ಬ್ಲಾಸ್ಟರ್ಸ್

ಆ.14ರಂದು 3ಕ್ಕೆ – ಮೈಸೂರು ವಾರಿಯರ್ಸ್ / ಶಿವಮೊಗ್ಗ ಸ್ಟ್ರೈಕರ್ಸ್
ಸಂಜೆ 7ಕ್ಕೆ – ಗುಲ್ಬರ್ಗಾ ಮೈಸ್ಟಿಕ್ಸ್ / ಮಂಗಳೂರು ಯುನೈಟೆಡ್

ಆ.15ರಂದು 3ಕ್ಕೆ – ಮಂಗಳೂರು ಯುನೈಟೆಡ್ / ಬೆಂಗಳೂರು ಬ್ಲಾಸ್ಟರ್ಸ್
ಸಂಜೆ 7ಕ್ಕೆ – ಗುಲ್ಬರ್ಗಾ ಮೈಸ್ಟಿಕ್ಸ್ / ಹುಬ್ಬಳ್ಳಿ ಟೈಗರ್ಸ್

ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಎರಡನೇ ಹಂತದಲ್ಲಿ ಆ.17ರಿಂದ 26ರವರೆಗೆ ನಡೆಯುವ ಪಂದ್ಯಗಳು

ಆ.17ರಂದು 3ಕ್ಕೆ – ಮೈಸೂರು ವಾರಿಯರ್ಸ್ / ಮಂಗಳೂರು ಯುನೈಟೆಡ್
ಸಂಜೆ 7ಕ್ಕೆ – ಬೆಂಗಳೂರು ಬ್ಲಾಸ್ಟರ್ಸ್/ ಶಿವಮೊಗ್ಗ ಸ್ಟ್ರೈಕರ್ಸ್

ಆ.18ರಂದು 3ಕ್ಕೆ – ಬೆಂಗಳೂರು ಬ್ಲಾಸ್ಟರ್ಸ್/ ಗುಲ್ಬರ್ಗಾ ಮೈಸ್ಟಿಕ್ಸ್
ಸಂಜೆ 7ಕ್ಕೆ – ಹುಬ್ಬಳ್ಳಿ ಟೈಗರ್ಸ್ / ಮೈಸೂರು ವಾರಿಯರ್ಸ್

ಆ.19ರಂದು 3ಕ್ಕೆ – ಹುಬ್ಬಳ್ಳಿ ಟೈಗರ್ಸ್ / ಶಿವಮೊಗ್ಗ ಸ್ಟ್ರೈಕರ್ಸ್
ಸಂಜೆ 7ಕ್ಕೆ – ಮಂಗಳೂರು ಯುನೈಟೆಡ್ / ಗುಲ್ಬರ್ಗಾ ಮೈಸ್ಟಿಕ್ಸ್

ಆ.20ರಂದು 3ಕ್ಕೆ – ಮಂಗಳೂರು ಯುನೈಟೆಡ್ / ಶಿವಮೊಗ್ಗ ಸ್ಟ್ರೈಕರ್ಸ್
ಸಂಜೆ 7ಕ್ಕೆ – ಮೈಸೂರು ವಾರಿಯರ್ಸ್ / ಬೆಂಗಳೂರು ಬ್ಲಾಸ್ಟರ್ಸ್

ಆ.21ರಂದು 3ಕ್ಕೆ – ಮೈಸೂರು ವಾರಿಯರ್ಸ್ / ಗುಲ್ಬರ್ಗಾ ಮೈಸ್ಟಿಕ್ಸ್
ಸಂಜೆ 7ಕ್ಕೆ – ಹುಬ್ಬಳ್ಳಿ ಟೈಗರ್ಸ್ / ಬೆಂಗಳೂರು ಬ್ಲಾಸ್ಟರ್ಸ್

ಆ.22ರಂದು 3ಕ್ಕೆ – ಶಿವಮೊಗ್ಗ ಸ್ಟ್ರೈಕರ್ಸ್ / ಗುಲ್ಬರ್ಗಾ ಮೈಸ್ಟಿಕ್ಸ್
ಸಂಜೆ 7ಕ್ಕೆ – ಮಂಗಳೂರು ಯುನೈಟೆಡ್/ ಹುಬ್ಬಳ್ಳಿ ಟೈಗರ್ಸ್

ಆ.23ರಂದು –ಕ್ವಾಟರ್ ಫೈನಲ್ ಪಂದ್ಯ


ಆ.25ರಂದು 2ನೇ ಕ್ವಾಟರ್ ಫೈನಲ್

ಆ.26ರಂದು ಫೈನಲ್ ಪಂದ್ಯ ಜರುಗಲಿದೆ

108 ಪೊಲೀಸ್ ಇನ್ಸ್‌ಪೆಕ್ಟರ್‌ಗಳ ವರ್ಗಾವಣೆ

ಬೆಂಗಳೂರು, ಆ. 5– ರಾಜ್ಯ ಸರ್ಕಾರವು 108 ಪೊಲೀಸ್ ಇನ್ಸ್‌ಪೆಕ್ಟರ್‌ಗಳನ್ನು ವರ್ಗಾವಣೆ ಮಾಡಿ, ಆದೇಶ ಹೊರಡಿಸಿದೆ.

ದಕ್ಷಿಣ ವಲಯ ಐಜಿಪಿ ಕಚೇರಿಯಲ್ಲಿದ್ದ ಮನೋಜ್‌ಕುಮಾರ್ ಮದ್ದೂರು ವೃತ್ತಕ್ಕೆ, ಮದ್ದೂರಿನಲ್ಲಿದ್ದ ಕೆ.ಎನ್. ಹರೀಶ್, ಮಲ್ಲೇಶ್ವರಂ ಸಂಚಾರಕ್ಕೆ, ಐಎಸ್‌ಡಿ ವರ್ಗಾವಣೆ ಆದೇಶದಲ್ಲಿದ್ದ ಎಂ. ಮಹೇಶ್, ಮೈಸೂರು ಡಿಸಿಆರ್‌ಇಗೆ, ಕೊಡಗು ಮಹಿಳಾ ಠಾಣೆ ವರ್ಗಾವಣೆ ಆದೇಶದಲ್ಲಿದ್ದ ಹೆಚ್.ಆರ್. ವಿವೇಕಾನಂದ ಪಾಂಡವಪುರಕ್ಕೆ, ರಾಜ್ಯ ಗುಪ್ತವಾರ್ತೆ ವರ್ಗಾವಣೆ ಆದೇಶದಲ್ಲಿದ್ದ ಎಂ. ಜಗದೀಶ್ ಮಳವಳ್ಳಿ ಗ್ರಾಮಾಂತರಕ್ಕೆ, ಮಡಿಕೇರಿ ಗ್ರಾಮಾಂತರದಲ್ಲಿದ್ದ ಎಸ್.ಎಸ್. ರವಿಕಿರಣ್ ಬೇಲೂರಿಗೆ, ಹಾಸನ ಡಿಎಸ್‌ಬಿ ಆದೇಶದಲ್ಲಿದ್ದ ಟಿ.ಎಂ. ಪುನೀತ್ ಕೆಆರ್‌ಎಸ್‌ಗೆ, ಅರಸೀಕೆರೆ ಗ್ರಾಮಾಂತರದಲ್ಲಿದ್ದ ಕೆ.ಎಂ. ವಸಂತ್, ಚನ್ನರಾಯಪಟ್ಟಣ ನಗರ ಠಾಣೆಗೆ ಕೋಲಾರ ನಗರದಲ್ಲಿದ್ದ ಎನ್.ಕೆ. ರಾಘವೇಂದ್ರ ಪ್ರಕಾಶ್, ಅರಸೀಕೆರೆ ಗ್ರಾಮಾಂತರಕ್ಕೆ, ಬೆಂಗಳೂರು ಎಸ್‌ಸಿಆರ್‌ಬಿಯಲ್ಲಿದ್ದ ಎಸ್.ಎಂ. ರಘುಪತಿ ಅರಕಲಗೂಡಿಗೆ, ಮಡಿಕೇರಿ ನಗರದಲ್ಲಿದ್ದ ಪಿ.ವಿ. ವೆಂಕಟೇಶ್ ದಾವಣಗೆರೆ ಡಿಸಿಆರ್‌ಇಗೆ, ಚನ್ನರಾಯಪಟ್ಟಣ ನಗರ ಠಾಣೆಯಲ್ಲಿದ್ದ ಜಿ.ಕೆ. ಸುಬ್ರಹ್ಮಣ್ಯ ಹಾಸನ ಡಿಎಸ್‌ಬಿಗೆ, ಬೇಲೂರಿನಲ್ಲಿದ್ದ ಕೆ.ಎಂ. ಯೋಗೇಶ್ ಗುಪ್ತವಾರ್ತೆಗೆ, ಅರಕಲಗೂಡಿನಲ್ಲಿದ್ದ ವೈ. ಸತ್ಯನಾರಾಯಣ ರಾಜ್ಯ ಗುಪ್ತವಾರ್ತೆಗೆ ವರ್ಗಾಯಿಸಿ ಆದೇಶ ಹೊರಡಿಸಲಾಗಿದೆ.



ಹೊಸಕಾಮನಕೊಪ್ಪಲು ಗ್ರಾಮಸ್ಥರು ಶುಕ್ರವಾರ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಅವರನ್ನು ಅವರ ನಿವಾಸದಲ್ಲಿ ಅಭಿನಂದಿಸಿದರು.

ಶತ್ರು ರಾಷ್ಟ್ರಕ್ಕೆ ಕಾಶ್ಮೀರ ಬಿಟ್ಟು ಕೊಡುವ ಪ್ರಶ್ನೆಯೇ ಇಲ್ಲ

● ಕಾಶ್ಮೀರ ನಮ್ಮ ಸೈನಿಕರ ಶೌರ್ಯದ ಪ್ರತೀಕ: ಚಿಂತಕ ಚಕ್ರವರ್ತಿ ಸೂಲಿಬೆಲೆ ● ಲೇಖಕ ಉಮೇಶ್ ಅವರ 'ಕಾಶ್ಮೀರ್ ಡೈರಿ' ಪುಸ್ತಕ ಬಿಡುಗಡೆ ಮಾಡಿ ಭಾರತೀಯ ಸೈನ್ಯದ ಸಾಹಸಕ್ಕೆ ಸೆಲ್ಯೂಟ್



ಮೈಸೂರು, ಆ.5(ಎಸ್‌ಬಿಡಿ)– ಕೆಚ್ಚೆದೆ ಸೈನಿಕರ ನೆತ್ತರಿನಿಂದ ತೋಯ್ದಿರುವ ಕಾಶ್ಮೀರವನ್ನು ಶತ್ರು ರಾಷ್ಟ್ರಕ್ಕೆ ಬಿಟ್ಟುಕೊಡುವ ಮಾತೇ ಇಲ್ಲ ಎಂದು ಲೇಖಕ ಹಾಗೂ ಚಿಂತಕ ಚಕ್ರವರ್ತಿ ಸೂಲಿಬೆಲೆ ಹೇಳಿದರು.

ಮೈಸೂರಿನ ಕಲಾಮಂದಿರದಲ್ಲಿ ಶುಕ್ರವಾರ ಆಯೋಜಿಸಿದ್ದ ಲೇಖಕ ಎಸ್.ಉಮೇಶ್ ಅವರ 'ಕಾಶ್ಮೀರ್ ಡೈರಿ' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ 'ಕಾಶ್ಮೀರ' ಕುರಿತು ಮಾತನಾಡಿದ ಅವರು, ಕಾಶ್ಮೀರದ ಪ್ರತಿಯೊಂದು ಬೆಟ್ಟ, ಗುಡ್ಡಗಳೂ ನಮ್ಮ ಭಾರತೀಯ ಸೈನಿಕರ ಶೌರ್ಯದ ಪ್ರತೀಕ. ಅಲ್ಲಿ ನೂರಾರು, ಸಾವಿರಾರು ಕೆಚ್ಚೆದೆ ಸೈನಿಕರ ನೆತ್ತರು ಮೆತ್ತಿದೆ. ಪ್ರಾಣ ಹೋದರೂ ಕಾಶ್ಮೀರ ಬಿಟ್ಟುಕೊಡುವುದಿಲ್ಲ. ಹಾದೆ ನೆಲೆಸಿರುವ ಪಾಕಿಸ್ತಾನ ಆಕ್ರಮಿತ ಕಾಶ್ಮೀರ(ಪಿಓಕೆ) ವನ್ನೂ ಭಾರತ ವಶಪಡಿಸಿಕೊಳ್ಳಲಿದೆ ಎಂದರು.

ಭಾರತೀಯ ಸೇನೆ ಅತ್ಯಂತ ಬಲಾಢ್ಯವಾಗಿದೆ. ಈ ವಿಚಾರವಾಗಿ ಯಾರಿಗೂ ಕಿಂಚಿತ್ತೂ ಅನುಮಾನ ಬೇಡ. ಜಗತ್ತಿನ ಅತ್ಯುತ್ತಮ ಸೈನ್ಯದ ಪಟ್ಟಿ ಮಾಡಿದರೆ ಭಾರತೀಯ ಸೇನೆಗೆ ಅಗ್ರಸ್ಥಾನ ಸಿಗಲಿದೆ. ಅತೀ ಶೀತ ವಲಯ ಹಾಗೂ ಉಷ್ಣವಲಯದಲ್ಲಿ ಸೇವೆ ಸಲ್ಲಿಸುವ ಸಾಮರ್ಥ್ಯ ಇದ್ದರೆ ಅದು ನಮ್ಮ ಸೈನಿಕರಲ್ಲಿ ಮಾತ್ರ. ಕಾಶ್ಮೀರದಲ್ಲಿ ಹುತಾತ್ಮರಾದ ಸೈನಿಕರನ್ನೂ ಭಾರತೀಯರು ಪೂಜಿಸುತ್ತಾರೆ. ಕಾಶ್ಮೀರದ ಟೋಲೋಲಿಂಗ್ ಬೆಟ್ಟದ ಬುಡದಲ್ಲಿ ಸೈನಿಕರ ಸ್ಮಾರಕವಿದೆ. ಆ ಪುಣ್ಯ ಕ್ಷೇತ್ರಕ್ಕೆ ಹೂಗುಚ್ಛ ಇಟ್ಟು ನಮಿಸುವ ಅವಕಾಶ ನನಗೆ ಸಿಕ್ಕಿದ್ದು ಅವಿಸ್ಮರಣೀಯ. ಪ್ರತಿಯೊಬ್ಬರೂ ಒಮ್ಮೆಯಾದರೂ ಆ ಸ್ಥಳಕ್ಕೆ ಭೇಟಿ ನೀಡಬೇಕೆಂದು ಹೇಳಿದರು.

ರಾಜಕೀಯ ಪಡಸಾಲೆಯಲ್ಲಿ: ಎಡವಟ್ಟು ರಾಜಕೀಯ ನಾಯಕರ ಪಡಸಾಲೆಯಲ್ಲಿ ನಾವು ಕಾಶ್ಮೀರದ ಒಂದು ಭಾಗವನ್ನು ಕಳೆದುಕೊಂಡಿದ್ದೇವೆ. ಸ್ವಾತಂತ್ರ್ಯ ನಂತರ ಹಿಂದೂಸ್ತಾನ ಹಾಗೂ ಪಾಕಿಸ್ತಾನ ರಾಷ್ಟ್ರವಾಗಿ ಪ್ರತ್ಯೇಕಿಸಿದ ನಂತರ ಜಮ್ಮು–ಕಾಶ್ಮೀರದ ರಾಜ ಹರಿಸಿಂಗ್ ಯಾವ ರಾಷ್ಟ್ರಕ್ಕೂ ಸೇರದೆ ಪ್ರತ್ಯೇಕವಾಗಿಯೇ ಇರುತ್ತೇವೆ ಎಂದಿದ್ದ. ಆದರೆ ದಾಳಿ ನಡೆಸುವ ಜಿನ್ನಾ ಹೇಳಿಕೆಗೆ ಬೆದರಿ ಭಾರತದೊಂದಿಗೆ ಸೇರಿಕೊಳ್ಳಲು ಹರಿಸಿಂಗ್ ಮುಂದಾದರು. ಅಷ್ಟರಲ್ಲಿ ಅವರ ಹಲವು ಸೈನಿಕರು ಪಾಕಿಸ್ತಾನಕ್ಕೆ ವಿದೇಯರಾಗಿದ್ದರು. ಆದರೂ ಸರ್ದಾರ್ ವಲ್ಲಭಬಾಯ್ ಪಟೇಲ್ ಅವರು ವಿಲೀನವಾಗುವುದಾಗಿ ಪತ್ರ ಬರೆದುಕೊಟ್ಟರೆ ನೆರವಾಗುವುದಾಗಿ ತಿಳಿಸಿದ್ದರಿಂದ ಹರಿಸಿಂಗ್ ಹಾಗೆಯೇ ಮಾಡಿದ್ದರು. ನಂತರ ಭಾರತೀಯ ಸೇನೆ ಪಾಕಿಸ್ತಾನದ ವಿರುದ್ಧ ಮೇಲುಗೈ ಸಾಧಿಸಿತ್ತು. ಆದರೆ ಅಂದಿನ ಪ್ರಧಾನಿ ಜವಾಹರಲಾಲ್ ನೆಹರೂ ಅವರು ಈ ಸಂಬಂಧ ಯುನೈಟೆಡ್ ನೇಷನ್ಸ್ ನೆರವು ಪಡೆಯುವುದಾಗಿ ಆಲ್ ಇಂಡಿಯಾ ರೇಡಿಯೋದಲ್ಲಿ ಪ್ರಕಟಿಸಿದ್ದರು ಎಂದು ತಿಳಿಸಿದರು.

ಮಧ್ಯಪ್ರವೇಶಿಸಿದ ಯುನೈಟೆಡ್ ನೇಷನ್ಸ್, ಎರಡೂ ರಾಷ್ಟ್ರಗಳ ಸೈನಿಕರು ತಮ್ಮ ಗಡಿಗೆ ತೆರಳಿದ ನಂತರ ಜನಮತ ಗಣನೆ ನಡೆಸುವುದಾಗಿ ತಿಳಿಸಿತು. ಆ ಮಾತನ್ನು ಗೌರವಿಸಿ ಭಾರತೀಯ ಸೈನಿಕರು ಆಕ್ರಮಿತ ಪಾಕ್ ಪ್ರದೇಶದಿಂದ ವಾಪಸ್ಸು ಗಡಿಗೆ ಬಂದರು. ಆದರೆ ಪಾಕಿಸ್ತಾನ ಸೈನಿಕರು ಕದಲಲೇ ಇಲ್ಲ. ಈವರೆಗೂ ತಮ್ಮ ಗಡಿಗೆ ತೆರಳಲಿಲ್ಲ. ಪರಿಣಾಮ ಮೂರನೇ ಒಂದು ಭಾಗದಷ್ಟು ಕಾಶ್ಮೀರ ಹಾಗೆಯೇ ಉಳಿಯಿತು. ಈ ವಿಚಾರವಾಗಿ ಜಗತ್ತಿನಲ್ಲಿ ಯಾರೂ ಮಾತನಾಡುವುದಿಲ್ಲ. ಆದರೆ ಜವಾಹರಲಾಲ್ ನೆಹರೂ ವಿವಿ(ಜೆಎನ್‌ಯು)ಯಲ್ಲಿ ತದ್ವಿರುದ್ಧವಾಗಿ ಹೇಳಿಕೊಂಡು ಬರಲಾಗುತ್ತಿದೆ. ಜನಮತ ಗಣನೆ ನಡೆಸುವ ಪ್ರಯತ್ನವನ್ನೇ ನಡೆಸಿಲ್ಲ ಎಂದು ಸುಳ್ಳು ಹೇಳಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕಾಶ್ಮೀರದ ಎಲ್ಲಾ ಧರ್ಮೀಯರೂ ಭಾರತದೊಂದಿಗಿದ್ದರು. ಆದರೆ ಅಂದಿನ ಸರ್ಕಾರದ ಅಸಮರ್ಥತೆ ಪರಿಣಾಮ ಅನಿವಾರ್ಯವಾಗಿ ಪಾಕಿಸ್ತಾನಕ್ಕೆ ಜೈಕಾರ ಹಾಕಬೇಕಾಯಿತು. 1955ರಲ್ಲಿ ಪಾಕಿಸ್ತಾನ ದಾಳಿ ನಡೆಸುವ ವಿಚಾರ ತಿಳಿದಿದ್ದರೂ ಪ್ರತಿರೋಧಕ್ಕೆ ಕ್ರಮ ವಹಿಸಲಿಲ್ಲ. ಕಾಶ್ಮೀರದ ಷೇಕ್ ಅಬ್ದುಲ್ಲಾ ಹಾಗೂ ಜವಾಹರಲಾಲ್ ನೆಹರೂಗೆ ಅದೇನು ಬಾಂಧವ್ಯವೋ ತಿಳಿಯಲಿಲ್ಲ ಆರ್ಟಿಕಲ್ 370 ಅನುಷ್ಠಾನದ ಮೂಲಕ ಕಾಶ್ಮೀರಕ್ಕೇ ಪ್ರತ್ಯೇಕ ಕಾನೂನು, ಅಲ್ಲಿನ ಮುಖ್ಯಮಂತ್ರಿಗೆ ಪ್ರಧಾನಮಂತ್ರಿ ಗೌರವ, ಪ್ರತ್ಯೇಕ ಧ್ವಜ ಹೀಗೆ ಹಲವು ಸವಲತ್ತುಗಳನ್ನು ನೀಡಿದರು. ಅದನ್ನು ಡಾ.ಬಿ. ಆರ್‌ಅಂಬೇಡ್ಕರ್ ಅವರು ಬಲವಾಗಿ ವಿರೋಧಿಸಿದ್ದರು. ಅದನ್ನು ಮೀರಿ ಕಾಶ್ಮೀರವನ್ನು ದೇಶದಿಂದ ಪ್ರತ್ಯೇಕಿಸುವಂತಹ ಕ್ರಮಗಳನ್ನು ಕೈಗೊಳ್ಳಲಾಯಿತು ಎಂದರು.

ಇದೆಲ್ಲದರ ನಡುವೆಯೂ ಎಲ್ಲಾ ಯುದ್ಧಗಳಲ್ಲೂ ಪಾಕಿಸ್ತಾನದ ವಿರುದ್ಧ ನಮ್ಮ ಸೈನಿಕರೇ ಗೆದ್ದರು. ಭಾರತವನ್ನು ಯುದ್ಧದಿಂದ ಗೆಲ್ಲಲಾಗದು ಎನ್ನುವುದನ್ನು ತಿಳಿದು ಇಲ್ಲಿನ ಯುವಕರು, ಮಕ್ಕಳನ್ನು ಕರೆದೊಯ್ದು ಭಯೋತ್ಪಾದನೆ ತರಬೇತಿ ನೀಡಿ, ಧರ್ಮದ ವಿಚಾರವಾಗಿ ಇಲ್ಲಸಲ್ಲದ ಸುಳ್ಳುಗಳನ್ನು ತುಂಬಿ, ಶಸ್ತ್ರಗಳ ಸಹಿತ ವಾಪಸ್ಸು ಕಳುಹಿಸಿದರು. ಭಾರತದಲ್ಲಿ ಅಶಾಂತಿ ಸೃಷ್ಟಿಸುವುದೊಂದೇ ಅವರ ಉದ್ದೇಶವಾಗಿತ್ತು. ಪಾಕಿಸ್ತಾನದ ಪರ ಘೋಷಣೆ ಕೂಗದಿದ್ದರೆ ರೇಷನ್ ಸಿಗುವುದೂ ಕಷ್ಟ ಎನ್ನುವಂತಹ ದುಃಸ್ಥಿತಿ ಸೃಷ್ಟಿಸಿದರು. ಆದರೆ ನರೇಂದ್ರ ಮೋದಿ ಅವರು 2ನೇ ಬಾರಿ ಪ್ರಧಾನಿಯಾದಾಗ ಕಾಶ್ಮೀರಕ್ಕಿದ್ದ ವಿಶೇಷ ಆರ್ಟಿಕಲ್ 370 ಅನ್ನು ರದ್ದುಪಡಿಸಿದರು. ಗಟ್ಟಿ ಸರ್ಕಾರವಾದ್ದರಿಂದ ಕಲ್ಲು ಎಸೆದ ಸಣ್ಣ ಪ್ರಕರಣವೂ ನಡೆಯಲಿಲ್ಲ. ಕಾಶ್ಮೀರದ ಜನ 'ಹರ್ ಘರ್ ತಿರಂಗ್' ಅಭಿಯಾನ ಆಚರಿಸಲು ಉತ್ಸುಕರಾಗಿದ್ದಾರೆ. ಭಯೋತ್ಪಾದಕರನ್ನು ಹುಡುಕಿ ಹತ್ಯೆ ಮಾಡಲಾಗುತ್ತಿದೆ. ನಾವು ಭಾರತದೊಂದಿಗೆ ಇದ್ದೇವೆ ಎನ್ನುವ ಭಾವನೆ ಜನರಲ್ಲಿ ಮೂಡಿದೆ. ಕಾಶ್ಮೀರ ಬದಲಾಗುತ್ತಿದೆ ಎಂದು ತಿಳಿಸಿದರು.

ಶಾರದಾವಿಲಾಸ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪ್ರೊ.ಎಂ.ನಟರಾಜ್ ಅವರು ಪುಸ್ತಕ ಕುರಿತು ಮಾತನಾಡಿದರು.

ಜನರಲ್ ಆಫೀಸರ್ ಕಮಾಂಡಿಂಗ್ ಇನ್ ಚೀಫ್(ನಿವೃತ್ತ) ಲೆಫ್ಟಿನೆಂಟ್ ಜನರಲ್ ಪಿ.ಸಿ.ತಿಮ್ಮಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾರ್ಗಿಲ್ ವೀರ ಕ್ಯಾಪ್ಟನ್ ನವೀನ್ ನಾಗಪ್ಪ ಇಂಡಿಯನ್ ಏರ್‌ಫೋರ್ಸ್ ನಿವೃತ್ತ ಗ್ರೂಪ್ ಕ್ಯಾಪ್ಟನ್ ಡಾ.ವಿನಯ್ ವಿಠಲ್, ಪತ್ರಕರ್ತ ರವೀಂದ್ರ ಜೋಶಿ, ಲೇಖಕ ಎಸ್. ಉಮೇಶ್, ಧಾತ್ರಿ ಪ್ರಕಾಶನದ ಬೃಂದಾ ಉಮೇಶ್ ಮತ್ತಿತರರು ಉಪಸ್ಥಿತರಿದ್ದರು.

ಆತ್ಮಸ್ಥೈರ್ಯ ಕುಗ್ಗದಿರಲಿ ಎಂದು ನಾವು ಕಣ್ಣೀರು ಹಾಕಲ್ಲ ಅಷ್ಟೇ...!

ಕಣ್ಮುಂದೆ ಸಹಪಾಠಿಗಳ ಕಳೆದುಕೊಂಡ ಕಾರ್ಗಿಲ್ ವೀರನ ಮನಕರಗುವ ಮಾತು...

ಮೈಸೂರು: ಕಾರ್ಗಿಲ್ ಯುದ್ಧದಲ್ಲಿ ಹೋರಾಡಿ, ಸಾವಿನ ಕದ ತಟ್ಟಿ ಬದುಕುಳಿದು ಬಂದಿರುವ ಕ್ಯಾಪ್ಟನ್ ನವೀನ್ ನಾಗಪ್ಪ ಅವರು, 1999ರ ಯುದ್ಧ ಸನ್ನಿವೇಶವನ್ನು ಸಂಕ್ಷಿಪ್ತವಾಗಿ ಕಣ್ಣಿಗೆ ಕಟ್ಟಿದರು. ತಮ್ಮ ಓದು, ಸೈನ್ಯ ಸೇರಿದ್ದು, ಸ್ಥಳ ನಿಯೋಜನೆ, ಅಲ್ಲಿನ ವ್ಯವಸ್ಥೆ, ಹೋರಾಟ ಹೀಗೆ ಎಲ್ಲವನ್ನೂ ಮೆಲುಕು ಹಾಕಿದ ಅವರು, ಸೇನೆಗೆ ಸೇರುವುದು ಉದ್ಯೋಗ ಅಥವಾ ವೇತನಕ್ಕಾಗಿ ಅಲ್ಲ, ದೇಶಸೇವೆಯ ಮನೋಭಾವದಿಂದ. ಮೆಕ್ಯಾನಿಕಲ್ ಇಂಜಿನಿಯರಿಂಗ್ ಮುಗಿಸಿದ ನಾನೂ ಕೂಡ ಇದೇ ಭಾವನೆಯಿಂದ ಸೇನೆ ಸೇರಿದ್ದು. 1999ರ ಕಾರ್ಗಿಲ್ ಯುದ್ಧದಲ್ಲಿ ಮೊದಲಿಗೆ ಮಾಹಿತಿ ಸಂಗ್ರಹಿಸಲು ಹೋಗಿದ್ದ ನಮ್ಮ ಐವರು ಗುಪ್ತಚರ ಸೈನಿಕರನ್ನು, ಪಾಕಿಸ್ತಾನದ ಸೈನಿಕರು ಸೆರೆ ಹಿಡಿದು 21 ದಿನದ ನಂತರ ಅತ್ಯಂತ ಅಮಾನುಷವಾಗಿ ಕೊಂದರು. ನಾನು ಮತ್ತೆ ಶ್ಯಾಮ್‌ಸಿಂಗ್ ಜೊತೆ 120 ಜವಾನ್ ತಂಡ 5140 ಹಾಗೂ 4875 ಪಾಯಿಂಟ್ ವಶಪಡಿಸಿಕೊಳ್ಳಬೇಕಿತ್ತು. 10 ಜನರ ತಂಡ ಮಾಡಿಕೊಂಡು ಮೂರು ಬಂಕರ್‌ಗಳ ಮೇಲೆ ದಾಳಿ ನಡೆಸಿದೆವು. ಆ ಸಂದರ್ಭದಲ್ಲಿ ನನ್ನ ಜೊತೆಯಾಗಿದ್ದ ಶ್ಯಾಮ್‌ಸಿಂಗ್ ಅವರನ್ನು ಕಳೆದುಕೊಂಡೆವು. ಸೈನಿಕರು ಆತ್ಮಸ್ಥೈರ್ಯ ಕಳೆದುಕೊಳ್ಳುತ್ತಾರೆ ಎಂದು ಕಣ್ಣೀರು ಹಾಕಲಿಲ್ಲ. ನಂತರ ಕ್ಯಾಪ್ಟನ್ ವಿಕ್ರಂ ಬಾತ್ರ ಅವರು ಜೊತೆ ಯಾದರು. ಆಗ ಪಾಕಿಸ್ತಾನದವರು ಎಸೆದ ಹ್ಯಾಂಡ್ ಗ್ರೇಡ್ ನನ್ನ ಕಾಲು ಬಳಿ ಬಿತ್ತು ಅದನ್ನು ತೆಗೆದು ವಾಪಸ್ಸು ಎಸೆಯುವಾಗ ಬಂಡೆಗೆ ತಾಕಿ ವಾಪಸ್ಸು ನನ್ನ ಕಾಲು ಬಳಿಗೆ ಬಂದಿತು. ನಾನು ಬಂಡೆ ಮತ್ತು ಬಂಕರ್ ನಡುವೆ ಜಿಗಿದೆ. ಆಗ ಬದುಕುಳಿಯುವುದಿಲ್ಲ ಎಂದೆನಿಸಿತ್ತು. ನನ್ನನ್ನು ಹೆಲಿಕಾಪ್ಟರ್‌ನಲ್ಲಿ ಶ್ರೀನಗರದ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ನಮ್ಮ ತಂಡ ಗುರಿ ಸಾಧಿಸಿ, ಭಾರತದ ಬಾವುಟ ಹಾರಿಸಿದ್ದನ್ನು ನರ್ಸಿಂಗ್ ಅಸಿಸ್ಟೆಂಟ್ ತಿಳಿಸಿದರು. ಎದ್ದು ಕುಳಿತು ಸೆಲ್ಯೂಟ್ ಮಾಡಿದೆ, ಆದರೆ ವಿಕ್ರಂ ಬಾತ್ರ ಅವರಿಲ್ಲ ಎನ್ನುವುದನ್ನು ಕೇಳಿ ಆಘಾತವಾಯಿತು ಎಂದು ಅಂದಿನ ಭಯಾನಕತೆಯ ಚಿತ್ರಣ ಮುಂದಿಟ್ಟರು.

ಸಾಮಾನ್ಯ ಸಭೆಯಲ್ಲಿ ಅಕ್ರಮ ವಾಣಿಜ್ಯ ಮಳಿಗೆ ವಿಷಯ ಪ್ರಸ್ತಾಪಿಸಿದ

ಬಿಜೆಪಿ ಪುರಸಭಾ ಸದಸ್ಯನ ಮೇಲೆ ಹಲ್ಲೆ; ಆರೋಪ

● ಕಾಂಗ್ರೆಸ್ ಸದಸ್ಯ ಸೇರಿ 8 ಮಂದಿ ವಿರುದ್ಧ ಕೇಸ್ ● ಆರೋಪಿಗಳ ಬಂಧನಕ್ಕೆ ಭಾರತೀಶಂಕರ್ ಆಗ್ರಹ

ತಿ.ನರಸೀಪುರ, ಆ.5– ಹುಲ್ಲಹಳ್ಳಿ ನಾಲೆ ಏರಿ ಮೇಲೆ ಅಕ್ರಮವಾಗಿ ವಾಣಿಜ್ಯ ಮಳಿಗೆ ನಿರ್ಮಿಸಿರುವ ಬಗ್ಗೆ ಪುರಸಭೆ ಸಾಮಾನ್ಯ ಸಭೆಯಲ್ಲಿ ಪ್ರಸ್ತಾಪ ಮಾಡಿದ ಬಿಜೆಪಿ ಸದಸ್ಯನ ಮೇಲೆ ಹಲ್ಲೆ ನಡೆಸಿ, ಕೊಲೆ ಬೆದರಿಕೆ ಹಾಕಲಾಗಿದೆ ಎಂದು ಪಟ್ಟಣದ ಪೊಲೀಸ್ ಠಾಣೆಯಲ್ಲಿ ಕಾಂಗ್ರೆಸ್ ಸದಸ್ಯ ಸೇರಿದಂತೆ 8 ಮಂದಿ ವಿರುದ್ಧ ಪ್ರಕರಣ ದಾಖಲಾಗಿದೆ.

ಕಳೆದ ಜು.22ರಂದು ನಡೆದ ಪುರಸಭೆ ಸಾಮಾನ್ಯ ಸಭೆಯಲ್ಲಿ ಬಿಜೆಪಿ ಸದಸ್ಯ ಎಸ್.ಕೆ.ಕಿರಣ್ ಅವರು ಕಾಂಗ್ರೆಸ್ ಸದಸ್ಯ ಟಿ.ಎಂ.ನಂಜುಂಡಸ್ವಾಮಿ ಹುಲ್ಲಹಳ್ಳಿ ನಾಲೆ ಏರಿ ಮೇಲೆ ಅಕ್ರಮವಾಗಿ ವಾಣಿಜ್ಯ ಮಳಿಗೆ ನಿರ್ಮಿಸಿದ್ದಾರೆ ಎಂದು ವಿಷಯ ಪ್ರಸ್ತಾಪಿಸಿ, ನಿರ್ಮಾಣ ಮಾಡಿರುವ ಕಟ್ಟಡ ತೆರವುಗೊಳಿಸುವಂತೆ ಒತ್ತಾಯಿಸಿದ್ದರು. ಈ ಸಂಬಂಧ ಮಾನನಷ್ಟ ಮೊಕದ್ದಮೆ ದಾಖಲಿಸುವುದಾಗಿ ಕಿರಣ್ ಅವರಿಗೆ ನಂಜುಂಡಸ್ವಾಮಿ ತಿಳುವಳಿಕೆ ನೋಟೀಸ್ ನೀಡಿದ್ದಾರೆ ಎನ್ನಲಾಗಿದೆ. ಈ ಮಧ್ಯೆ ಗುರುವಾರ ಸಂಜೆ ಲಿಂಕ್ ರಸ್ತೆಯಲ್ಲಿರುವ ತಮ್ಮ ಅಂಗಡಿ(ಪಾರ್ವತಿ ಸ್ಟೋರ್ಸ್)ಯಲ್ಲಿ ವ್ಯಾಪಾರ ಮಾಡುತ್ತಿದ್ದ ಎಸ್.ಕೆ.ಕಿರಣ್ ಮೇಲೆ ಕಾಂಗ್ರೆಸ್ ಸದಸ್ಯ ನಂಜುಂಡಸ್ವಾಮಿ ಕಡೆಯವರಾದ ಬೂದಳ್ಳಿ ವಿನೋದ, ಶಾಂತ, ಅಡುಗೆ ಮಾದೇವ ಹಾಗೂ ಇನ್ನಿತರೆ ನಾಲ್ವರು ಹಲ್ಲೆ ನಡೆಸಿರುತ್ತಾರೆ ಹಾಗೂ ಮತ್ತೆ ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ಎಸ್.ಕೆ.ಕಿರಣ್ ತಿ.ನರಸೀಪುರ ಟೌನ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.


ತಿ.ನರಸೀಪುರದ ಬಿಜೆಪಿ ಕಚೇರಿಯಲ್ಲಿ ಮಾಜಿ ಶಾಸಕ ಡಾ.ಎನ್.ಎಲ್.ಭಾರತೀಶಂಕರ್ ಮಾತನಾಡಿದರು.

ಬಂಧನಕ್ಕೆ ಆಗ್ರಹ: ಪುರಸಭಾ ಸದಸ್ಯರೊಬ್ಬರ ಮೇಲೆ ಹಲ್ಲೆ ನಡೆಸಿರುವ ಕಿಡಿಗೇಡಿಗಳನ್ನು ಬಂಧಿಸುವಲ್ಲಿ ಪೊಲೀಸರು ಮುಂದಾಗಿಲ್ಲ ಎಂದು ಮಾಜಿ ಶಾಸಕ ಡಾ.ಎನ್.ಎಲ್.ಭಾರತೀ ಶಂಕರ್ ಆರೋಪಿಸಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜನಪ್ರತಿನಿಧಿಯೊಬ್ಬರ ಮೇಲೆ ಕಿಡಿಗೇಡಿಗಳು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದು, ಠಾಣೆಯಲ್ಲಿ ದೂರು ದಾಖಲಾಗಿದ್ದರೂ ಈವರೆಗೂ ಆರೋಪಿಗಳ ಬಂಧನವಾಗಿಲ್ಲ. ಕೂಡಲೇ ಆರೋಪಿಗಳನ್ನು ಬಂಧಿಸುವಂತೆ ಒತ್ತಾಯಿಸಿದರು.

ತಾಲೂಕಿನಲ್ಲಿ ಲ್ಯಾಂಡ್ ಮಾಫಿಯ ಸಕ್ರಿಯವಾಗಿದೆ. ಅಕ್ರಮ ಒತ್ತುವರಿಯನ್ನು ಬಿಜೆಪಿ ಸದಸ್ಯ ಕಿರಣ್ ಬಯಲಿಗೆಳೆದ ಹಿನ್ನೆಲೆಯಲ್ಲಿ ಅವರ ಮೇಲೆ ಹಲ್ಲೆ ಮಾಡಲಾಗಿದೆ ಎಂದ ಅವರು, ಲ್ಯಾಂಡ್ ಮಾಫಿಯಾ ಹಾಗೂ ಗೂಂಡಾಗಿರಿ ಮಾಡುವವರನ್ನು ಮೊಳಕೆಯಲ್ಲೇ ಚಿವುಟದಿದ್ದರೆ ಪಟ್ಟಣದಲ್ಲಿ ಮಾಫಿಯಾ ಘರ್ಷಣೆಗೆ ದಾರಿ ಮಾಡಿಕೊಟ್ಟಂತಾಗುತ್ತದೆ ಎಂದರು.

ಪಟ್ಟಣದಲ್ಲಿ ಸರ್ಕಾರಿ ಜಾಗಗಳ ಅಕ್ರಮ ಒತ್ತುವರಿ, ಆಸ್ತಿ ಕಬಳಿಕೆ ಪ್ರಕರಣ ಹೆಚ್ಚುತ್ತಿವೆ. ತಹಶೀಲ್ದಾರ್‌ರಿಗೆ ಪುರಸಭಾ ಆಡಳಿತದ ಮೇಲೆ ಹಕ್ಕಿದ್ದು, ಸರ್ಕಾರಿ ಜಾಗದ ಹದ್ದುಬಸ್ತು ಮಾಡಿಸಿ, ಸರ್ವೆ ಮಾಡಿಸುವ ಮೂಲಕ ಒತ್ತುವರಿ ಜಾಗವನ್ನು ವಶಕ್ಕೆ ಪಡೆಯಬೇಕು. ಇಲ್ಲದಿದ್ದಲ್ಲಿ ಮುಂದಾಗುವ ಅನಾಹುತಗಳಿಗೆ ತಹಶೀಲ್ದಾರ್‌ರೇ ನೇರ ಹೊಣೆ ಎಂದು ಎಚ್ಚರಿಸಿದರು.

ಬಿಜೆಪಿ ಹಿರಿಯ ಮುಖಂಡ ತೋಟದಪ್ಪ ಬಸವರಾಜು ಮಾತನಾಡಿ, ಪಟ್ಟಣದಲ್ಲಿ ಬಿಜೆಪಿ ಸದಸ್ಯರ ಮೇಲೆ ಹಲ್ಲೆ ನಡೆದಿದೆ. ಹಲ್ಲೆ ನಡೆಸಿದವರೂ ಮತ್ತು ಹಲ್ಲೆಗೆ ಕುಮ್ಮಕ್ಕು ನೀಡಿದವರನ್ನು ಬಂಧಿಸುವ ಮೂಲಕ ಮುಂದೆ ಪಕ್ಷ ಪಕ್ಷಗಳ ನಡುವೆ ನಡೆಯಬಹುದಾದ ಸಂಘರ್ಷವನ್ನು ತಪ್ಪಿಸಲು ಪೊಲೀಸರು ಮುಂದಾಗಬೇಕಿದೆ ಎಂದರು.

> ಬಿಜೆಪಿ ಪುರಸಭಾ ಸದಸ್ಯ ಎಸ್.ಕೆ.ಕಿರಣ್ ಮೇಲಿನ ಹಲ್ಲೆ ವಿಚಾರವನ್ನು ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೆ ತರಲಾಗಿದ್ದು, ಎಸ್ಪಿ ಅವರೊಂದಿಗೆ ಮಾತನಾಡುವುದಾಗಿ ಅವರು ತಿಳಿಸಿದ್ದಾರೆ. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಆರೋಪಿಗಳನ್ನು ಬಂಧಿಸಬೇಕು. ಅಲ್ಲದೇ ಅಕ್ರಮ ಆಸ್ತಿ ಒತ್ತುವರಿ ಬಗ್ಗೆ ಸಮರ್ಪಕ ತನಿಖೆಯಾಗಬೇಕು.
> -ಕೆ.ಸಿ.ಲೋಕೇಶ್ ನಾಯಕ್, ಕ್ಷೇತ್ರ ಬಿಜೆಪಿ ಅಧ್ಯಕ್ಷ

ಕ್ಷೇತ್ರ ಬಿಜೆಪಿ ಮಾಜಿ ಅಧ್ಯಕ್ಷ ಪರಶಿವಮೂರ್ತಿ, ಜಿಲ್ಲಾ ಉಪಾಧ್ಯಕ್ಷ ಕರೋಹಟ್ಟಿ ಬಸವರಾಜು, ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಮಹದೇವಯ್ಯ, ಪುರಸಭಾ ಸದಸ್ಯರಾದ ಅಕ್ಕಿ ನಂಜುಂಡಸ್ವಾಮಿ, ಎನ್.ಲೋಕೇಶ್, ಎಸ್‌ಸಿ ಮೋರ್ಚಾ ಅಧ್ಯಕ್ಷ ಶಿವಕುಮಾರ್, ಪಿಎಸಿಎಸ್ ಮಾಜಿ ಅಧ್ಯಕ್ಷ ಹೆಳವರಹುಂಡಿ ನಟರಾಜು, ಹಿಂದುಳಿದ ವರ್ಗಗಳ ಅಧ್ಯಕ್ಷ ಗೂಳಿ ಮಹೇಶ್, ಎಂಸಿಡಿಸಿಸಿ ಬ್ಯಾಂಕ್ ಜಿಲ್ಲಾ ಉಪಾಧ್ಯಕ್ಷ ಸದಾನಂದ ದಯಾನಂದ್ ಪಟೇಲ್, ಯುವ ಮೋರ್ಚಾ ಅಧ್ಯಕ್ಷ ಶಿವು, ಕಿರಗಸೂರು ಮಹಾದೇವಸ್ವಾಮಿ, ಮಿಥುನ್, ನಂದಕುಮಾರ್, ಚೌಹಳ್ಳಿ ಸಿದ್ದರಾಜು ಮತ್ತಿತರರಿದ್ದರು.

ಸಿಸಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ



ಬೆಟ್ಟದಪುರ, ಆ.5– ಇಲ್ಲಿಗೆ ಸಮೀಪದ ಆವರ್ತಿ ಗ್ರಾಮದಲ್ಲಿ 30 ಲಕ್ಷ ರೂ. ವೆಚ್ಚದ ಸಿಸಿ ರಸ್ತೆ ಕಾಮಗಾರಿಗೆ ಶಾಸಕ ಕೆ.ಮಹದೇವ್ ಗುದ್ದಲಿ ಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ತಾಲೂಕಿನಲ್ಲಿ ಸುರಿಯುತ್ತಿರುವ ಭಾರೀ ಮಳೆಗೆ ರಸ್ತೆಗಳು ಹಾಳಾಗಿದ್ದು, ಮನೆಗಳು ಶಿಥಿಲಗೊಂಡು ಕುಸಿದು ಬೀಳುತ್ತಿವೆ. ಹೀಗಾಗಿ ಸರ್ಕಾರದಿಂದ ಹೆಚ್ಚಿನ ಅನುದಾನ ತಂದು ಫಲಾನುಭವಿಗಳ ನೆರವಿಗೆ ನಿಲ್ಲುವುದಾಗಿ ಅವರು ತಿಳಿಸಿದರು.

ಮಳೆಯಿಂದಾಗಿ ತಾಲೂಕಿನಲ್ಲಿ ಅಪಾರ ನಷ್ಟ ಸಂಭವಿಸಿದ್ದು, ಜಿಲ್ಲಾಧಿಕಾರಿಗಳು ವಿವಿಧ ಗ್ರಾಮಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಅಲ್ಲದೇ ಈ ಸಂಬಂಧ ಸರ್ಕಾರಕ್ಕೆ ವರದಿ ಸಲ್ಲಿಸಿ ಸೂಕ್ತ ಪರಿಹಾರ ಒದಗಿಸಿಕೊಡುವುದಾಗಿ ಭರವಸೆ ನೀಡಿದ್ದಾರೆ ಎಂದರು. ಇದೇ ವೇಳೆ ಗ್ರಾಮದಲ್ಲಿ ಸುಮಾರು 80 ಲಕ್ಷ ರೂ. ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗಿದೆ ಎಂದು ಶಾಸಕರು ತಿಳಿಸಿದರು.

ಕಾರ್ಯಕ್ರಮದಲ್ಲಿ ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಆವರ್ತಿ ಗ್ರಾಪಂ ಅಧ್ಯಕ್ಷ ಶಿವು, ಕೊಪ್ಪ ಗ್ರಾಪಂ ಅಧ್ಯಕ್ಷ ರೇಣುಕಾಸ್ವಾಮಿ, ಸದಸ್ಯರಾದ ಶಿವಕುಮಾರ್, ಮೋಹನ್ ಕುಮಾರ್, ಗ್ರಾಪಂ ಮಾಜಿ ಸದಸ್ಯ ಹೇಮಂತ್ ಕುಮಾರ್, ಧರ್ಮಣ್ಣ, ತಾಪಂ ಮಾಜಿ ಸದಸ್ಯ ಸೋಮಶೇಖರ್, ಪಿಡಿಓ ಅಬೀಬ್ ಅಹ್ಮದ್, ಹಾರಂಗಿ ನೀರಾವರಿ ಇಲಾಖೆ ಅಧಿಕಾರಿಗಳು ಹಾಗೂ ಸಾರ್ವಜನಿಕರು ಹಾಜರಿದ್ದರು.

ಹೇರಗಳ್ಳಿ ಡೈರಿ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ



ಹಂಪಾಪುರ, ಆ.5– ಹೆಚ್.ಡಿ.ಕೋಟೆ ತಾಲೂಕಿನ ಹೇರಗಳ್ಳಿ ಡೈರಿ ಅಧ್ಯಕ್ಷರಾಗಿ ಸೋಮೇಗೌಡ, ಉಪಾಧ್ಯಕ್ಷರಾಗಿ ಚಿಕ್ಕಪೋತಾಬೋವಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗ್ರಾಪಂ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ, ಉಪಾಧ್ಯಕ್ಷರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ನಿರ್ದೇಶಕರಾಗಿ ಜೆ.ರಾಜಣ್ಣ, ಹೆಚ್.ಎಸ್.ಬಸವರಾಜು, ಮಂಜುಳ, ಸುರೇಶ್, ಮಂಜುಳ, ಜೆ.ಲೋಕೇಶ, ಜಗದೀಶ, ಸಿದ್ದರಾಮೇಗೌಡ ಆಯ್ಕೆಯಾಗಿದ್ದಾರೆ. ಗ್ರಾಪಂ ಮಾಜಿ ಸದಸ್ಯರಾದ ಸಿದ್ದಲಿಂಗೇಗೌಡ, ಗ್ರಾಮದ ಮುಖಂಡರು, ಯಜಮಾನರು, ಹಾಲು ಉತ್ಪಾದಕರು ಮತ್ತಿತರರಿದ್ದರು.

ವಿಪಕ್ಷ ನಾಯಕ ಸಿದ್ದರಾಮಯ್ಯ ಹುಟ್ಟುಹಬ್ಬ ಹಿನ್ನೆಲೆ

ನಾಳೆ ಅಂತರರಾಜ್ಯ ಡರ್ಟ್ ಬೈಕ್ ರೇಸ್

ನಂಜನಗೂಡು, ಆ.5– ವಿಪಕ್ಷ ನಾಯಕ ಸಿದ್ದರಾಮಯ್ಯ ಅವರ 75ನೇ ಹುಟ್ಟುಹಬ್ಬದ ಅಂಗವಾಗಿ ಆ.7ರಂದು ನಂಜನಗೂಡು ಫ್ರೆಂಡ್ಸ್ ಡರ್ಟ್ ಬೈಕ್ ರೇಸ್ ಅಸೋಸಿಯೇಷನ್ ವತಿಯಿಂದ ಅಡಕನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಅಂತರರಾಜ್ಯ ಡರ್ಟ್ ಬೈಕ್ ರೇಸ್ ಆಯೋಜಿಸಲಾಗಿದೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ. ಶಂಕರ್ ಹಾಗೂ ಸಮಿತಿ ಅಧ್ಯಕ್ಷ ಪರ್ವಿಜ್ ತಿಳಿಸಿದರು.

ಬೆಳಗ್ಗೆ 9.30 ರಿಂದ ಸಂಜೆ 5.30 ರವರೆಗೆ ನಡೆಯುವ ಬೈಕ್‌ರೇಸ್ ಅನ್ನು ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಮಾಜಿ ಶಾಸಕರಾದ ಕಳಲೆ ಕೇಶವಮೂರ್ತಿ ಭಾಗವಹಿಸಲಿದ್ದಾರೆ. ಸಂಜೆ ನಡೆಯುವ ಬೈಕ್‌ರೇಸ್ ಸಮಾರೋಪ ಸಮಾರಂಭವನ್ನು ಉದ್ಘಾಟಿಸುವ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು, ವಿಜೇತರಿಗೆ ಬಹುಮಾನ ವಿತರಿಸಲಿದ್ದಾರೆ. ಸಭೆ ಅಧ್ಯಕ್ಷತೆಯನ್ನು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ವಿವಿಧ ಹಂತದ ಜನಪ್ರತಿನಿಧಿಗಳು, ಪಕ್ಷದ ಮುಖಂಡರು ಭಾಗವಹಿಸಲಿದ್ದಾರೆ. ಸಾರ್ವಜನಿಕರು ಬೈಕ್ ರೇಸ್‌ಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಪ್ರಕಟಣೆಯಲ್ಲಿ ಕೋರಿದ್ದಾರೆ.

ಮೊಟ್ಟೆ ವಿತರಣೆಯಲ್ಲಿ ತಾರತಮ್ಯ ಬೇಡ



ಹಿರೀಕ್ಯಾತನಹಳ್ಳಿ, ಆ.5– ಪ್ರೌಢಶಾಲೆಯಲ್ಲಿ ಮೊಟ್ಟೆ ವಿತರಣೆಯಲ್ಲಿ ತಾರತಮ್ಯ ಹೋಗಲಾಡಿಸುವುದು ಸೂಕ್ತವೆಂದು ಗ್ರಾಪಂ ಅಧ್ಯಕ್ಷ ಜವರೇಗೌಡ ತಿಳಿಸಿದ್ದಾರೆ.

ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ 8ನೇ ತರಗತಿ ವಿದ್ಯಾರ್ಥಿಗಳಿಗೆ ಪ್ರಧಾನ ಮಂತ್ರಿ ಪೋಷಣ್ ಶಕ್ತಿ ನಿರ್ಮಾಣ್ ಯೋಜನೆಯಡಿ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟದ ಜೊತೆಗೆ ಪೌಷ್ಟಿಕ ಆಹಾರವಾದ ಬಾಳೆಹಣ್ಣು, ಮೊಟ್ಟೆ ಹಾಗೂ ಕಡಲೆ ಮಿಠಾಯಿಗಳನ್ನು ವಿತರಿಸಿ ಮಾತನಾಡಿದ ಅವರು, ಪ್ರಾಥಮಿಕ ಶಾಲೆಗಳಲ್ಲಿ ಎಲ್ಲಾ ಮಕ್ಕಳಿಗೆ ಮೊಟ್ಟೆ ವಿತರಣೆಯಾಗುತ್ತದೆ. ಆದರೆ ಪ್ರೌಢಶಾಲೆಯ 3 ತರಗತಿಗಳಲ್ಲಿ ಕೇವಲ 8ನೇ ತರಗತಿ ಮಕ್ಕಳಿಗೆ ಮೊಟ್ಟೆ ನೀಡಿ ತಾರತಮ್ಯ ಮಾಡಲಾಗುತ್ತಿದೆ. ಮಕ್ಕಳು ಒಟ್ಟಾಗಿ ಕುಳಿತು ಊಟ ಮಾಡುವಾಗ ಮನಸ್ಸಿನಲ್ಲಿ ಕೊರಗು ಬರುತ್ತದೆ. ಆದ್ದರಿಂದ ಸರ್ಕಾರ ಕೂಡಲೇ ಎಸ್‌ಎಸ್‌ಎಲ್‌ಸಿವರೆಗಿನ ಎಲ್ಲಾ ಮಕ್ಕಳಿಗೂ ಮೊಟ್ಟೆ ವಿತರಿಸಬೇಕು ಎಂದರು. ಈ ವೇಳೆ ಎಸ್‌ಡಿಎಂಸಿ ಹರೀಶ್, ಮುಖ್ಯಶಿಕ್ಷಕ ಮಹೇಶ್, ಸಮಿತಿ ಸದಸ್ಯರಾದ ಹರೀಶ್ ನಾಗೇಂದ್ರ, ಭಾಗ್ಯ, ಕುಮಾರ್, ಜ್ಯೋತಿ, ಹಾಗೂ ಶಾಲಾ ಶಿಕ್ಷಕರು ಮಕ್ಕಳು ಹಾಜರಿದ್ದರು.

ಭಾರೀ ಮಳೆ: ಗೋಡೆ ಕುಸಿತ

ಮಲ್ಕುಂಡಿ, ಆ.5– ಕಳೆದ ಕೆಲ ದಿನಗಳಿಂದ ಸುರಿಯುತ್ತಿರುವ ಭಾರೀ ಮಳೆಯಿಂದ ಮನೆ ಗೋಡೆ ಕುಸಿದಿರುವ ಘಟನೆ ಇಲ್ಲಿಗೆ ಸಮೀಪದ ಎಂ. ಕೊಂಗಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರೈತ ಮುಖಂಡ ಜಗದೀಶ್ ಎಂಬುವರ ಮನೆ ಗೋಡೆ ಕುಸಿದು ಬಿದ್ದಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಸರ್ಕಾರ ಸೂಕ್ತ ಪರಿಹಾರ ನೀಡಬೇಕು ಎಂದು ರಾಜ್ಯ ರೈತ ಸಂಘದ ಹೋಬಳಿ ಅಧ್ಯಕ್ಷ ಜಗದೀಶ್ ಆಗ್ರಹಿಸಿದ್ದಾರೆ.





ಹೆಚ್.ಡಿ.ಕೋಟೆ ತಾಲೂಕಿನ ಕಂದಾಯ ಇಲಾಖೆಯಲ್ಲಿ 'ಡಿ' ಗ್ರೂಪ್ ನೌಕರರಾಗಿ ಸೇವೆ ಸಲ್ಲಿಸಿ ನಿವೃತ್ತಿಯಾದ ಕೃಷ್ಣ ಅವರನ್ನು ತಹಸೀಲ್ದಾರ್ ರತ್ನಾಂಬಿಕಾ ಮತ್ತು ಅಧಿಕಾರಿಗಳು ಅಭಿನಂದಿಸಿ ಬೀಳ್ಕೊಟ್ಟರು. ಈ ವೇಳೆ ಕೃಷ್ಣ ಅವರ ಕುಟುಂಬದ ಸದಸ್ಯರು, ಗ್ರೇಡ್ ಟು ತಹಸೀಲ್ದಾರ್ ಸಣ್ಣರಾಮಪ್ಪ, ಆರ್‌ಐ ಮಹೇಶ್ ಇನ್ನಿತರರಿದ್ದರು.

ಇಟ್ನಾ ಗ್ರಾಪಂಗೆ ಗೀತಾ ಅಧ್ಯಕ್ಷೆ



ಸರಗೂರು, ಆ.5– ತಾಲೂಕಿನ ಇಟ್ನಾ ಗ್ರಾಪಂ ಅಧ್ಯಕ್ಷೆಯಾಗಿ ಗೀತಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಗುರುವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಗೀತಾ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿಯೂ ಆದ ತೋಟಗಾರಿಕಾ ಇಲಾಖೆ ಅಧಿಕಾರಿ ಶ್ರೀಧರ್‌ಮೂರ್ತಿ ಘೋಷಿಸಿದರು. ಈ ವೇಳೆ ಉಪಾಧ್ಯಕ್ಷ ಜಯರಾಂ, ಸದಸ್ಯರಾದ ಶಿವಮ್ಮ, ಗೌರಮ್ಮ, ಆರ್.ಕಾಳಿನಾಯಕ, ಪಿಡಿಓ ಚಿನ್ನಸ್ವಾಮಿ, ಬಿಲ್ ಕಲೆಕ್ಟರ್ ಮಧು, ಬಿ.ಬಸವರಾಜ್, ಅನಿಲ್ ನಾಯಕ, ಈರನಾಯಕ, ಎನ್.ಬಸವನಾಯಕ, ಚಾಮನಾಯಕ, ಚಿಕ್ಕಣ್ಣ, ಅಂಕಪ್ಪ, ಪಿ.ನಾಗೇಶ್, ಲಿಂಗರಾಜು, ಚಿನ್ನನಾಯಕ ಇನ್ನಿತರರಿದ್ದರು.

ದೇವರಾಯಶೆಟ್ಟಿಪುರದಲ್ಲಿ ಹುಲಿ ದಾಳಿಗೆ ಎತ್ತು ಬಲಿ

ಮಲ್ಕುಂಡಿ, ಆ.5– ಹುಲಿ ದಾಳಿಗೆ ಎತ್ತು ಬಲಿಯಾಗಿರುವ ಘಟನೆ ಇಲ್ಲಿಗೆ ಸಮೀಪದ ದೇವರಾಯಶೆಟ್ಟಿಪುರದಲ್ಲಿ ನಡೆದಿದೆ. ಗ್ರಾಮದ ಚಿಕ್ಕಣ್ಣ ಎಂಬುವರು ತಮ್ಮ ಜಮೀನಿನಲ್ಲಿ ಎತ್ತುಗಳನ್ನು ಮೇಯಲು ಬಿಟ್ಟಿದ್ದ ವೇಳೆ ಹುಲಿ ಏಕಾಏಕಿ ದಾಳಿ ಮಾಡಿ ಅರೆಬರೆ ತಿಂದು ಪರಾರಿಯಾಗಿದ್ದು, ಇದರಿಂದ ಸುಮಾರು 40 ಸಾವಿರ ರೂ. ನಷ್ಟ ಸಂಭವಿಸಿದೆ. ಕಷ್ಟಪಟ್ಟು ಸಾಕಿದ ಪ್ರಾಣಿಗಳು ಕಾಡು ಪ್ರಾಣಿಗಳ ಪಾಲಾದರೆ ರೈತರು ಜೀವನ ನಡೆಸುವುದೇ ದುಸ್ತರವಾಗುತ್ತದೆ. ಹುಲಿ ದಾಳಿಯಿಂದ ರೈತರು ಜಮೀನಿಗೆ ಹೋಗಿ ಕೆಲಸ ಮಾಡಲು ಭಯಗೊಂಡಿದ್ದಾರೆ. ಅರಣ್ಯ ಇಲಾಖೆ ತಕ್ಷಣ ಹುಲಿ ಸೆರೆ ಹಿಡಿಯಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.



ಮಳೆಗೆ ಮನೆ ಗೋಡೆ ಕುಸಿದು 3 ಹಸು ಸಾವು



ಬೈಲಕುಪ್ಪೆ, ಆ.5– ಭಾರೀ ಮಳೆಗೆ ಮನೆ ಗೋಡೆ ಕುಸಿದು 3 ಹಸುಗಳು ಬಲಿಯಾಗಿರುವ ಘಟನೆ ಪಿರಿಯಾಪಟ್ಟಣ ತಾಲೂಕಿನ ದೊಡ್ಡರವೆ ಗ್ರಾಮದಲ್ಲಿ ಗುರುವಾರ ರಾತ್ರಿ ನಡೆದಿದೆ.

ಗ್ರಾಮದ ನಿವಾಸಿ ಪ್ರೇಮ ನಾಗರಾಜ್ ಎಂಬುವರಿಗೆ ಸೇರಿದ ಮನೆ ಕುಸಿದು ಹಸುಗಳು ಸಾವನ್ನಪ್ಪಿವೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ತಾಪಂ ಮಾಜಿ ಸದಸ್ಯ ಐಲಾಪುರ ರಾಮು, ಸ್ಥಳಕ್ಕೆ ತಹಶೀಲ್ದಾರ್ ಭೇಟಿ ನೀಡಿ ಪರಿಶೀಲಿಸಿ ಸೂಕ್ತ ಪರಿಹಾರ ಒದಗಿಸಿಕೊಡಬೇಕು ಎಂದು ಆಗ್ರಹಿಸಿದರು.

ಹುಣಸೂರಲ್ಲಿ ಭಾರೀ ಮಳೆಗೆ 40 ಮನೆಗಳಿಗೆ ಹಾನಿ

ಕೊಚ್ಚಿ ಹೋದ ಬೆಳೆ, ಲಕ್ಷಾಂತರ ರೂ. ನಷ್ಟ

ಹುಣಸೂರು, ಆ.5– ಕಳೆದ 3 ದಿನಗಳಿಂದ ತಾಲೂಕಿನಾದ್ಯಂತ ಸುರಿಯುತ್ತಿರುವ ಬಿರುಗಾಳಿ, ಗುಡುಗು ಸಹಿತ ಮಳೆಗೆ ಹನಗೋಡು ಹೋಬಳಿ ಸೇರಿದಂತೆ ತಾಲೂಕಿನ ವಿವಿಧೆಡೆ 40ಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದೆ ಸಾಕಷ್ಟು ಬೆಳೆಯೂ ಮಳೆ ನೀರಿನಲ್ಲಿ ಕೊಚ್ಚಿ ಹೋಗಿದ್ದು, ಲಕ್ಷಾಂತರ ರೂ ನಷ್ಟ ಸಂಭವಿಸಿದೆ.

ನಗರದ ಕಲ್ಕುಣಿಕೆ ಹತ್ತಿ ಮರದ ಬೀದಿಯ ಲಕ್ಷ್ಮಣ್, ಬಿಳಿಕೆರೆ ಹೋಬಳಿಯ ಹಂದನಹಳ್ಳಿಯಲ್ಲಿ 2 ಮನೆಗಳಿಗೆ ಸಂಪೂರ್ಣ ಹಾನಿಯಾಗಿದೆ. ಹನಗೋಡು ಹೋಬಳಿಯ ನೇರಳಕುಪ್ಪೆ ಗ್ರಾಪಂ ಸದಸ್ಯ ರಂಗಯ್ಯ, ಹೆಗ್ಗಂದೂರಿನ ಬಸಪ್ಪರ ಪುತ್ರ ಗಣೇಶ ಹಾಗೂ ತುಂಡು ಹೆಬ್ಬಳ್ಳ ಗ್ರಾಮದ ಜಯಮ್ಮ ಸೋಮಣ್ಣರಿಗೆ ಸೇರಿದ ಮನೆ ಗಳು ಮೇಲ್ಛಾವಣಿ ಸಹಿತ ಬಿದ್ದು ಹೋಗಿದೆ. ರಾತ್ರಿ ಸುರಿದ ಮಳೆಗೆ ಮನೆಯಲ್ಲಿ ಮಲಗಿದ್ದ ವೇಳೆಯೇ ಮನೆ ಬಿದ್ದು ಹೋಗಿದ್ದು, ಮನೆಯವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಮನೆಯಲ್ಲಿದ್ದ ಬಟ್ಟೆ, ದವಸ ಧಾನ್ಯ ಪಾತ್ರೆ ಪದಾರ್ಥಗಳಿಗೆ ಹಾನಿಯಾಗಿದೆ.



ಬೆಳೆ ಹಾನಿ: ಉಡುವೇಪುರದ ರೈತ ರವಿ ಹುಚ್ಚೇಗೌಡರಿಗೆ ಸೇರಿದ ಜಮೀನಿನಲ್ಲಿ ಬೆಳೆದಿದ್ದ ಶುಂಠಿ ಬೆಳೆ, ಚನ್ನ ಸೋಗೆಯ ಮಹದೇವರಿಗೆ ಸೇರಿದ ತಂಬಾಕು ಬೆಳೆ ನೀರಿನಲ್ಲಿ ಕೊಚ್ಚಿ ಹೋಗಿದ್ದು, ಲಕ್ಷಾಂತರ ರೂ ನಷ್ಟ ಸಂಭವಿಸಿದೆ.

ಮನೆಯೊಳಗೆ ತುಂಬಿದ ಮಳೆ ನೀರು: ನಾಗರಹೊಳೆ ಉದ್ಯಾನವನದ ಹನಗೋಡು ಹೋಬಳಿ ಹೆಬ್ಬಳ್ಳ ತುಂಡು ಹೆಬ್ಬಳ್ಳ ಉಡುವೆಪುರ, ಹನಗೋಡು, ಕಾಳಬೂಚನಹಳ್ಳಿ, ನೇರಳೆಕುಪ್ಪೆ, ನೇಗತ್ತೂರು, ಶಿಂಡೇನಹಳ್ಳಿ, ಕೊಳವಿಗೆ ಗ್ರಾಮಗಳಲ್ಲೂ ಭಾರೀ ಮಳೆಯಾಗಿದ್ದು, ಮನೆಯೊಳಗೆ ತುಂಬಿದ್ದ ಮಳೆ ನೀರನ್ನು ರಾತ್ರಿಯಿಂದ ಬೆಳಗಿನ ಜಾವದವರೆಗೂ ಮನೆಯವರು ಹೊರ ಹಾಕುತ್ತಿದ್ದ ದೃಶ್ಯ ಸರ್ವೆ ಸಾಮಾನ್ಯವಾದಂತಿತ್ತು. ವಿಷಯ ತಿಳಿದ ಕಂದಾಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಮಹಜರ್ ನಡೆಸಿದ್ದಾರೆ.

ತಾಲೂಕಿನಲ್ಲಿ 3 ದಿನಗಳಿಂದ ಸುರಿಯುತ್ತಿರುವ ಮಳೆಗೆ 40 ಮನೆಗಳು ಬಿದ್ದು ಹೋಗಿರುವ ಬಗ್ಗೆ ಕಂದಾಯ ಇಲಾಖೆ ಅಧಿಕಾರಿಗಳಿಂದ ಪ್ರಾಥಮಿಕ ವರದಿ ಬಂದಿದ್ದು, ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಮಾಹಿತಿ ಕಲೆ ಹಾಕುತ್ತಿದ್ದಾರೆ. ಹಾನಿ ಪ್ರಮಾಣ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ ಎಂದು ತಹಸೀಲ್ದಾರ್ ಡಾ. ಅಶೋಕ್ ಮಾಹಿತಿ ನೀಡಿದರು.

ಶಿತ ಭಾದೆ ಭೀತಿ, ರೈತರ ಆತಂಕ: ಕಳೆದ ತಿಂಗಳು ಬಿದ್ದ ಮಳೆಯಿಂದ ತಂಬಾಕು ಶುಂಠಿ ಮತ್ತಿತರ ಬೆಳೆಗಳು ಶೀತ ಬಾಧೆಗೊಳಗಾಗಿತ್ತು. ಹಾಕಿದ್ದ ರಸಗೊಬ್ಬರ ನೀರು ಪಾಲಾಗಿತ್ತು. ಹೀಗಾಗಿ ರೈತರು ಮತ್ತೊಮ್ಮೆ ಗೊಬ್ಬರ ನೀಡಿದ್ದಾರೆ. ಇದೀಗ ಮತ್ತೆ ಮಳೆ ಆರಂಭವಾಗಿದ್ದು ಮುಂದುವರೆದಲ್ಲಿ ತಂಬಾಕು, ಶುಂಠಿ ಬೆಳೆ ಶೀತ ಬಾಧೆಯಿಂದ ಕೊಳೆಯುವ ಸ್ಥಿತಿ ತಲುಪಲಿದ್ದು ರೈತರು ಆತಂಕಕ್ಕೀಡಾಗಿದ್ದಾರೆ.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ವಿಕ್ರಾಂತ್ ರೋಣ (ಕ): ಬೆ.10.30ಕ್ಕೆ, ವಿಕ್ರಾಂತ್ ರೋಣ (3ಡಿ) (ಕ): ಮ.1.30ಕ್ಕೆ, ಸೀತಾರಾಮಂ (ತೆ): ಸಂ.4.20ಕ್ಕೆ, ಬುಲೆಟ್ ಟ್ರೇನ್ (ಇಂ): ರಾ.7.25ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 2	ಪಾಪ್ಪಂ (ಮ): ಬೆ.9.50ಕ್ಕೆ, ರಾ.10ಕ್ಕೆ, ಕಟೇರಿ (ತ): ಮ.1ಕ್ಕೆ, ಡಿಸಿ ಲೀಗ್ ಆಫ್ ಸೂಪರ್ ಪೆಟ್ (ಇಂ): ಮ.3.25ಕ್ಕೆ, ಸಂ.5.35ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 3	ಸೀತಾರಾಮಂ (ತೆ): ಬೆ.10.10ಕ್ಕೆ, ಸಂ.6.55ಕ್ಕೆ, ಕುರುತಿ ಆಟಂ (ತ): ಮ.1.15ಕ್ಕೆ, ಬುಲೆಟ್ ಟ್ರೇನ್ (ಇಂ): ಸಂ.4.15ಕ್ಕೆ, ಬಿಂಬಿಸಾರ (ತೆ): ರಾ.10.05ಕ್ಕೆ.
ಸ್ಕ್ರೀನ್ 4	ವಿಕ್ರಾಂತ್ ರೋಣ (3ಡಿ) (ಕ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.9.55ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ವಿಕ್ರಾಂತ್ ರೋಣ (3ಡಿ) (ಕ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಸೀತಾರಾಮಂ (ತೆ): ಬೆ.10.15ಕ್ಕೆ, ಸಂ.6.40ಕ್ಕೆ, ಡಿಸಿ ಲೀಗ್ ಆಫ್ ಸೂಪರ್ ಪೆಟ್ (ಇಂ): ಮ.1.35ಕ್ಕೆ, ಏಕ್ ವಿಲ್ಲನ್ ರಿಟರ್ನ್ಸ್ (ಹಿಂ): ಮ.3.55ಕ್ಕೆ, ಪಾಪ್ಪಂ (ಮ): ರಾ.10ಕ್ಕೆ.
ಸ್ಕ್ರೀನ್ 3	ಬುಲೆಟ್ ಟ್ರೇನ್ (ಇಂ): ಬೆ.10.10ಕ್ಕೆ, ಮ.3.30ಕ್ಕೆ, ಪೊಯ್ಕಲ್ ಕುತ್ತಿರೈ (ತ): ಮ.12.55ಕ್ಕೆ, ವಿಕ್ರಾಂತ್ ರೋಣ (ಕ): ಸಂ.6.15ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 4	ಡಿಸಿ ಲೀಗ್ ಆಫ್ ಸೂಪರ್ ಪೆಟ್ (ಇಂ): ಬೆ.11.45ಕ್ಕೆ, ರಾ.8.10ಕ್ಕೆ, ಬಿಂಬಿಸಾರ (ತೆ): ಮ.2.05ಕ್ಕೆ, ಕುರುತಿ ಆಟಂ (ತ): ಸಂ.5.05ಕ್ಕೆ, ಬುಲೆಟ್ ಟ್ರೇನ್ (ಇಂ): ರಾ.10.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821-2973519

ಸ್ಕ್ರೀನ್ 1	ಚೇಜ್ (ಕ): ಬೆ.10.45ಕ್ಕೆ, ಸಂ.4ಕ್ಕೆ, ಕರ್ಮಣ್ಯೇ ವಾಧಿಕಾರಸ್ತೆ (ಕ): ಮ.1.30ಕ್ಕೆ, ಪೆಟ್ರೋಮ್ಯಾಕ್ಸ್ (ಕ): ಸಂ.6.45ಕ್ಕೆ, ಮೈ ಡಿಯರ್ ಭೂತ್ (ತ): ರಾ.9.20ಕ್ಕೆ.
ಸ್ಕ್ರೀನ್ 2	ಪೆಟ್ರೋಮ್ಯಾಕ್ಸ್ (ಕ): ಬೆ.10.45ಕ್ಕೆ, ಮ.1.30ಕ್ಕೆ, ಗಾರ್ಗಿ (ಕ): ಸಂ.4.05ಕ್ಕೆ, ಬೆಂಕಿ (ಕ): ಸಂ.6.50ಕ್ಕೆ, ಲಡ್ಕಿ (ಹಿಂ): ರಾ.9.15ಕ್ಕೆ.
ಸ್ಕ್ರೀನ್ 3	ಗಾರ್ಗಿ (ಕ): ಮ.1.30ಕ್ಕೆ, 777 ಚಾರ್ಲಿ (ಕ): ರಾ.7.45ಕ್ಕೆ.
ಸ್ಕ್ರೀನ್ 4	ದಿ ವಾರಿಯರ್ (ತೆ): ಬೆ.10.30ಕ್ಕೆ, ಸಂ.6.20ಕ್ಕೆ, ರಾ.9.20ಕ್ಕೆ, ಬೆಂಕಿ (ಕ): ಮ.1.30ಕ್ಕೆ, ಜುಡಾ ಹೊಕೆ ಬೈ (ಹಿಂ): ಸಂ.4ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ವಿಕ್ರಾಂತ್ ರೋಣ (3ಡಿ) (ಕ): ಬೆ.8.50ಕ್ಕೆ, ಬೆ.9.50ಕ್ಕೆ, ಮ.12ಕ್ಕೆ, ಮ.1ಕ್ಕೆ, ಮ.3.10ಕ್ಕೆ, ಸಂ.4.10ಕ್ಕೆ, ಸಂ.6.20ಕ್ಕೆ, ರಾ.7.20ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ, ವಿಕ್ರಾಂತ್ ರೋಣ (ಕ): ಬೆ.9.40ಕ್ಕೆ, ಮ.12.50ಕ್ಕೆ, ಮ.3.55ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ, ವಿಕ್ರಾಂತ್ ರೋಣ (ಹಿಂ): ಬೆ.9.35ಕ್ಕೆ, ಮ.12.45ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಶಂಶೀರಾ (ಹಿಂ): ಮ.3.45ಕ್ಕೆ, ಏಕ್ ವಿಲ್ಲನ್ ರಿಟರ್ನ್ಸ್ (ಹಿಂ): ಬೆ.10.05ಕ್ಕೆ, ಮ.12.55ಕ್ಕೆ, ಸಂ.4ಕ್ಕೆ, ಸಂ.6.55ಕ್ಕೆ, ರಾ.9.45ಕ್ಕೆ, ಗುಲುಗುಲು (ತ): ಮ.3.45ಕ್ಕೆ, ರಾಮರಾವ್ ಆನ್ ಡ್ಯೂಟಿ (ತೆ): ಬೆ.9.10ಕ್ಕೆ, ಮ.12.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಪೆಟ್ರೋಮ್ಯಾಕ್ಸ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ವಿಕ್ರಾಂತ್ ರೋಣ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ವಿಕ್ರಾಂತ್ ರೋಣ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ತ್ರಿವಿಕ್ರಮ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಸೀತಾರಾಮಂ (ತೆ)	4 ಪ್ರದರ್ಶನಗಳು
ರಾಜ್‌ಕಮಲ್	
ಕುರುತಿ ಆಟಂ (ತ), ಕಟೇರಿ (ತ)	2 ಪ್ರದರ್ಶನಗಳು
ಸಂಗಂ	
ರಾಮರಾವ್ (ತೆ)	4 ಪ್ರದರ್ಶನಗಳು
ಲಿಡೋ	
ಕಟೇರಿ (ತ)	4 ಪ್ರದರ್ಶನಗಳು
ತಿಬ್ಬಾದೇವಿ	
ಪೆಟ್ರೋಮ್ಯಾಕ್ಸ್ (ಕ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಓ ಮೈ ಲವ್ (ಕ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು
ಪ್ರಭಾ	
ಬಿಂಬಿಸಾರ (ತೆ)	4 ಪ್ರದರ್ಶನಗಳು

ಮುಂಬರುವ ಚುನಾವಣೆಯಲ್ಲಿ 'ಕೈ'ಗೆ ಅಧಿಕಾರ: ವಿಶ್ವಾಸ



ತಿ.ನರಸೀಪುರ, ಆ.5– ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಸ್ಪಷ್ಟ ಬಹುಮತದೊಂದಿಗೆ ಅಧಿಕಾರ ಹಿಡಿಯುವುದು ಖಚಿತ ಎಂದು ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣದ ಶ್ರೀಮಹದೇಶ್ವರ ಕಲ್ಯಾಣ ಮಂಟಪದಲ್ಲಿರುವ ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹುಟ್ಟುಹಬ್ಬ ಅಂಗವಾಗಿ ದಾವಣಗೆರೆಯಲ್ಲಿ ನಡೆದ ಸಿದ್ದರಾಮೋತ್ಸವದಲ್ಲಿ ನೆರೆದಿದ್ದ ಜನಸಾಗರ ನೋಡಿದರೆ ರಾಜ್ಯದಲ್ಲಿ ಕಾಂಗ್ರೆಸ್ ಪರ ಅಲೆ ಎದ್ದಿದೆ ಎಂಬುದು ತಿಳಿಯುತ್ತದೆ. ಕಾರ್ಯಕ್ರಮದಲ್ಲಿ ರಾಜ್ಯ ಸೇರಿದಂತೆ ಹೊರ ರಾಜ್ಯದ ಲಕ್ಷಾಂತರ ಮಂದಿ ಸಿದ್ದರಾಮಯ್ಯನವರ ಅಭಿಮಾನಿಗಳು ಭಾಗವಹಿಸಿ ಸಿದ್ದರಾಮಯ್ಯನವರು ಬರೀ ವ್ಯಕ್ತಿಯಲ್ಲ ಒಂದು ಶಕ್ತಿ ಎಂಬುದನ್ನು ಸಾಬೀತುಪಡಿಸಿದ್ದಾರೆ. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತದೊಂದಿಗೆ ಅಧಿಕಾರಕ್ಕೆ ಬರಲಿದೆ ಎಂದರು.

ದಾವಣಗೆರೆಯಲ್ಲಿ ನಡೆದ ಕಾರ್ಯಕ್ರಮಕ್ಕೆ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರಾದ ಡಾ.ಯತೀಂದ್ರ ಸಿದ್ದರಾಮಯ್ಯ, ಹೆಚ್.ಪಿ.ಮಂಜುನಾಥ್, ಅನಿಲ್ ಚಿಕ್ಕಮಾದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಕಾಂಗ್ರೆಸ್ ಯುವ ಮುಖಂಡ ಸುನೀಲ್ ಬೋಸ್ ಸೇರಿದಂತೆ ಇನ್ನಿತರರ ಪರಿಶ್ರಮದಿಂದ ಮೈಸೂರು ಜಿಲ್ಲೆಯಿಂದ ಸರ್ಕಾರಿ, ಖಾಸಗಿ ಬಸ್‌ಗಳು ಸೇರಿದಂತೆ 400ಕ್ಕೂ ಹೆಚ್ಚು ಬಸ್ಸುಗಳು, 800ಕ್ಕೂ ಹೆಚ್ಚು ಟಿಟಿ ಹಾಗೂ ಮಿನಿ ಬಸ್‌ಗಳು ಹಾಗೂ ವಿವಿಧ ಕಾರುಗಳಲ್ಲಿ ಮುಖಂಡರು, ಕಾರ್ಯಕರ್ತರು ತೆರಳಿದ್ದರು ಎಂದರು.


ಸರಗೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ನಡೆದ ಹೋಬಳಿ ಮಟ್ಟದ ಕ್ರೀಡಾಕೂಟದ ಪಥಸಂಚಲನದಲ್ಲಿ ಭಾಗವಹಿಸಿದ್ದ ತಾಲೂಕಿನ ಮುಳ್ಳೂರು ಶಾಲೆ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆದಿದ್ದಾರೆ. ಈ ವೇಳೆ ಶಾಲೆ ಮುಖ್ಯಶಿಕ್ಷಕಿ ಹೆಚ್.ಬಿ. ಜ್ಯೋತಿ, ಸಹ ಶಿಕ್ಷಕರಾದ ಗೀತಾ, ಹೆಚ್.ಕೆ.ಸ್ವಾಮಿ, ಶಹೀಲಾ, ಗೀತಾ.ಹೆಚ್, ಎಂ.ನೇತ್ರಾ, ಅತಿಥಿ ಶಿಕ್ಷಕರಾದ ಶ್ರೀಕಂಠ, ಅಕ್ಕಮಹದೇವಮ್ಮ, ಸೌಂದರ್ಯ ಮಕ್ಕಳನ್ನು ಅಭಿನಂದಿಸಿದ್ದಾರೆ.

ಮೂರು ಖಾಸಗಿ ಬ್ಯಾಂಕ್‌ಗಳಲ್ಲಿ ಒಂದೇ ನಿವೇಶನ ಅಡಮಾನ ಮಾಡಿ ಸಾಲ ಪಡೆದ ನಾಲ್ವರ ವಿರುದ್ಧ ಕೇಸ್

ಮೈಸೂರು, ಆ.5–ಒಂದೇ ನಿವೇಶನವನ್ನು ಮೂರು ಖಾಸಗಿ ಬ್ಯಾಂಕ್‌ಗಳಿಗೆ ಅಡಮಾನ ಮಾಡಿ ಲಕ್ಷಾಂತರ ರೂ. ಸಾಲ ಪಡೆದಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ಪಡುವಾರಹಳ್ಳಿ (ವಿನಾಯಕ ನಗರ) ನಿವಾಸಿಗಳಾದ ಸುಂದರೇಶ್‌ಗೌಡ (55), ಪತ್ನಿ ಬಿ.ಕಲಾ (52), ಮಕ್ಕಳಾದ ಪುನೀತ್ ಸುಂದರ್ (35) ಮತ್ತು ಸುನೀತ್ ಸುಂದರ್ (32) ಆರೋಪಕ್ಕೆ ಗುರಿಯಾದವರಾಗಿದ್ದು, ಇವರು ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲಿರುವ ಗ್ರಾಜ್ಯುಯೇಟ್ ಕೋ–ಆಪರೇಟಿವ್ ಬ್ಯಾಂಕ್‌ನಲ್ಲಿ ಪಡುವಾರಹಳ್ಳಿ 3ನೇ ಮೇನ್, 7ನೇ ಕ್ರಾಸ್ ನಿವೇಶನ ಸಂಖ್ಯೆ 24ರ ದಾಖಲಾತಿಗಳನ್ನು ನೀಡಿ 2021ರ ಮಾ.3ರಂದು 50 ಲಕ್ಷ ರೂ. ಸಾಲ ಪಡೆದಿದ್ದಾರೆ ಎಂದು ಬ್ಯಾಂಕ್‌ನ ಪ್ರಭಾರ ಮ್ಯಾನೇಜರ್ ಎಚ್.ಎಸ್. ವೀಣಾ (45) ಕೆ.ಆರ್.ಠಾಣಾ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ಇದೇ ನಾಲ್ವರೂ ಆರೋಪಿಗಳು ಈ ಹಿಂದೆಯೂ ಸದರಿ ನಿವೇಶನದ ದಾಖಲಾತಿಗಳನ್ನು ನೀಡಿ ಶ್ರೀ ಕನ್ಯಕಾಪರಮೇಶ್ವರಿ ಬ್ಯಾಂಕ್ ಮತ್ತು ಎಂಸಿಡಿಸಿಸಿ ಬ್ಯಾಂಕ್ ಮಹಿಳಾ ಶಾಖೆಯಲ್ಲೂ ಸಾಲ ಪಡೆದು ಮೋಸ ಮಾಡಿದ್ದಾರೆ ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಭಾರತೀಯ ದಂಡ ಸಂಹಿತೆ 468, 471, 406, 420, 34ರಡಿ ಪ್ರಕರಣ ದಾಖಲಿಸಿಕೊಂಡಿರುವ ಕೆ.ಆರ್.ಠಾಣಾ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.



